ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
ಸೆಪ್ಟೆಂಬರ್ 2025 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:2, Pages:56
September - 2025, Price Rs. 20/-



## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
## 24-09-2025 ರಿಂದ 02-10-2025 ರ ವರೆಗೆ

**19-07-2025 ರಂದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಶ್ರೀ ನಾರಾ ಚಂದ್ರಬಾಬು ನಾಯುಡು ರವರು ತಿರುಪತಿ ಕಪಿಲತೀರ್ಥದ ಬಳಿಯಿರುವ ಶ್ರೀ ಕಪಿಲೇಶ್ವರ ಸ್ವಾಮಿಯವರ ದರ್ಶನ ಪಡೆದರು. ನಂತರ ಮುಖ್ಯ ಮಂತ್ರಿಗಳಿಗೆ ಆಲಯದ ಅರ್ಚಕರು ವೇದಾಶೀರ್ವಚನೆ ಮಾಡಿ ಸ್ವಾಮಿಯವರ ಪ್ರಸಾದವನ್ನು ನೀಡಿದರು. ಸ್ವಚ್ಛ ಆಂಧ್ರ ಯೋಜನೆಯ ಭಾಗವಾಗಿ ದೇವಾಲಯದ ಆವರಣವನ್ನು ಸ್ವಚ್ಛಗೊಳಿಸಲು ನೈರ್ಮಲ್ಯ ಕಾರ್ಮಿಕರೊಂದಿಗೆ ಕೆಲಸ ಮಾಡಿದರು.**











శ

ಶೇಷವಾಹನನಾಗಿ ಬಂದ ಶ್ರೀನಿವಾಸ
ವಾಸುದೇವ ವಾಸವ ಪ್ರಿಯ
ಅಜಭವಸುರ ಮುನಿವ್ರಜ ನಾನಾ ಬಗೆಯಲ್ಲಿ
ಭಜನೆ ಮಾಡುತ ಬಲು ನಿಜಮನದಲಿ ನೋಡೆ ॥1॥
ಗಂಧರ್ವಗಣ ನಲವಿಂದಪಾಡಲು ಭೇರಿ
ದುಂದುಭಿವಾದ್ಯ ಆನಂದನುಡಿವ್ರತಿರೆ ॥2॥
ಛತ್ರಚಾಮರ ಜನರು ಸ್ತೋತ್ರ ಸಂಗೀತನಾದ
ಧಾತ್ರಿಯ ತುಂಬಿರಲು ಸರ್ವತ್ರ ವ್ಯಾಪಕದೇವ ॥3॥
ಇಕ್ಕೆಲದವರಲನ ನಕಲ್ಪ ದಿಕ್ಕು ಬೆಳಗುತಿರೆ
ಚೊಕ್ಕದೈವ ತಾವೆ ಶುದ್ಧ ಭಕ್ತರ ಒಡಗೂಡಿ ॥4॥
ಇಷ್ಟ ಮೂರುತಿ ಮನೋಭೀಷ್ಟಪಾಲಿಪ ವಿಜಯ
ವಿಠಲ ವೆಂಕಟೇಶ ಬೆಟ್ಟದೊಡೆಯ ಇಂದು ॥5॥

- ಶ್ರೀ ವಿಜಯದಾಸರು

# ಭಗವದ್ಗೀತೆ

ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತು ಮರ್ಹಸಿ
ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -31)

(ಯುದ್ಧವು) ನಿನ್ನ ಸಹಜ ಧರ್ಮವೆಂಬುದನ್ನು ನೋಡಿಯಾದರೂ ನೀನು ಕಂಗೆಡಬಾರುದು. ಕ್ಷತ್ರಿಯನಿಗೆ ಧರ್ಮಯುದ್ಧಕ್ಕಿಂತ ಬೇರೆ ಶ್ರೇಯಸ್ಸಿಲ್ಲ.



## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

### 23-09-2025 ರಿಂದ 02-10-2025 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 23-09-2025 | ಮಂಗಳವಾರ | -------------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 24-09-2025 | ಬುಧವಾರ | ತಿರುಚ್ಚಿ ಉತ್ಸವ, ಧ್ವಜಾರೋಹಣ | ದೊಡ್ಡಶೇಷವಾಹನ |
| 25-09-2025 | ಗುರುವಾರ | ಚಿಕ್ಕಶೇಷವಾಹನ | ಹಂಸವಾಹನ |
| 26-09-2025 | ಶುಕ್ರವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 27-09-2025 | ಶನಿವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 28-09-2025 | ಭಾನುವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 29-09-2025 | ಸೋಮವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 30-09-2025 | ಮಂಗಳವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 01-10-2025 | ಬುಧವಾರ | ರಥೋತ್ಸವ | ಅಶ್ವವಾಹನ |
| 02-10-2025 | ಗುರುವಾರ | ಪಲ್ಲಕಿ ಉತ್ಸವ,ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

ತಿರುಮಲ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು ನಾಮ ಸಂವತ್ಸರ ಭಾದ್ರಪದ - ಆಶ್ವಯುಜ ಮಾಸ ಸಂಚಿಕೆ

ಸಂಪುಟ:05 ಸೆಪ್ಟೆಂಬರ್ - 2025 ಸಂಚಿಕೆ:02



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ.ಶ್ಯಾಮಲ ರಾವ್, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ತಿರುಪತಿ.

**ಪ್ರಚುರಣೆ, ಸಂಪಾದಕರು ,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್, ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ., ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಹರಿದಾಸರ ಮನ ದೈವ ಶ್ರೀ ಶ್ರೀನಿವಾಸ | -ವರಾಹಹರಿ ವಿಠಲದಾಸರು | 07 |
| ವೆಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ | -ಡಾ॥ ಸಿ.ಎಸ್. ಊರ್ಮಿಳಾ | 11 |
| ಅನಂತ ಪದ್ಮನಾಭಸ್ವಾಮಿಯ ಚರಿತ್ರೆ | -ಗೋವರ್ಧನ್‌ಪಾಣಿ ಬಿ.ಆರ್ | 14 |
| ಕನಕದುರ್ಗಾ ಮಹಾತ್ಮ್ಯೆ | -ಬಿ. ನಾಗೇಂದ್ರ ಪ್ರಸಾದ್ | 17 |
| ದಾಲಿನಾಯಕನ ಪಾಳ್ಯದ ಶ್ರೀ ವೆಂಕಟೇಶ್ವರ ದೇವಾಲಯ | -ಕೆಂಗೇರಿ ಚಕ್ರಪಾಣಿ | 20 |
| ಶ್ರೀ ಅನಂತಪದ್ಮನಾಭ ವ್ರತ ಮಹಿಮೆ | -ಶ್ರೀಕಂಠಯ್ಯ ಬಿ.ಆರ್. | 22 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | -ಡಿ॥ ಬಿ. ಎಸ್. ಶ್ರೀನಿವಾಸನ್ | 25 |
| ದೇವ-ಪಿತೃಗಳಿಗೆ ಭಕ್ತಿ ಸಮರ್ಪಿಸುವ ಭದ್ರಮಾಸ - ಭಾದ್ರಪದ | -ಶ್ರೀಮತಿ ವಾರುಣಿ ಹೊನ್ನಾಳಿ | 31 |
| ಹೃದ್ರೋಗಗಳಿಂದ ಕಾಪಾಡುವ ಋಷಿವಿದಿತ ವೈದ್ಯ | -ಡಿ.ಎಸ್. ಬದ್ರಿನಾಥ್ | 34 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 36 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 38 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 40 |
| ತಿರುಮಲೆ ಬೆಟ್ಟಗಳ ನೈಜ ಪರಿಸರ ವಿಜ್ಞಾನ | - ಡಾ॥ ಹರಿಹರ ಶ್ರೀನಿವಾಸರಾವ್ | 42 |
| ಗೊಂಬೆಗಳ ಹಬ್ಬ | -ಶ್ರೀಮತಿ ಎಸ್. ಸುರೇಖ ರಾಜು | 44 |
| ರಾಶಿಫಲಗಳು | -ಶ್ರೀಮಾತ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ- ಸತ್ಕಾರ್ಯ, ಉತ್ತಮ ಚಿಂತನೆ ಮಾಡುವವನಿಗೆ ಸುಖ ನಿದ್ದೆ ಖಚಿತ | - ಎ.ಆರ್.ರಘುರಾಮ | 48 |
| ಚಿತ್ರಕಥೆ- ಗುರುಗಳು ಕಠಿಣವಾಗಿದ್ದರೂ ಸಹ | - ಆರ್.ಕೆ.ವಿ | 52 |

**ಮುಖಚಿತ್ರ** - ಗರುಡವಾಹನದಲ್ಲಿ ಶ್ರೀಮಲೆಯಪ್ಪಸ್ವಾಮಿಯವರು, ತಿರುಮಲೆ

**ಹಿಂಬದಿಚಿತ್ರ**- ದೇವಿ ನವರಾತ್ರಿಗಳು

# ಸಾವಿರ ಕಣ್ಣುಗಳು ಸಾಲುವುದಿಲ್ಲ

ದೇವತೆಗಳನ್ನು **'ಖೇಚರರು'** ಎಂದು ಕರೆಯುತ್ತಾರೆ. ಏಕೆಂದರೆ ಅವರಿಗೆ ಅಪೂರೂಪವಾದ ಅದ್ಭುತವಾದ ಶಕ್ತಿಗಳಿರುತ್ತವೆ. ಆದ್ದರಿಂದಲೇ ಅವರುಗಳು ಆಕಾಶದಲ್ಲೂ ಸಂಚರಿಸುವವರು ಎನ್ನುತ್ತಾರೆ. ಅವರಿಗೆ ವಾಹನಗಳು ಇಲ್ಲದಿದ್ದರೂ ಕೇವಲ ಸಂಕಲ್ಪದಿಂದ ಮಾತ್ರಾ ಪ್ರಪಂಚದಲ್ಲೆಲ್ಲಾ ಸಂಚರಿಸುವ ಶಕ್ತಿ ಸಾಮಾರ್ಥ್ಯವುಳ್ಳವರು. ಆದರೆ ದೇವತೆಗಳೆಲ್ಲರಿಗೂ ಪ್ರತ್ಯೇಕವಾದ ವಾಹನಗಳಿರುತ್ತವೆ.ನಮ್ಮ ಜನ್ಮವನ್ನು ಕೃತಾರ್ಥವನನ್ನಾಗಿಸಿಕೊಳ್ಳುವ ಉದ್ದೇಶದಿಂದ ನಾವು ಅವರಿಗೆ ವಿವಿಧ ರೀತಿಯ ಉತ್ಸವಗಳು, ವಾಹನ ಸೇವೆಗಳು, ಹಾಗೂ ವಿಗ್ರಹಾರಾಧನೆಯನ್ನು ಮಾಡುತ್ತೇವೆ.ದೇವತೆಗಳ ವಾಹನಗಳು ಅವರವರ ಶಕ್ತಿಗಳಿಗೆ ಸಂಕೇತವಾಗಿವೆ. ಆದ್ದರಿಂದ ವಾಹನ ವಿಶೇಷಗಳನ್ನು ತಾತ್ವಿಕ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು.ಶ್ರೀಮಹಾವಿಷ್ಣುವಿಗೆ ಗರುಡನು ವಾಹನನಾಗಿದ್ದಾನೆ. ಆತ ವೇದಮಯನೂ ಹೌದು ಆದ್ದರಿಂದಲೇ ವಿಷ್ಣುವನ್ನು ತನ್ನ ಬೆನ್ನ ಮೇಲೆ ಹೊರುವ ಶಕ್ತಿಯನ್ನು ಹೊಂದಿದ್ದಾನೆ. ವಿಷ್ಣುವಿನ ವೇದಮಯ ಶಕ್ತಿಯೇ ಗರುಡನಾಗಿ ನಂತರ ಆತನ ವಾಹನವಾಗಿ ರೂಪುಗೊಂಡಿದೆ. ಶಕ್ತಿಯ ಮತ್ತೊಂದು ರೂಪವೇ ವಾಹನ! ಆ ಗರುಡವಾಹನವೇ ವಿಷ್ಣುವಿನ ಧ್ವಜ ಪಟವಾಗಿರುತ್ತದೆ. ಶಿವನ ವಾಹನವು ವೃಷಭ ಅಂದರೆ ಎತ್ತು. ವೃಷಭ ಎಂದರೆ ಧರ್ಮ ! ಆದ್ದರಿಂದಲೇ ಅದು ಶಿವನ ವಾಹನವಾಗಿದೆ. ಹಾಗೆಯೇ ಸಿಂಹವು ದುರ್ಗಾದೇವಿಯ ವಾಹನವಾಗಿದ್ದು ಸಿಂಹವು ಪರಾಕ್ರಮದ ಸಂಕೇತವಾಗಿದೆ. ಹಾಗೆಯೇ ಹನುಮಂತ ವಾಹನ ದಾಸ್ಯ ಭಕ್ತಿಗೆ, ವಿಶ್ವಾಸಕ್ಕೆ ಸಂಕೇತವಾದರೆ ಆನೆಯು ಶುಭಸೂಚಕವಾಗಿದ್ದು, ಮಹಾಬಲಕ್ಕೆ ಸಂಕೇತವಾಗಿದೆ. ಶೇಷನು ಭಾರವಹನಶಕ್ತಿಗೆ ಸಂಕೇತವಾದರೆ, ಕಲ್ಪವೃಕ್ಷವು ಬೇಡಿದ ಅಭೀಷ್ಟಗಳೆಲ್ಲಾ ನೆರವೇರುವುದಕ್ಕೆ ಸರ್ವಭೂಪಾಲ ವಾಹನವು ಆ ಭಗವಂತನ ವಿಶ್ವೇಶ್ವರ ತತ್ವಕ್ಕೆ ಅಶ್ವವು ವೇಗಕ್ಕೆ ರಥವು ದೇವಾಲಯದ ರೂಪವಾಗಿದ್ದು, **(ಸಂಚಾರ ದೇವಾಲಯ)** ವಿಶ್ವಕ್ಕೆ ನಮ್ಮ ಶರೀರದ ಸಂಕೇತವಾಗಿದೆ.

ಉತ್ಸವಗಳಲ್ಲಿ ಆಯಾ ವಾಹನಗಳ ಮೇಲೆ ಮೆರವಣಿಗೆಯಲ್ಲಿ ಬರುವ ಉತ್ಸವ ಮೂರ್ತಿಗಳನ್ನು ದರ್ಶಿಸುವುದರಿಂದ ಆಯಾ ವಾಹನಗಳಿಗಿರುವ ಗುಣಗಳು, ಶಕ್ತಿಗಳನ್ನು ಅರ್ಥಮಾಡಿಕೊಂಡು ಭಕ್ತರು ಅದಕ್ಕೆ ಇರುವ ಅಧಿಷ್ಠಾನ ದೇವತೆಗಳನ್ನು ಹೃದಯದಲ್ಲಿ ಸ್ಮರಿಸಿ, ನಿಲ್ಲಿಸಿಕೊಂಡರೆ ತಾವು ಭಗವಂತನಿಗೆ ವಾಹನಗಳಾಗಿ ಬದಲಾಗಿ, ಶ್ರೀನಿವಾಸನನ್ನು ಹೊರುವಂತಾಹ ಶಕ್ತಿ ಸಾಮರ್ಥ್ಯವನ್ನು ಅನುಗ್ರಹವನ್ನು ಪಡೆಯಬಲ್ಲರು.ಚಕ್ರವರ್ತಿಯು ನಡೆದಾಡಬೇಕಾದರೆ ವಾಹನವನ್ನು ಉಪಯೋಗಿಸುತ್ತಾರೆ. ಅದು ಅವರ ಚಕ್ರವರ್ತಿತ್ವದ ಲಕ್ಷಣ! ದೇವತೆಗಳ ವಾಹನಗಳಿಗೆ ದಿವ್ಯವಾದ ಶಕ್ತಿ ಇರುತ್ತದೆಯಾದ್ದರಿಂದಲೇ ಅವು ಆಕಾಶದಲ್ಲೇ ಸಂಚರಿಸುತ್ತದೆ. ಶ್ರೀನಿವಾಸನ ಬ್ರಹ್ಮೋತ್ಸವಗಳಲ್ಲಿ ಅನೇಕ ವಾಹನ ಸೇವೆಗಳಿರುತ್ತವೆ. ಈ ಸೇವೆಗಳನ್ನು ವೀಕ್ಷಿಸುವುದರಿಂದ ಶ್ರೀ ವೆಂಕಟೇಶ್ವರನು ಸರ್ವದೇವತಾ ಸ್ವರೂಪನೂ, ಸಕಲ ಶಕ್ತಿವಂತನೂ ಸರ್ವವ್ಯಾಪಕನೂ, ಭಕ್ತ ಕಲ್ಪತರು, ಅಪಾರವಾದ ಕೃಪಾಸಾಗರನೂ ಎಂಬ ವಿಷಯ ನಮಗೆ ಅರ್ಥವಾಗುತ್ತದೆ. ಶ್ರೀಹರಿಯ ಅನಂತತ್ವವು ಮಾತುಗಳಿಗೂ, ಮನಸ್ಸಿಗೂ ಅರ್ಥವಾಗದೇ ಇರುವಂತಹುದು ಅದು ಕೇವಲ ಆತ್ಮಕ್ಕೆ ಮಾತ್ರಾ ಶ್ರೀನಿವಾಸನ ಪರಮಾತ್ಮ ತತ್ವವು ತಿಳಿದುಬರುತ್ತದೆ. ದೇವತೆಗಳ ವಾಹನಗಳು, ಜೀವಿಗಳನ್ನು ಉದ್ಧರಿಸಿ, ಪರಿಶುದ್ಧರನ್ನಾಗಿಸಿ, ದೇವತೆಗಳ ಸನ್ನಿಧಿಗೆ ಕರೆದೊಯ್ಯುವ ಜ್ಞಾನವಾಹಿನಿಗಳಾಗಿವೆ. ಆದ್ದರಿಂದಲೇ ದೇವತೆಗಳು ತಮ್ಮ ಶಕ್ತಿಗಳನ್ನು ವಾಹನರೂಪದಲ್ಲಿ ನಮಗೆ ಕಂಡು ಬರುವಂತೆ ಮಾಡುತ್ತಾ ನಮ್ಮ ಮನಸ್ಸನ್ನು ಆಕರ್ಷಿಸಿ, ತಮ್ಮ ಕೃಪಾಮೃತವನ್ನು ನಮ್ಮ ಮೇಲೆ ಸುರಿಸುತ್ತಿದ್ದಾರೆ. ಅವು **"ಉತ್ಸವ ವಾಹನಗಳು"** ಅಂದರೆ ಆನಂದವನ್ನುಂಟುಮಾಡುವಂತಹವು ಎಂದ ಅರ್ಥ! ವಿಗ್ರಹಾರಾಧನೆಯಲ್ಲಿ ನೇರವಾಗಿ ಭಗವಂತನನ್ನು ಪೂಜಿಸುವುದು, ಸ್ಮರಿಸುವುದು ಒಂದು ವಿಶೇಷವಾಗಿದೆ.

ತಿರುಮಲೆಯಲ್ಲಿ ನಡೆಯುವ ಶ್ರೀನಿವಾಸನ ಬ್ರಹ್ಮೋತ್ಸವಗಳು ಎಲ್ಲಾ ಉತ್ಸವಗಳಿಗಿಂತಲೂ ಅತ್ಯುತ್ತಮವಾದುವು, ಅದ್ಭುತವಾದುವು, ಪ್ರತಿ ವರ್ಷವೂ ಈ ಉತ್ಸವಗಳು ಅತ್ಯಂತ ವೈಭವದಿಂದ ನಯನ ಮನೋಹರವಾಗಿ ಭಕ್ತರ ಕಣ್ಣಿಗೆ ಹಬ್ಬವನ್ನುಂಟುಮಾಡುವಂತೆ ನಡೆಯುತ್ತದೆ. ಈ ಸಂಭ್ರಮವನ್ನು ನೋಡುವುದಕ್ಕೆ ಸಾವಿರ ಕಣ್ಣುಗಳೂ ಸಾಲುವುದಿಲ್ಲ. ಈ ಬ್ರಹ್ಮೋತ್ಸವಗಳ ಸಂದರ್ಭದಲ್ಲಿ ತಿರು ಮಲೆಯನ್ನು ಅತ್ಯಂತ ಸುಂದರವಾಗಿ ಅಲಂಕರಿಸಲಾಗುತ್ತದೆ. ಇಲ್ಲಿ ಸಾಮಾನ್ಯರೊಂದಿಗೆ ದೇವತೆಗಳಿಗೂ ಸ್ವಾಗತವನ್ನು ಬಯಸು ವುದಕ್ಕಾಗಿ ತಿ.ತಿ.ದೇವಸ್ಥಾನದವರು ಉತ್ಸಾಹದಿಂದ ಸಂತೋಷದಿಂದ ಸಿದ್ಧವಾಗುತ್ತಾರೆ. ಗೋವಿಂದನಾಮ ಸ್ಮರಣೆ ವಿದ್ಯುದ್ದೀಪಗಳ ಅಲಂಕಾರ ತೋರಣಗಳ ಸಮಾಹಾರ, ಭಕ್ತ ಜನರ ಕೋಲಾಹಲದಿಂದ ತಿರುಮಲೆಯು ಅಪರ ವೈಕುಂಠವೆನ್ನುವಂತೆ ಭಾಸವಾಗುತ್ತದೆ ಸರ್ವದೇವತೆಗಳು, ಉತ್ಸಾಹದಿಂದ ಭಕ್ತಿಯಿಂದ ಪಾಲ್ಗೊಳ್ಳುವ ಈ ಬ್ರಹ್ಮೋತ್ಸವಗಳಿಗೆ ಎಲ್ಲರಿಗೂ ಆಹ್ವಾನವನ್ನು ನೀಡಲಾಗುತ್ತಿದೆ! ಬನ್ನಿ ಬನ್ನಿ ಎಲ್ಲರೂ ಬನ್ನಿ! ಮನಸ್ಸು, ಶರೀರ ಎರಡನ್ನು ತನ್ಮಯಗೊಳಿಸುವ ಭಕ್ತಿಭಾವನೆಯೊಂದಿಗೆ ಮಕ್ಕಳಿಂದ ಹಿಡಿದು ವೃದ್ಧರವರೆಗೂ ವಯಸ್ಸಿನ ಬೇಧಭಾವವಿಲ್ಲದೇ ಗೋವಿಂದನಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡೋಣ!

ಕಣ್ಣುಗಳಿರುವುದೇ ತಿಮ್ಮಪ್ಪನನ್ನು ದರ್ಶಿಸುವುದಕ್ಕೆ!
ಬಾಯಿ ಇರುವುದೇ ಶ್ರೀನಿವಾಸನನ್ನು ಸ್ಮರಿಸುವುದಕ್ಕೆ
ಕಾಲುಗಳಿರುವುದೇ ಸಪ್ತಗಿರಿಯ ಮೇಲೆ ನಡೆಯುವುದಕ್ಕೆ!!

ಸರ್ವಾಲಂಕಾರ ಭೂಷಿತನಾಗಿ, ಸ್ವರ್ಣರಥಾರೂಢನಾಗಿ, ಮುಗಿಲು ಮುಟ್ಟುವ ಸಂಭ್ರಮಗಳೊಂದಿಗೆ ರಾರಾಜಿಸುತ್ತಿರುವ ಆ ಆದಿದೇವನನ್ನು ಎಲ್ಲರೂ ದರ್ಶಿಸೋಣ ಧನ್ಯರಾಗೋಣ!!

ವಿನಾ ವೆಂಕಟೇಶಂ ನ ನಾಥೋ ನನಾಥಃ
ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ

# ಹರಿದಾಸರ ಮನ ದೈವ ಶ್ರೀ ಶ್ರೀನಿವಾಸ

-ವರಾಹಹರಿ ವಿಠಲದಾಸರು
94804 46686

ಎಲ್ಲ ಹರಿದಾಸರೂ ಸಹ ತಿರುಪತಿಯ ತಿಮ್ಮಪ್ಪನನ್ನು ಹಾಡಿದ್ದಾರೆ, ಹೊಗಳಿದ್ದಾರೆ. ಒಮ್ಮೆಶ್ರೀ ವಿಜಯದಾಸರು ಮತ್ತು ಗೋಪಾಲದಾಸರು (ಭಾಗಣ್ಣದಾಸರು) ತಿರುಪತಿಗೆ ಬ್ರಹ್ಮೋತ್ಸವಕ್ಕೆ ಹೋಗಿರುತ್ತಾರೆ. ಹಿಂದೆ ದೇವರು ಉತ್ಸವದಲ್ಲಿ ಹೊರಟಾಗ ಗರ್ಭಗುಡಿಯ ಬಾಗಿಲು ಹಾಕುತ್ತಿದ್ದರು. ಹಾಗೆ ದೇವರು ಉತ್ಸವಕ್ಕೆ ಸಿದ್ಧರಾಗಿದ್ದಾರೆ. ಸಾವಿರಾರು ಜನರು ಎಳೆದರು ರಥ ಸಾಗುತ್ತಿಲ್ಲ. ವಿಜಯದಾಸರನ್ನು ಕೇಳಿದಾಗ ನಮ್ಮ ಭಾಗಣ್ಣ ಎಲ್ಲಿ ಗರ್ಭಗುಡಿಯೊಳಗೆ ಇದ್ದಾನೇನು ನೋಡಿ ಎಂದರು. ಮುಂಬಾಗಿಲನ್ನು ತೆಗೆದು ನೋಡಿದರೆ ಅಲ್ಲಿ ಶ್ರೀನಿವಾಸ ನರ್ತನ ಮಾಡುತ್ತಿದ್ದ. ಗೋಪಾಲದಾಸರು ನರ್ತನದಲ್ಲಿ ಭಕ್ತಿ ಭಾವದಿಂದ ಮೈಮರೆತಿದ್ದರು ಆಗ ಉತ್ಸವದಲ್ಲಿ ಭಕ್ತಾದಿಗಳು ಕಾದಿದ್ದಾರೆ. ವಿಜಯದಾಸರು ಕರೆಯುತ್ತಿದ್ದಾರೆ ಎಂದಾಗ ಸ್ವಾಮಿ ನನ್ನಿಂದ ಇಷ್ಟು ಜನ ಕಾಯುವ ಹಾಗಾಯಿತೆ ಎಂದು ಓಡೋಡಿ ಬಂದರು. ನಮ್ಮ ಸ್ವಾಮಿಯನ್ನು ಕರೆ ಎಂದು ವಿಜಯದಾಸರು ಹೇಳಿದರೆ ಗೋಪಾಲದಾಸರು ಹಾಡಿದ ಕೀರ್ತನೆ.

**ಬಾರಯ್ಯ ಬಾಬಾ ಭಕುತರ ಪ್ರಿಯ । ಶ್ರೀನಿವಾಸ ರಾಯ ॥**
**ಮಾರಜನಕ ಮುಕುತರೊಡೆಯ ದೇವಯ್ಯ ಜೀಯಾ ॥ಪ॥**

ಎದುರಿಗೆ ಶ್ರೀನಿವಾಸ ಕಾಣುತ್ತಿದ್ದಾನೆ. ಬಾರಯ್ಯ ಬಾ ಬಾ ಎನ್ನುತ್ತಿದ್ದಾರೆ. ನೀನು ಭಕ್ತರ ಪ್ರಿಯ.ಲಕ್ಷ್ಮೀದೇವಿಗೆ ನಿವಾಸ ಸ್ಥಾನೀಯ. ಲಕ್ಷ್ಮೀಯನ್ನು ಕೂಡಿಕೊಂಡು ಬಾ. ಅದಕ್ಕೆ ಶ್ರೀನಿವಾಸ ಪದ ಪ್ರಯೋಗ ಮಾಡಿದ್ದಾರೆ. ಮಾರಜನಕ: ಮಾರ ಎಂದರೆ ಮನ್ಮಥ. ಸೌಂದ ರ್ಯದ ಅಧಿದೇವತೆ ಮನ್ಮಥ. ಅವನ ಅಪ್ಪ ನೀನು ಅಂದರೆ ಸುಂದರನಾಗಿರುವವನು. ಲೋಕೈಕ ಸುಂದರ. ಮುಕುತರಿಗೂ ಒಡೆಯ. ವೈಕುಂಠ ಮುಕುತರ ಸ್ಥಾನ. ಇದು ಭೂ ವೈಕುಂಠ. ಅವರೆಲ್ಲರೂ ಒಂದೊಂದು ರೂಪದಿಂದ ನಿನ್ನ ಸೇವೆ ಇಲ್ಲಿ ಮಾಡುತ್ತಿದ್ದಾರೆ. ದೇವಯ್ಯ, ದೇವತೆಗಳಿಗೆಲ್ಲ ಒಡೆಯ ಸರ್ವೋತ್ತಮ ಬಾರಯ್ಯ, ಜೀಯಾ ಸ್ವಾಮಿ ಒಡೆಯ ನಾನು ನಿನ್ನ ದಾಸಬಾರಯ್ಯ ಎಂದರು.

**ವಾರಿಜಲಯಪತೆ ವಾರಿಜನಾಭನೆ**
**ವಾರಿಜಭವಪಿತ ವಾರಿಜನೇತ್ರನೆ**
**ವಾರಿಜಮಿತ್ರ ಅಪಾರ ಪ್ರಭಾವನೆ**
**ವಾರಿಜಜಾಂಡದ ಕಾರಣದೊರೆಯೇ ॥ಅಪ॥**

ವಾರಿ ಅಂದರೆ ನೀರು. ಸಮುದ್ರಮಥನ ಮಾಡಿದಾಗ ಬಂದವಳು ಮಹಾಲಕ್ಷ್ಮಿ. ಮಹಾಲಕ್ಷ್ಮಿಯ ಆಲಯ ಸಮುದ್ರ. ಅಂತಹ ಲಕ್ಷ್ಮೀಪತಿ ಸಮುದ್ರಶಾಯಿ ನಾರಾಯಣ ನೀನಾಗಿದ್ದೀಯೆ. ಕಮಲಾರಮಣ ನೀನಾಗಿದ್ದೀಯೆ; ವಾರಿಜ ಅಂದರೆ ಚಂದ್ರ.ಅವನೂ ಸಮುದ್ರ ಮಥನದಲ್ಲಿ ಬಂದವ. ಚಂದ್ರ ಮಂಡಲದಲ್ಲಿ ನೀನು ಧನ್ವಂತರಿಯಾಗಿ ಇರುವೆ. ಆದ್ದರಿಂದಲು ವಾರಿಜಲಯಂತೆ ವಾರಿಜಲಯಪತಿ ಸಮುದ್ರ ವಿಹರಿಸುವ



ಮತ್ಸಾವತಾರ, ಕೂರ್ಮಾವತಾರ ಮಾಡಿದವನು ನೀರಿನಲ್ಲಿ ಸುಳಿದಾಡಿದ ವರಾಹ ನೀನು ಎಂಬ ಅರ್ಥಗಳುಂಟು. ನಾಭಿಯಿಂದ ಕಮಲವನ್ನು ಪಡೆದ ವಾರಿಜನಾಭ ನೀನೆ. ಕಮಲದಲ್ಲಿ ಚತುರ್ಮುಖ ಬ್ರಹ್ಮನನ್ನು ಪಡೆದವನು, ಆದ್ದರಿಂದ ಬ್ರಹ್ಮನ ಪಿತ, ಕಮಲದಂತೆ ಕಣ್ಣುಗಳುಳ್ಳವನು ಕಮಲಾಕ್ಷ, ವಾರಿಜ ಮಿತ್ರ ಅಂದರೆ ಸೂರ್ಯ. ಕಾರಣ ಸೂರ್ಯೋದಯದಲ್ಲಿ ಕಮಲ ಅರಳುತ್ತದೆ. ಕೋಟಿಸೂರ್ಯಸಮಪ್ರಭ ಇವನು. ಸೂರ್ಯನಿಗೆ ಕಾಂತಿ ನೀಡುವವನು ಇವನು. ಸೃಷ್ಟ್ಯಾದಿ ಅಷ್ಟಕರ್ತೃತ್ವವುಳ್ಳ ಅಪಾರ ಪ್ರಭಾವ ನಿನ್ನದು, ಇಡೀ ಬ್ರಹ್ಮಾಂಡದಲ್ಲಿರುವ ಸಕಲ ಚೇತನಾ ಚೇತನ ಗಳ ಅಸ್ತಿತ್ವಕ್ಕೆ ಇರುವಿಕೆಗೆ ಕಾರಣ ನೀನು ದೊರೆ.



**ಸ್ಯಂದನವೇರಿಬಾಪ್ಪ ರಂಗ। ಗುರುಕುಲೋತ್ತುಂಗ ।**
**ನಂದನಂದನ ಅರಿಮದಭಂಗ ಕಾರುಣ್ಯಪಾಂಗ।**
**ಸುಂದರ ವಿಗ್ರಹ ಶುಭಾಂಗ ವಿಹಂಗತುರಂಗ।**
**ಕಂದವಿರಿಂಚಿಯು ನಂದಿವಾಹನ ಅಮ**
**ರೇಂದ್ರ ಸನಕ ಸನಂದನಾದಿ ಮುನಿ**
**ವೃಂದ ಬಂದು ನಿಂದು ಧಿಂಧಿಂಧಿಂಧಿಮಿ**
**ಕೆಂದು ನಿಂದಾಡಲು ಆನಂದದಿ ಮನಕೆ ॥**




ದಾಸರು ಕರೆಯುವಾಗ, ಸ್ಯಂದನ ಎಂಬುವುದು ಒಂದು ವೃಕ್ಷಜಾತಿ. ಆ ವೃಕ್ಷದಿಂದ ಬ್ರಹ್ಮೋತ್ಸವದ ರಥವನ್ನು ಮಾಡಿರುವುದು. ಆದ್ದರಿಂದ ಸ್ಯಂದನ ಎಂದರೆ ರಥ ಎಂದೇ ಕರೆದು ಸ್ಯಂದನವೇರಿ ಬಾಪ್ಪರಂಗ ಎಂದರು. ಹೊರಗಡೆ ಈ ರಥವೇರು. ಅಂತರಂಗದಿ ನನ್ನ ಮನೋರಥವೇರು ಹೃದಯ ರಂಗದಲ್ಲಿ ಕಂಗೊಳಿಸು. ಗುರು ಕುಲೋತ್ತುಂಗ. ಗು ಶಬ್ದಃ ಅಧಕಾರಃ ರು ಶಬ್ದ ತನ್ನಿವಾರಕಃ ಅಜ್ಞಾನದ ಅಂಧಕಾರವನ್ನು ಅಳಿಸಿ ಜ್ಞಾನವನ್ನು ನೀಡುವವರು ಗುರುಗಳು. ಆ ಎಲ್ಲರಿಗೂ ಗುರುವಿನ ಸ್ಥಾನದಲ್ಲಿರುವವನು. ಬ್ರಹ್ಮಾದಿಗಳಿಗು ಗುರು, ಸಮಸ್ತ ಋಜುಗಳಿಗೂ ಹಯಗ್ರೀವ ರೂಪದಿಂದ ವಿಷ್ಣು ರಹಸ್ಯ ಹೇಳಿದವನು, ರಣರಂಗದಲ್ಲಿ ಅರ್ಜುನನನ್ನು ನೆಪ ಮಾಡಿ ಭಗವದ್ಗೀತೆಯನ್ನು ಬೋಧಿಸಿ



ದವ ವೇದವ್ಯಾಸ ರೂಪದಿಂದ ಎಲ್ಲರಿಗೂ ಗುರುಗಳಾಗಿ, ವೇದ ವಿಭಾಗ ಮಾಡಿ, ಪುರಾಣಗಳನ್ನು ರಚಿಸಿ, ಬ್ರಹ್ಮ ಸೂತ್ರಗಳನ್ನು ರಚಿಸಿ ಉಪಕರಿಸಿರುವವನು ಗುರುಕುಲಕ್ಕೆ ಶಿಖರ ಪ್ರಾಯನಾಗಿರುವವನು ಗುರುಕುಲೋತ್ತುಂಗ ಎಂದರು. ನಂದ ಗೋಪನ ಕಂದ ನೀನು ಕೃಷ್ಣ ದುರುಳರಾದ ಕಂಸ, ಕಂಸನ ಭೃತ್ಯರಾದ ಪೂತನ, ಶಕಟಾಸುರ,ತೃಣಾವರ್ತ ಮೊದಲಾದವರನ್ನು ಭಂಗಿಸಿದವನು,ಭಕ್ತರನ್ನು ರಕ್ಷಿಸಿದವನು, ಗೊಲ್ಲ ಬಾಲಕರನ್ನು ರಕ್ಷಿಸಿದವನು, ವಸುದೇವ ದೇವಕಿಯರ ಬಂಧನ ಬಿಡಿಸಿದವ ಕಾರುಣ್ಯಪಾಂಗ,ಸುಂದರವಾದ ರೂಪವುಳ್ಳವನು,ನಿರಾಕಾರನ,ಶುಭವಾದ ಅಂಗಾಂಗಗಳುಳ್ಳವನ್ನು ಅಪ್ರಾಕೃತ ಶರೀರವುಳ್ಳವನು ಶುಭಾಂಗ, ವಿಹಂಗ ಎಂದರೆ ಗರುಡ ಅವನನ್ನೆ ವಾಹನವಾಗಿ ಉಳ್ಳವನು. ಬಾರಯ್ಯ ನಾನು ನಿನ್ನನ್ನು ಕರೆಯುತ್ತಿಲ್ಲ ಇದು ಬ್ರಹ್ಮೋತ್ಸವ. ಅವರುಗಳು ಬಂದಿದ್ದಾರೆ ಎನ್ನುತ್ತಾರೆ ಗೋಪಾಲದಾಸರು.

ಕಂದ ವಿರಿಂಚಿಯು = ಬ್ರಹ್ಮದೇವರು ನಂದಿವಾಹನ = ರುದ್ರ ದೇವರು ಅಮರೇಂದ್ರ = ದೇವತೆಗಳ ಒಡೆಯ ಇಂದ್ರ ದೇವರು, ಸನಕ ಸನಂದನಾದಿ ಬಾಲ ಬ್ರಹ್ಮಚಾರಿಗಳು ಆದಿ ಪದದಿಂದ ಸನತ್ಕುಮಾರ, ಸರ್ವ ಋಷಿಗಳ ವೃಂದ ಸಮೂಹವೇ ಬಂದಿದ್ದಾರೆ. ಅವರೆಲ್ಲ ಉತ್ಸಾಹದಿಂದ ನಿಂದು ವೇದ ಘೋಷದಿಂದ, ಸ್ತೋತ್ರಗಳಿಂದ ಸ್ತುತಿಸುತ್ತಿದ್ದಾರೆ. ಆದ್ದರಿಂದ ಬಾ ಮನಕೆ ಎಂದು ಈ ರೂಪವು ಗೋಪಾಲದಾಸರ ಮನದಲ್ಲಿ ಸಹ ಬಂದಿದೆ. ಮನಕೆ ಬಾ ಎಂದರು. **"ರಥಸ್ಥಂ ಕೇಶವಂ ದೃಷ್ಟ್ವಾ ಪುನರ್ಜನ್ಮನ ವಿದ್ಯತೇ"** ಎಂದಿದೆ. ರಥದಲ್ಲಿರುವ ಕೇಶವನ ದರ್ಶನ ಪುನರ್ಜನ್ಮ ಬರುವುದಿಲ್ಲ ಅಂದರೇ ರಥವೇ ಈ ಶರೀರ. ಈ ಹೃದಯ ಗುಹೆಯಲ್ಲಿ ಹರಿಯನ್ನು ಬಿಂಬ ಮೂರುತಿಯಾಗಿ ಕಂಡರೆ ಪುನರ್ಜನ್ಮವಿಲ್ಲ ಎಂದು ಅರ್ಥ.

**ಜಗಜ್ಜನ್ಮಾದಿಕರ್ತ ಗೋವಿಂದ ಉದರದಿ ಲೋಕವ**
**ಲಘುವಾಗಿ ಧರಿಸಿದ ಮುಕುಂದ ಭಕ್ತರ ಮನಕೆ**
**ಝುಗಝುಗಿಸುತ ಪೊಳೆವಾನಂದ ನಿಗಮಾವಳಿಯಿಂದ**
**ಅಗಣಿತ ಮುನಿಗಳು ನಗಖಗಮೃಗ ಶಶಿ**
**ಗಗನಮೃಣಾದ್ಯರು ಸೊಗಸಾಗಿ ಬಗೆಬಗೆ**
**ಪೊಗಳುತಲೀ ಬೇಗ ಜಿಗಿಜಿಗಿದಾಡಲು**
**ಮುಗುಳುನಗೆಯ ಮನೋಹರ ಗಿರಿವಾಸ॥2॥**

ಎಲ್ಲ ದೇವತೆಗಳು ಹೇಗೆ ಸ್ತೋತ್ರ ಮಾಡುತ್ತಿದ್ದಾರೆ. ಜಗಜನ್ಮಾದಿಕರ್ತ ಗೋವಿಂದ. ಸೃಷ್ಟಿ,ಸ್ಥಿತಿ,ಲಯ, ನಿಯಮನ,ಜ್ಞಾನ,ಅಜ್ಞಾನ, ಬಂಧ, ಮೋಕ್ಷ ಮೊದಲಾದ ಅಷ್ಟ ಕರ್ತೃತ್ವವುಳ್ಳವನು ನೀನು. ಹೀಗೆ ಭಗವಂತನನ್ನು ತಿಳಿಯತಕ್ಕದ್ದು. ಇಡೀ ಬ್ರಹ್ಮಾಂಡವನ್ನು 14 ಲೋಕಗಳನ್ನು ತನ್ನ ಉದರದಲ್ಲಿ ಸೂಕ್ಷ್ಮವಾಗಿ ಧರಿಸಿದ್ದಾನೆ. ಎಲ್ಲರೊಳು ತಾನಿಪ್ಪ ತನ್ನೊಳಗೆ ಎಲ್ಲರನು ಧರಿಸಿಹನು" ಎಂಬಂತೆ ಪ್ರಳಯ ಕಾಲದಲ್ಲೂ ಎಲ್ಲ ಲೋಕಗಳನ್ನು ಉದರದಲ್ಲಿ ಧರಿಸುವ ಜಗದುದರ ಇವನು. ಆದ್ದರಿಂದ ಲಘುವಾಗಿ ಧರಿಸಿದ ಮುಕುಂದ.(ಮುಕ್ತಿಯನ್ನು ನೀಡುವವನು) ಭಕ್ತರ ಮನಕ್ಕೆ ಆನಂದವನ್ನು ಉಂಟು ಮಾಡುತ್ತ ರಥದಲ್ಲಿ ಬಾರಯ್ಯ ಎನ್ನುತ್ತಾನೆ. ಎಲ್ಲರಿಗೂ ಆನಂದವನ್ನು ನೀಡು. ನಿಗಮಾವಳಿಯಿಂದ ವೇದಗಳನ್ನು ಉಸುರುತ್ತ ಬರುತ್ತಿದ್ದಾರೆ. ಅಸಂಖ್ಯಾತವಾದ ಮುನಿಗಳೇ ಈ ವೆಂಕಟಗಿರಿಯಲ್ಲಿ ಕಲ್ಲುಗಳಾಗಿ ಪಕ್ಷಿಗಳಾಗಿ, ಮೃಗಗಳಾಗಿ ಇದ್ದಾರೆ. ಗಗನಮೃಣಾದ್ಯರು, ಗಂಧರ್ವರು ಗಾನ ಮಾಡುತ್ತಿದ್ದಾರೆ. ಅಪ್ಸರೆಯರು ನೃತ್ಯ ಮಾಡುತ್ತಲಿದ್ದಾರೆ ಜಿಗಿಜಿಗದಾಡಲು,ಪೊಗಳುತಲಿ ಈ ಪದಗಳು ಈ ವೈಭವವನು ತಿಳಿಸುತ್ತಿವೆ. ನೀನು ಮಂದಹಾಸಯುಕ್ತ ನಾದ ಮುಖವುಳ್ಳವನಾಗಿ ಬಾರಯ್ಯ ಮಹೋರಗಗಿರಿ ಶೇಷಗಿರಿವಾಸ ತಿಮ್ಮಪ್ಪ. ಶೇಷಜೀವಕ್ಕೂ ಅಭಿಮಾನಿಯಾದ್ದರಿಂದ ಜೀವನ ಅಂತರಂಗದಿ ಬಿಂಬ ಮೂರುತಿಯಾಗಿ ಬಾ.

ಆದರೂ ಶ್ರೀ ಶ್ರೀನಿವಾಸನ ರಥಕದಲಿಲ್ಲ ಈಗ ಭಾಗವತದ ಮತ್ತೊಂದು ಸನ್ನಿವೇಶವನ್ನು ಸ್ತೋತ್ರವ ಮಾಡಿ ಬೇಗ ಬರುವುದು ನಿನಗೆ ಗೊತ್ತಿಲ್ಲವೇ

**ತಡಮಾಡಬೇಡವೊ ಹೇ ನಲ್ಲ**
**ವಾಕು ಲಾಲಿಸು ಎನ್ನೊಡೆಯ**
**ಗೋಪಾಲವಿಠಲ ದೇವಪ**
**ರಾಕು ಅಡಿಯಿಡು**
**ಭಕುತವತ್ಸಲ ಶ್ರೀ**
**ಲಕುಮಿನಲ್ಲ**
**ಮಡುವಿ**



**ನೊಳಗೆ ಗಜಮೊರೆಯಿ ಡಲಾಕ್ಷಣ**
**ಮಡದಿಗೆ ಪೇಳದೆ ಧುಡುಧುಡನೆ ಬಂದು**
**ಹಿಡಿದು ನಕ್ರನ ಬಾಯಿ ಕಡಿದು ಬಿಡಿಸಿದನೆ**
**ಸಡಗರದಲಿ ರಮೆ - ಪೊಡವಿಯೊಡನೆ ಕೂಡಿ ॥3॥**

ಭಾಗವತ ಅಷ್ಟಮ ಸ್ಕಂಧದಲ್ಲಿ ಬರುವ ಕಥೆ.ತಡ ಮಾಡ ಬೇಡವೋ ಸ್ವಾಮಿ ಅಂದು ಆನೆಯ ಕಾಲನ್ನು ನೀರಿನಲ್ಲಿ ಮೊಸಳೆ ಹಿಡಿದಾಗ,ಆನೆಯು**"ಆದಿಮೂಲ ನಾರಾಯಣ ಅಖಿಲ ಗುರೋ ನಮಸ್ತೇ"**ಎಂದು ಕೂಗಿದಾಗ ಮಡದಿಯಾದ ಲಕ್ಷ್ಮಿ ದೇವಿಗೂ ಹೇಳದೆ **"ಸಿರಿಗೆ ಹೇಳದೆ ಸೆರಗ ಸಂವರಿಸದೆ ಗರುಡನ ಮೇಲೆ ಗಮನವಾಗದೆ ಸರ್ರನೆ ತಾ ಬಂದು ಚಕ್ರವ ಬಿಟ್ಟಿ ನಕ್ರವ ಸಂಹರಿಸಿದವನು"** ಎಂದು ಮತ್ತೊಂದು ಕಡೆ ಸ್ತೋತ್ರ ಮಾಡುತ್ತಾರೆ. ಅಂತೆ ಈ ಸಡಗರದ ವಾತಾವರಣದಲ್ಲಿ ರಥ ದಲ್ಲಿ ಮಡದಿ ಮಹಾಲಕುಮಿಯೊಂದಿಗೆ ಕೂಡಲೇ ಬಾ ಎಂದು ಭಕ್ತಿ ಪರವಶರಾಗಿ ಕರೆದರು.ಆಗ ರಥ ಓಡುತ್ತ ಬಂತು. ಬ್ರಹ್ಮೋತ್ಸವದ ರಥ ಓಡಿ ಬಂದರು ಸಹಸ್ರಾರು ಜನ ಸಿಕ್ಕಿ ಹಾಕಿಕೊಳ್ಳುತ್ತಾರೆ. ನಿಧಾನಕ್ಕೆ ಬರಲು ಹೇಳು ಎಂದು ವಿಜಯ ದಾಸರು ಹೇಳಿದರೆ,

**ನಡೆದು ಬಾರಯ್ಯ ನೀನು ಭವಕಡಲಿಗೆ ಕುಂಭಸಂಭವ।**
**ಸಡಗರದಿಂದ ಮೆಲ್ಲಡಿಯನಿಡುತ ಬೇಗ**
**ಎಡಬಲದಲಿ ನಿನ್ನ ಮಡದೆರಿಂದೊಪ್ಪುತ**
**ತಡ ಮಾಡದೆ ಬಾ ಮೃಡಸಖ ವೆಂಕಟ**
**ವಿಜಯದಶಮಿ ಆಶ್ವಯುಜ ಮಾಸ**
**ಶುದ್ಧದಲ್ಲಿ ನಿಜರಥ ರೂಢನಾಗಿ ಸುಜನ ರಿಂದೊಡಗೂಡಿ**
**ಗಜಸಿಂಹಮಯೂರ ದ್ವಿಜಸಿಂಗ ಸಾರಂಗ ಮಜ**
**ಭಾಪುರೇ ಎನಲು ತ್ರಿಜಗವು ತಲೆ ದೂಗೆ**
**ಅಜನುಸ್ತುತಿಯು ಮಾಡೆ ಖಜುಗಣಾಧಿಪ ಪಾಡೆ**
**ಗಜಮುಖನಯ್ಯನು ನಿಜಾ ನಂದದಲಾಡೆ**
**ಭುಜಗಶ್ರೇಷ್ಟ ದ್ವಿಜರಾಜರು ಜಯವನ್ನೆ**
**ಕುಜನರೆದೆಯ ಮೆಟ್ಟಿ ರಜತಮ ಕಳೆಯುತ**

ಕುಂಭದಿಂದ ಬಂದವರು ಅಗಸ್ತ್ಯರು. ಅವರು ಸಮು ದ್ರದ ನೀರನ್ನೆಲ್ಲ ಆಪೋಶನ ಮಾಡಿದ್ದರು. ಆದರೆ ನೀನು ಸ್ವಾಮಿ ಭವಕಡಲು, ಸಂಸಾರ ಸಮುದ್ರಕ್ಕೆ ಅಗಸ್ತ್ಯರಂತೆ ಇದ್ದು ನಮ್ಮೆಲ್ಲರನ್ನು ಸಂಸಾರದಿಂದ ಪಾರು ಮಾಡು ಎನ್ನುತ್ತಾರೆ. ಮೇಲಿನ ಕೀರ್ತನೆಯಲ್ಲಿ ನಗ ಖಗ ಮೃಗ ಎಂದರು ಇಲ್ಲಿ ಅದರ ವ್ಯಾಖ್ಯಾನದಂತೆ ಗಜ, ಹಂಸ, ಮಯೂರ, ಪಕ್ಷಿಗಳು ಸಿಂಹ, ಜಿಂಕೆ ಎಂದು ಹೆಸರಿಸಿದ್ದಾರೆ.

ಅಜ ಅಂದರೆ ಬ್ರಹ್ಮ ಸ್ತೋತ್ರ ಮಾಡುವ ಖಜುಗಣಾಧಿಪ ವಾಯು ಹಾಡುವವ ಗಜ ಮುಖನಯ್ಯ ರುದ್ರದೇವರು ಆನಂದ ದಿಂದ ನಲಿದಾಡಲು ಶೇಷಾದಿಗಳು ರಾಜರು ಕೊಂಡಾಡು ವಾಗ ದುಷ್ಟರ ಎದೆಯ ಮೆಟ್ಟಿ ಶಿಷ್ಯರನ್ನು ಕಾಪಾಡಲು ಬಾ ಎಂದು ಕರೆದರು. ಆಗ ರಥ ನಿಧಾನವಾಗಿ ಬಂದು ಹೀಗೆ ನಡೆ ಎಂದರೆ ನಡೆಯುವ. ಭಕ್ತವತ್ಸಲನೆಂಬ ಬಿರುದು ಪೊತ್ತ ಮೇಲೆ ಭಕ್ತರಾಧೀನನಾಗಿರಬೇಡವೆ ಎಂಬಂತೆ ದಾಸರ ಅನು ಭವ ಅಂದರೆ ಭಗವಂತ ಭಕ್ತವತ್ಸಲ ಎಂಬುದನ್ನು ದಾಸರು ಈ ಕೀರ್ತನೆ ಯಲ್ಲಿ ತೋರಿದ್ದಾರೆ.



# ವೆಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

-ಡಾ|| ಸಿ.ಎಸ್. ಊರ್ಮಿಳಾ



**ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ।**
**ವೆಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ॥**
**ಶ್ರೀಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇರ್ಥಿನಾಂ।**
**ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ತೇ ನಮಃ**

ನಿಜ.ಶ್ರೀ ವೆಂಕಟೇಶ್ವರಸ್ವಾಮಿಗೆ ಮಿಗಿಲಾದ ದೇವರಿಲ್ಲ. ಕೃತಯುಗದಲ್ಲಿ ನರಸಿಂಹ, ತ್ರೇತಾಯುಗದಲ್ಲಿ ಶ್ರೀರಾಮ ಚಂದ್ರ, ದ್ವಾಪರಯುಗದಲ್ಲಿ ವಾಸುದೇವ, ಕಲಿಯುಗದಲ್ಲಿ ವೆಂಕಟನಾಯಕ ಎಂದು ಶ್ರೀಹರಿ ಹೆಸರುವಾಸಿಯಾಗಿದ್ದಾನೆಂದು, ಆದಿತ್ಯ ಪುರಾಣದ ಹೇಳಿಕೆಯನ್ನು ಸ್ಕಂದಪುರಾಣ ಹೇಳುತ್ತದೆ (ವೈಷ್ಣವಖಂಡ) ಶ್ರೀ ವೆಂಕಟೇಶ್ವರನ ದರ್ಶನದ ಮಹಾತ್ಮೆಯೇ ಅವರ್ಣನೀಯ ವೆಂಕಟೇಶನನ್ನು ಸ್ಮರಿಸಿದ ವರಿಗೆ ದುಃಖಭಯವಿಲ್ಲ. **"ಸ್ಮರನ್ ವೆಂಕಟೇಶಂ ಮಹಾ ದೇವಂ ನೇಹಾ ಮಂತ್ರ ದುಃಖ ಭಾಕ್''** ಎಂದು ಸ್ಕಂದಪುರಾಣ ಹೇಳುತ್ತದೆ (ಸ್ಕ.ಪು. 18-20)









**ಸರ್ವ ದೇವೈಕ ಶರಣಂ ಸರ್ವದೇವೈಕ ದೈವತಮ್ ॥**
**ಸಮಸ್ತ ದೇವಕವ'ಚಂ ಸರ್ವದೇವ ಶಿಖಾಮಣಿ ಃ॥।**

ಎಂದು ಬ್ರಹ್ಮಪುರಾಣ ವೆಂಕಟೇಶನನ್ನು ಸ್ತುತಿಸುತ್ತದೆ. ಇಂತಹ ಮಹಾಮಹಿಮನಾದ ವೆಂಕಟೇಶ ಸ್ವಾಮಿಯು ಈ ಧರೆಗೆ ಏಕೆ ಇಳಿದು ಬಂದ ಎಂಬುದು ಒಂದು ರೋಚಕ ವಾದ ಪ್ರಸಂಗ,

**ಶ್ರೀವೈಕುಂಠಂ ವಿರಕ್ತಾಯ ಸ್ವಾಮಿ ಪುಷ್ಕರಿಣಿ ತಟೇ**
**ರಮಯಾ ರಮಮಾಣಾಯ ವೆಂಕಟೇಶಾಯ ಮಂಗಳಂ।**

ಎಂದು ಸ್ತುತಿಸಿದ್ದಾರೆ. ಪರಮಪದ, ಪರಮ ವೈಕುಂಠಕ್ಕಿಂತ ಈ ಧರೆಯೇ ಮೇಲು ಎನ್ನುತ್ತಾ ಬಂದನಲ್ಲಾ ಅದರ ರಹಸ್ಯವಾದರೂ ಏನಾಗಿರಬಹುದು? ಇದೂ ಸಹ ಭಗವದ್ಭಕ್ತರಿಗೆ ಚಿರಪರಿಚಿತ ವಿಷಯವೇಸರಿ, ಇದರ ಸ್ವಾರಸ್ಯಕರ ಹಿನ್ನೆಲೆ ಚಿರಪರಿಚಿತವಾಗಿದೆ.

ಒಮ್ಮೆ ಸಕಲ ಮಹರ್ಷಿಗಳೂ ಒಂದೆಡೇ ಸೇರಿ ಚರ್ಚೆ ಮಾಡಿದರಂತೆ. ಸರ್ವೋತ್ತಮನಾದ, ಗುಣಪೂರ್ಣನೂ ಆದ ದೇವತೆ ಯಾರೆಂದು ತಿಳಿದುಕೊಂಡು ಬನ್ನಿ ಎಂದು ಭೃಗು ಮಹರ್ಷಿಗೆ ಹೇಳುತ್ತಾರೆ. ಅದರಂತೆ ಅವರು ಬ್ರಹ್ಮಲೋಕಕ್ಕೆ ಬರುತ್ತಾರೆ. ಅಲ್ಲಿ ಬ್ರಹ್ಮ ಸಂಗೀತ ನೃತ್ಯ ಕಾರ್ಯಕ್ರಮದಲ್ಲಿ ಬ್ರಹ್ಮ ಮೈಮರೆತ್ತಿದ್ದನು. ಬ್ರಹ್ಮನು ಭೃಗುಮಹರ್ಷಿಯ ಆಗಮನವನ್ನೇ ಗಮನಿಸಲಿಲ್ಲ. ಕುಪಿತರಾದ ಭೃಗು ಮಹರ್ಷಿಯು ಬ್ರಹ್ಮಲೋಕವನ್ನು ಬಿಟ್ಟು ಕೈಲಾಸಕ್ಕೆ ಬಂದರು. ಕೈಲಾಸದಲ್ಲಿ ಶಿವ-ಪಾರ್ವತಿಯರು ಸರಸ ಸಲ್ಲಾಪದಲ್ಲಿ







ಮಗ್ನವಾಗಿದ್ದರು. ರಸಭಂಗವಾಯಿತಲ್ಲಾ ಎಂದು ಶಿವನು ಭೃಗು ಮಹರ್ಷಿಗೆ ಹೊಡೆಯಲಿಕ್ಕೇ ಬರುತ್ತಾರೆ.

ಮುಂದೆ ಭೃಗು ಮಹರ್ಷಿಯು ವೈಕುಂಠಕ್ಕೆ ಬರುತ್ತಾರೆ. ಅಲ್ಲಿ ಭಗವಾನ್ ವಿಷ್ಣುವು ಯೋಗನಿದ್ರೆಯಲ್ಲಿದ್ದನು. ಇವನನ್ನು ಕಂಡ ಭೃಗು ಮಹರ್ಷಿಯು ಒಮ್ಮೆ ಶ್ರೀಹರಿಗೆ ಒದ್ದಾಗ ಅವನು ಪಶ್ಚಾತ್ತಾಪಪಟ್ಟು ಭೃಗು ಮಹರ್ಷಿಗಳ ಕ್ಷಮೆ ಕೇಳಿ ಉಪಚರಿಸುತ್ತಾನೆ. ಅವರು ಶ್ರೀಹರಿಯೇ ಸರ್ವೋತ್ತಮ, ತ್ರಿಗುಣ ವರ್ಜಿತ ಎಂದು ಲೋಕಕ್ಕೆ ಸಾರುತ್ತಾರೆ. ಆದರೇನು? ಈ ವಿಷಯದಲ್ಲಿ ಒಂದು ಎಡವಟ್ಟಾಯಿತು. ನಾರಾಯಣನ ವಕ್ಷಸ್ಥಲಕ್ಕೆ ಒಮ್ಮೆ ಭೃಗುಮಹರ್ಷಿಯು ಒದ್ದಾಗ ಅಲ್ಲಿ ವಾಸಿಸುತ್ತಿದ್ದ (ಹೃದಯ ಕಮಲದಲ್ಲಿ) ಲಕ್ಷ್ಮಿಯು ಅತ್ಯಂತ ಕುಪಿತಳಾದಳು. ಅವಳು ಕೋಪಿಸಿಕೊಂಡು ಕೊಲ್ಲಾಪುರಕ್ಕೆ ಬಂದು ನೆಲಸಿ ತನ್ನ ಭಕ್ತ ಜನರನ್ನು ಸಲಹುತ್ತಿದ್ದಾಳೆ ಎಂಬ ಐತಿಹ್ಯ ಇಂದಿಗೂ ಇದೆ. ಈ ಘಟನೆಯ ಬಗ್ಗೆ ಪುರಂದರದಾಸರು ಅತ್ಯಂತ ಮನೋಹರವಾಗಿ ವರ್ಣಿಸಿದ್ದಾರೆ.

**ವರ್ಣಿಸಲಾರೆ ಕೊಲ್ಹಾಪುರ ಲಕ್ಷ್ಮಿಯಾ**
**ಕನ್ಯಪದ್ಮಿನಿಯ ಸಹೋದರಿಯಾ।**
**ಭೃಗು ಮುನಿಹರಿಯಂಒದೆಯಲು ಕಾಲಿನಿಂ**
**ಅಧಿಕಕುಪಿತಳಾಗಿ ತಾ ತಿರುಗಿ**
**ಮಡದಿಯರಿಗೆ ತಾ ವರಗಳ ನೀಡುತಾ।**
**ಸಡಗರದಿಂದಿಹ ಸತಿಮಣಿಯಾ॥**

# ತಿರುಮಲೆಯಲ್ಲಿ ಶ್ರೀನಿವಾಸನ ನಿತ್ಯೋತ್ಸವಗಳು



ತಿರುಮಲೆಯಲ್ಲಿ ಪ್ರತಿದಿನ ಬೆಳಗಿನ ಜಾವದಲ್ಲಿ ಸುಪ್ರಭಾತದಿಂದ ಮೊದಲುಗೊಂಡು ರಾತ್ರಿ ಏಕಾಂತ ಸೇವೆವರೆಗೂ ಸ್ವಾಮಿಯವರಿಗೆ ಎಷ್ಟೋ ಸೇವೆಗಳು, ಉತ್ಸವಗಳು ನಡೆಯುವುದ್ದಕ್ಕೆ **"ನಿತ್ಯೋತ್ಸವ"** ಎನ್ನುತ್ತಾರೆ. ತಿರುಮಲೆ ಶ್ರೀನಿವಾಸ ಸ್ವಾಮಿಗೆ ವರ್ಷದುದ್ದಕ್ಕೂ 1.ನಿತ್ಯೋತ್ಸವಗಳು 2.ವಾರೋತ್ಸವಗಳು 3.ಮಾಸೋತ್ಸವಗಳು 4.ವಾರ್ಷಿಕೋತ್ಸವಗಳು ಇಲ್ಲವೇ ಸಂವತ್ಸರೋತ್ಸವಗಳು. ಹೀಗೆ ನಾಲ್ಕು ವಿಧದಲ್ಲಿ ಅತ್ಯಂತ ವೈಭವವಾಗಿ ನಡೆಯುತ್ತದೆ.

ತಿರುಮಲೆಯಲ್ಲಿ ಶ್ರೀಸ್ವಾಮಿಯವರಿಗೆ ನಡೆಯುವ ಮೊದಲ ಸೇವೆ ಸುಪ್ರಭಾತ. ಶಯನ ಮಂಟಪದಲ್ಲಿ ರೇಷ್ಮೆ ಹಾಸಿಗೆಯ ಮೇಲೆ ಮಲಗಿರುವ ಶ್ರೀನಿವಾಸ ಪ್ರಭುವನ್ನು ಎಬ್ಬಿಸುವುದಕ್ಕೆ ಸುಪ್ರಭಾತ ಎನ್ನುತ್ತಾರೆ. ಪ್ರತಿದಿನ ಬೆಳಗಿನ ಜಾವದಲ್ಲಿ ಚಿನ್ನದ (ಬಂಗಾರದ) ಬಾಗಿಲ ಮುಂದೆ ಆಚಾರ್ಯ ಪುರುಷರು **"ಕೌಸಲ್ಯಾ ಸುಪ್ರಜಾರಾಮ......"** ಎಂದು ಸುಪ್ರಭಾತ ಶ್ಲೋಕಗಳನ್ನು ಹೇಳುತ್ತಿರುವಾಗ ಅದೇ ಸಮಯದಲ್ಲಿ ತಾಳ್ಳಪಾಕ ಅನ್ನಮಯ್ಯ ವಂಶಸ್ಥರು ಒಬ್ಬರು **'ಮೇಲುಕೋ ಶೃಂಗಾರರಾಯ........'** ಅನ್ನುತ್ತಾ ಮೇಲುಕೊಲುವು (ಎಬ್ಬಿಸುವ) ಹಾಡುತ್ತಾರೆ. ಈ ಸಮಯದಲ್ಲಿ ಅರ್ಚಕರು, ಜಿಯ್ಯರ್, ಆಲಯ ಅಧಿಕಾರಿಗಳು ಸುಪ್ರಭಾತ ಸೇವೆಗೆ ಟಿಕೆಟ್ ಪಡೆದ ಭಕ್ತರೆಲ್ಲರೂ ಬಂಗಾರದ ಬಾಗಿಲ ಮುಂದೆ ಸೇರಿ ಯಾವಾಗ ಚಿನ್ನದ ಬಾಗಿಲು ತೆರೆಯುತ್ತಾರೆ ಎಂದು ನಿರೀಕ್ಷಿಸುತ್ತಾರೆ.

ಬಂಗಾರದ ಬಾಗಿಲ ಮುಂದೆ ಆಚಾರ್ಯರು ಸುಪ್ರಭಾತವನ್ನು ಪೂರ್ತಿಮಾಡಿದ ನಂತರ ಬಂಗಾರದ ಬಾಗಿಲು ತೆರೆಯುತ್ತಾರೆ. ಎಲ್ಲರೂ ಒಬ್ಬರ ನಂತರ ಒಬ್ಬರು ಹೋಗಿ ಸ್ವಾಮಿಯ ದರ್ಶನ ಆರತಿ, ತೀರ್ಥ ಶಠಾರಿಗಳನ್ನು ಸ್ವೀಕರಿಸುತ್ತಾರೆ. ಕೊನೆಯದಾಗಿ ಟಿಕೆಟ್ ಪಡೆದ ಭಕ್ತರು ಹೋಗಿ ಶ್ರೀಸ್ವಾಮಿಯವರನ್ನು ದರ್ಶಿಸುತ್ತಾರೆ. ಸುಪ್ರಭಾತ ಸೇವೆಯಲ್ಲಿ ಸಿಗುವ ಶ್ರೀ ಹರಿಯ ಆಪಾದಮಸ್ತಕ ದರ್ಶನವನ್ನು **"ವಿಶ್ವರೂಪ ಸಂದರ್ಶನ"** ಎನ್ನುತ್ತಾರೆ. ಈ ದರ್ಶನದಲ್ಲಿ ಸಿಗುವ ಸ್ವಾಮಿಯ ಪಾದದರ್ಶನ ಮಾಡಿದರೆ ಸಾಕು ಪಾಪಗಳೆಲ್ಲಾ ತೊಲಗುತ್ತವೆ. ಆದ್ದರಿಂದಲೇ **"ಪಾದದರ್ಶನಂ ಪಾಪ ವಿಮೋಚನಂ"** ಎಂದು ಪ್ರಸಿದ್ಧಿ ಹೊಂದಿದೆ.

**ನಂದನಕಂದ ಮುಕುಂದ ನರ್ಧಾಂಗಿಯ**
**ಇಂದಿರಾಪತಿ ಶ್ರೀ ಗೋವಿಂದನ ಸತಿಯಾ**
**ತಂದೆ ಶೇಷಾದ್ರೀಶನ ಮೇಲೆ ಕೋಪಿಸಿ**
**ಬಂದು ನೆಲಸಿದಾ ಕೊಲ್ಹಾಪುರ ಲಕ್ಷ್ಮಿಯಾ॥**



**"ಸಿರಿ ಇಲ್ಲದ ವೈಕುಂಠ ಸರಿಬಾರದೆಂದು, ವೈಕುಂಠಕ್ಕಿಂತ ವೆಂಕಟ ಗಿರಿಯೇ ಮೇಲೆಂದು"** ಅಲ್ಲಿಗೆ ಬಂದು ಒಂದು ಹುತ್ತದಲ್ಲಿ ವಾಸ ಮಾಡುತ್ತಾನೆ. ಹೀಗಿರುವಲ್ಲಿ ಆಕಳರೂಪದಲ್ಲಿ ಬ್ರಹ್ಮ ಅಲ್ಲಿಗೆ ಬಂದು ಪ್ರತಿದಿನವೂ ಆ ಹುತ್ತದಲ್ಲಿ ಹಾಲು ಸುರಿಸುತ್ತಾನೆ. ಇದನ್ನು ಕಂಡು, ಆ ಆಕಳದ ಯಜಮಾನನ ಸೇವಕ ಅದನ್ನು **"ಕುಟ್ಟುವ ಸಮಯದಲ್ಲಿ ಥಟ್ಟನೆ ಹರಿ ಪೆಟ್ಟನು ತಾನು ಕೊಂಡ"** ಭೂವರಾಹಸ್ವಾಮಿಯನ್ನು ಕಾಡಿ ಬೇಡಿ ಇರಲು ಜಾಗ,ಪಥ್ಯದ ಅಡಿಗೆ ಮಾಡಲು ತಾಯಿ ಬಕುಳಾದೇವಿಯನ್ನು ವೆಂಕಟೇಶನು ಪಡೆದನು.



ಒಂದು ದಿನ ಶ್ರೀನಿವಾಸ ಬೇಟೆಗೆ ಹೋದಾಗ, ಪದ್ಮಾವತಿ ಇವನ ಬೇಟೆ ಆಡಿದಳು! ಅವಳೂ ಇವನನ್ನು ಮೋಹಿಸಿ ಕಾಮಜ್ವರಕ್ಕೆ ಬಲಿಯಾದಳು. ಅವಳಿಲ್ಲದೆ ನಾನಿರಲಾರೆ ಕಲ್ಯಾಣ ಕಟ್ಟು ಎಂದು ಶ್ರೀನಿವಾಸ ತಾಯಿಗೆ ದುಂಬಾಲು ಬಿದ್ದು ಆಕಾಶರಾಜನ ರಾಯಭಾರಕ್ಕೆ ಅವಳನ್ನು ಹೊರಡಿಸಿದ. ಇದಕ್ಕೂ ಸಮಾಧಾನವಾಗದೆ ವೆಂಕಟೇಶ ತಾನೇ ಕೊರವಂಜಿ ವೇಷಧರಿಸಿ, ಆಕಾಶರಾಜನ ಅರಮನೆಯ ಮುಂದೆ ಹೊರಟನು. ಶ್ರೀಹರಿ ಭಕ್ತರ ಅಭಿಮಾನಿಯಲ್ಲವೇ? ಭವರೋಗದ ವೈದ್ಯನಲ್ಲವೇ! ಅಲ್ಲೊಬ್ಬವನಿಕೆಯನು ಕಂಡ ಅವಳ ಮೇಲೆಯೇ ಮನಸ್ಸನ್ನು ಇಟ್ಟು. ಆ ಮುನಿಯೇ ಅವನನ್ನು ಮೋಹಿಸಿ, ಕಾಮಜ್ವರದಿಂದ ಬಳಗೆ ಮಲಗಿದಳು. ಆ ವೆಂಕಟೇಶನನ್ನೇ ಸ್ಮರಿಸುತ್ತಾ ತಪೋನಿರತ ಳಾದಳು ಪದ್ಮಾವತಿ ಶಾಂತಮೂರುತಿ ಪಡೆದು ಹೊರತು ಅಂತರಂಗ ಜ್ವರ ಶಾಂತವಾಗದು ತನ್ನನ್ನು ಕರೆಸಿದ ಈ ಅರಸಿಗೆ ಬೆಟ್ಟದ ವೆಂಕಟ ಪತಿಗೆ ಈಕೆಯನ್ನು ಕೊಟ್ಟರೆ ಸುಖಪಟ್ಟಳು. ಕೊಡದೆ ಬಿಟ್ಟರೆ ಮರಣ ತಪ್ಪದು ಎಂದು ಹೆದರಿಸಿದ. ಅಂತ ಹೀಗೆ ಪದ್ಮಾವತಿಯನ್ನು ಮದುವೆಯಾದನು. ಹೀಗೆ ಶ್ರೀನಿವಾಸ ಕಲ್ಯಾಣ ಸಂಭ್ರಮದಿಂದ ನಡೆಯಿತು. ದೇವಾನು ದೇವತೆಗಳು ಈ ಕಲ್ಯಾಣ ಸಂಭ್ರಮದಲ್ಲಿ ಭಾಗವಹಿಸಿದರು.





ಈ ಪರಮಾತ್ಮನನ್ನು ಸ್ತುತಿಸದ ಭಕ್ತರೇ ಇಲ್ಲ. ಸರ್ವರಿಗೂ ವರವನ್ನು ಕೊಡುವ ಕಲಿಯುಗದ ವರದನಾಗಿ ಮೆರೆದ ಶ್ರೀವೆಂಕಟೇಶ ಇಂತಹ ಮಹಾಮಹಿಮ ಕರುಣಾಸಾಗರ ಶ್ರೀವೆಂಕಟೇಶನ ಕೃಪೆ ನಮ್ಮೆಲ್ಲರ ಮೇಲೆ ಇರಲಿ ಎಂದು ಅವನನ್ನೇ ಪ್ರಾರ್ಥಿಸೋಣ.





# ಅನಂತ ಪದ್ಮನಾಭ ಸ್ವಾಮಿಯ ಚರಿತ್ರೆ

**– ಗೋವರ್ಧನ್ ಪಾಣಿ. ಬಿ. ಆರ್**

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲೂಕು, ಕುಂಬಾಲ ಹಳ್ಳಿಯ ಒಡೆಯನ ಕೆರೆಯಲ್ಲಿ ಶ್ರೀ ಅನಂತಪದ್ಮನಾಭಸ್ವಾಮಿ ದೇವಾಲಯದ ಈ ಹಿನ್ನೆಲೆಯಲ್ಲಿ ಈ ಮಂದಿರದ ಪೌರಾಣಿಕ ಹಿನ್ನೆಲೆಯೇನು ಎಂಬುದನ್ನು ನೋಡೋಣ.

ಒಂದಾನೊಂದು ಕಾಲದಲ್ಲಿ ಅಂಬಾಜಿ ದುರ್ಗ ಎಂಬ ಊರಲ್ಲಿ ಆದಿಕೇಶವನೆಂಬ ಶ್ರೀ ವೈಷ್ಣವ ದೈವಭಕ್ತನಿದ್ದನಂತೆ. ಈತ ಭಕ್ತಿಯಿಂದ ಅನಂತಪದ್ಮನಾಭ ಸ್ವಾಮಿಯನ್ನು ಪೂಜಿಸಿ ಚಾಚು ತಪ್ಪದೇ ಸೇವಾಕೈಂಕರ್ಯಗಳನ್ನು ನಡೆಸುತ್ತಾ ಇಬ್ಬರು ಸತಿಯರೊಂದಿಗೆ ಸಭ್ಯ ಗೃಹಸ್ಥನಾಗಿ ಜೀವನ ನಿರ್ವಹಿಸುತ್ತಿದ್ದ. ಮೊದಲನೆಯ ಪತ್ನಿಗೆ ಏಳು ಹೆಣ್ಣು ಮಕ್ಕಳಾದವು. ಎರಡನೆಯ ಪತ್ನಿಗೆ ಸಂತಾನ ಭಾಗ್ಯಲಭಿಸಲಿಲ್ಲ. ಇದನ್ನು ಕಂಡ ಮೊದಲ ಪತ್ನಿ. ಒಂದು ದಿನ ಆದಿಕೇಶವನ ಬಳಿ ಈ ವಿಷಯ ಪ್ರಸ್ತಾಪಿಸಿದಳು. ಯಾಗದ ಫಲದಿಂದ ತನ್ನ ಸಹೋದರಿಗೆ ಸಂತಾನ ಭಾಗ್ಯ ಕರುಣಿಸಿ ಲೋಕನಿಂದನೆಯಿಂದ ಪಾರು ಮಾಡುವಂತೆ ಮನವಿ ಮಾಡಿದಳು. ಪತ್ನಿಯ ಮನವಿಯನ್ನು ಪುರಸ್ಕರಿಸಿ ತಪೋನಿಷ್ಠನಾಗಿ ಅಷ್ಟಾಕ್ಷರಿ ಮಹಾಯಾಗಕ್ಕೆ ಆದಿಕೇಶವ ಉಪಕ್ರಮಿಸುತ್ತಾನೆ.

ಸಾಂಗೋಪಾಂಗವಾಗಿ ನೆರವೇರುತ್ತಿದ್ದ ಯಾಗದ ಅಂತಿಮ ಘಟ್ಟದಲ್ಲಿ ಶೇಷಶಯನ ಆದಿಶೇಷ ಪ್ರಸನ್ನ ಚಿತ್ತನಾಗಿ ಸಪ್ತ ಮುಖಿಯಾಗಿ ಸಾಕ್ಷಾತ್ಕರಿಸಿ ಆದಿಕೇಶವನ ಅಭಿಷ್ಟವೇನೆಂದು ಪ್ರಶ್ನಿಸುತ್ತಾನೆ. **"ಬಂಜೆಯಾಗಿರುವ ನನ್ನ ದ್ವಿತೀಯ ಪತ್ನಿಗೆ ನಿನ್ನಂತಹುದೇ ಸಂತಾನ ಫಲವನ್ನು ಕರುಣಿಸು"** ಎಂದು ಬೇಡಿಕೊಂಡಾಗ ಆದಿಶೇಷನು ಫಲವೊಂದನ್ನು ನೀಡಿ ತಥಾಸ್ತು ಎನ್ನುತ್ತಾನೆ.

ಈ ರೀತಿ ಆದಿಶೇಷನಿಂದ ವರಪ್ರಸಾದ ಪಡೆದ ಆದಿಕೇಶವ, ಸಂತಾನ ಫಲವನ್ನು ತನ್ನ ದ್ವಿತೀಯ ಪತ್ನಿಗೆ ನೀಡುತ್ತಾನೆ. ಫಲವನ್ನು ಸೇವಿಸಿದ ಆಕೆ ಗರ್ಭಧರಿಸಿ, ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ವರದ ಫಲವಾಗಿ ಜನಿಸಿದ ಆ ಗಂಡು ಮಗು ಆದಿಶೇಷನ ಪ್ರತಿರೂಪವಾಗಿದ್ದು, ಸಪ್ತ ಮುಖಿಯಾಗಿ ಸರ್ಪಾಕಾರದಲ್ಲಿರುತ್ತದೆ. ದೈವದ ಪ್ರೇರಣೆಯಂತೆ ಮಗುವನ್ನು ಇಷ್ಟಪ್ರದವಾಗಿ ಪೋಷಿಸುತ್ತಾರೆ. ತಂದೆ, ತಾಯಂದಿರು ಮತ್ತು ಏಳು ಜನ ಸಹೋದರಿಯರ ಮುದ್ದಿನ ಕಣ್ಮಣಿಯಾಗಿ ಆ ಬಾಲಕ ಬೆಳೆಯುತ್ತಾನೆ.

ಏಳು ಜನ ಸಹೋದರಿಯರು ಮೈನೆರೆತು ವಿವಾಹ ಪ್ರಾಯರಾಗುತ್ತಾರೆ. ಸುತ್ತಮುತ್ತಲ ಗ್ರಾಮಗಳಿಂದ ಕನ್ಯಾನ್ವೇಷಣೆಯ ಆಸಕ್ತರು ಇವರ ಮನೆಗೆ ಬರುತ್ತಾರೆ. ಅಲ್ಲಿ ಸರ್ಪಾಕೃತಿಯಾದ ಆದಿಶೇಷವನ್ನು ಕಂಡು ಅಪಶಕುನವೆಂದು ಭಾವಿಸಿ ಸಹೋದರಿಯರನ್ನು ತಿರಸ್ಕರಿಸುತ್ತಾರೆ. ಈ ವಿಚಾರವನ್ನು ಮನಗಂಡ ಆ ಗ್ರಾಮದ ಪ್ರಮುಖ ಹೆಣ್ಣು ಮಕ್ಕಳಿಗೆ ಮದುವೆಯಾಗುವವರೆಗೂ ನಿಮ್ಮ ಮಗ ಆದಿಶೇಷ ಯಾರ ಕಣ್ಣಿಗೂ ಬೀಳದಿದ್ದರೆ ಒಳಿತು ಎಂದು ಸಲಹೆ ನೀಡುತ್ತಾನೆ. ಆದಿಕೇಶವ ಒಲ್ಲದ ಮನಸ್ಸಿನಿಂದಲೇ ಮಗನ ಬಳಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ಮಗ ತಂದೆಗೆ ವಾಗ್ದಾನವಿತ್ತು ವಾಡೆಯ ಕೆಳಗಡೆ ವಾಸಸ್ಥಾನವನ್ನು ಏರ್ಪಡಿಸಿಕೊಳ್ಳುತ್ತಾನೆ.

ಕೆಲ ದಿನಗಳ ನಂತರ ವಿವಾಹ ಪ್ರಾಯರಾದ ಏಳು ಜನ ಗಂಡು ಮಕ್ಕಳ ತಂದೆಯೊಬ್ಬ ಇವರ ಮನೆಗೆ ಬಂದು ಈ ಏಳು ಜನ ಸಹೋದರಿಯರೊಂದಿಗೆ ವಿವಾಹಕ್ಕೆ ಸಮ್ಮತಿ ಪಡೆಯುತ್ತಾನೆ.

ವಿವಾಹದ ಪೂರ್ವೋತ್ತರ ಕಾರ್ಯಗಳೆಲ್ಲ ಸುಸೂತ್ರವಾಗಿ ನಡೆದು ನಿಶ್ಚಿತಾರ್ಥಕ್ಕೆ ಅವರು ಸಿದ್ಧರಾಗುತ್ತಾರೆ. ಆದಿಶೇಷ ಅದುವರೆಗೂ ಇವರಾರ ಕಣ್ಣಿಗೂ ಬೀಳದೇ ಅಜ್ಞಾತವಾಗಿಯೇ ಉಳಿಯುತ್ತಾನೆ. ಪಂಚಭಕ್ಷ್ಯ ಪರಮಾನ್ನಗಳು ಸಿದ್ಧವಾಗುತ್ತವೆ. ಪಾಯಸವನ್ನು ಸಿದ್ಧಗೊಳಿಸಿದ ಭಟ್ಟನೊಬ್ಬ ಪಾಯಸದ ಪಾತ್ರೆಯನ್ನು ಇಡಲು ಸಿಂಬೆಗಾಗಿ ಹುಡುಕಾಡಿ ವಾಡೆಯ ಕೆಳಗೆ ಪವಡಿಸಿದ್ದ ಆದಿಶೇಷನನ್ನೇ ಸಿಂಬೆಯೆಂದು ಭ್ರಮಿಸಿ ಅವನ ಮೇಲೆ ಕುದಿಯುತ್ತಿದ್ದ ಪಾಯಸದ ಪಾತ್ರೆಯನ್ನಿಡುತ್ತಾನೆ.ಆದರೂ ಆದಿಶೇಷ ತನ್ನ ನೋವನ್ನು ತೋರ್ಪಡಿಸದೇ ಮೌನವಾಗಿರುತ್ತಾನೆ. ವರನ ಕಡೆಯವರು ನಿರ್ಗಮಿಸಿದ ಮೇಲೆ ಆದಿಶೇಷ ನೋವು ತಾಳಲಾರದೆ ಜೋರಾಗಿ ಆಕ್ರಂದಿಸುತ್ತಾನೆ. ತಾಯಂದಿರಿಬ್ಬರೂ ಸುಟ್ಟು ಕರಕಲಾದ ತಮ್ಮ ಮಗನ ದೇಹವನ್ನು ಕಂಡು ವಿಲಾಪಿಸುತ್ತಾ ಎದೆಯೊಡೆದು ಸಾವನ್ನಪ್ಪುತ್ತಾರೆ. ಇದನ್ನು ಕಂಡು ಏಳು ಜನ ಸಹೋದರಿಯರು ಇದಕ್ಕೆಲ್ಲ ತಾವೇ ಕಾರಣರಾದೆವಲ್ಲಾ ಎಂದು ರೋದಿಸುತ್ತಾ ಅವರೂ ಮರಣ ಹೊಂದುತ್ತಾರೆ.




## ಭಕ್ತರಿಗೆ ವಿಜ್ಞಪ್ತಿ

**ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸಲಾಗಿದೆ.**

1. 60 ವರ್ಷ ವಯಸ್ಸಿನವರು ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ,ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.

2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತಬಾರದು.

3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂಧ್ರತೆಯಿಂದ ಹೃದಯದ ತೊಂದರೆಗಳು ಮತ್ತು ಆಸ್ತಮಾ ಹೆಚ್ಚಾಗಬಹುದು.

4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳಿ. ಅಲಿಪಿರಿ ನಡೆದು ಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.

6.ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರುಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯವನ್ನು ಪಡೆಯಬಹುದು.

7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರುಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯ ಲಭ್ಯವಿದೆ.



ಈ ಮರಣಕಾಂಡವನ್ನು ಕಂಡ ತಂದೆ ಆದಿಕೇಶವ ಕಣ್ಣೀರು ಸುರಿಸುತ್ತಾ ತನ್ನವರನ್ನೆಲ್ಲಾ ಕಳೆದುಕೊಂಡು ತಾನು ಬದುಕಿದ್ದೇನು ಫಲ ಎಂದು ಆದಿಶೇಷನನ್ನು ಪ್ರಶ್ನಿಸುತ್ತಾನೆ. ಆಗ ಆದಿಶೇಷ ಎಲ್ಲವೂ ದೈವ ನಿರ್ಣಯದಂತೆ ಆಗಿದ್ದೆಂದು ತಿಳಿಸಿ ತನ್ನ ಜನ್ಮ ರಹಸ್ಯವನ್ನು ವಿವರಿಸುತ್ತಾನೆ. ಹಿಂದೆ ಸಮುದ್ರಮಂಥನ ಕಾಲದಲ್ಲಿ ಶ್ರೀಮನ್‌ನಾರಾಯಣನು ಅಮೃತ ಉದ್ಭವವಾಗುವ ಕಾಲಕ್ಕೆ ಗರಳವನ್ನು ರಾಕ್ಷಸರೆಡೆಗೆ ಬಿಡಬೇಕೆಂದು ಆದೇಶಿಸುತ್ತಾನೆ. ಅಮೃತ ಉದ್ಭವವಾಗುವ ಸಮಯಕ್ಕೆ ಸರಿಯಾಗಿ ತನ್ನ ಸಾವಿರ ಹೆಡೆಗಳಿಂದ ವಿಷವನ್ನು ಕಕ್ಕುತ್ತಾನೆ. ಆದರೆ ಸಮುದ್ರಮಂಥನಕ್ಕೆ ಹಗ್ಗವಾಗಿ ಮಂದರ ಪರ್ವತವನ್ನು ಸುತ್ತುವರೆದ ಆದಿಶೇಷ ಮಂಥನದ ತೀವ್ರ ಆಯಾಸದಿಂದ ಮೈ ಮರೆತು ಬಾಲದ ಕಡೆಯಿಂದ ದೇವತೆಗಳ ಮೇಲೆ ಎರಡು ಹನಿ ವಿಷವನ್ನು ಕಕ್ಕಿ ಬಿಡುತ್ತಾನೆ. ತನ್ನ ಆದೇಶವನ್ನು ಉಲ್ಲಂಘಿಸಿದನೆಂದು ಕೃದ್ರನಾದ ಮಹಾವಿಷ್ಣು ಭೂಲೋಕದಲ್ಲಿ ಜನ್ಮ ತಾಳುವಂತೆ ಶಪಿಸುತ್ತಾನೆ. ಆದಿಶೇಷ ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಯಾವುದೆಂದು ಪರಿಪರಿಯಾಗಿ ಪ್ರಾರ್ಥಿಸಿದಾಗ ಶಾಂತನಾದ ಲಕ್ಷ್ಮೀಪತಿಯು ಭೂಲೋಕದಲ್ಲಿ ಸದ್ಗೃಹಸ್ಥ ಶ್ರೀವೈಷ್ಣವನ ಮನೆಯಲ್ಲಿ ಜನ್ಮ ತಳೆದು ಅಗ್ನಿಗೆ ಆಹುತಿಯಾಗಿ ಪರಿಶುದ್ಧನಾದ ನಂತರ ಶಾಪ ವಿಮೋಚನೆಯಾಗುತ್ತದೆ. ನಿನ್ನ ಮಾನವ ರೂಪಿ ದೇಹದ ಅಂತ್ಯ ಸಂಸ್ಕಾರವಾದ ಜಾಗದಲ್ಲಿ ಶ್ರೀದೇವಿ ಸಮೇತವಾಗಿ ನಾನು ಬಂದು ನೆಲೆಸು

ತ್ತೇನೆ ಎಂದು ತಿಳಿಸುತ್ತಾನೆ. ಈ ಕಥೆಯನ್ನು ಕೇಳಿದ ಆದಿಕೇಶವ ಈಗ ತಾನೇನು ಮಾಡುವುದೆಂದು ಪ್ರಶ್ನಿಸುತ್ತಾನೆ. ಮೂರು ಎತ್ತಿನ ಬಂಡಿಗಳನ್ನು ಕಟ್ಟಿಸಿ ಒಂದರಲ್ಲಿ ತಾಯಂದಿರ ದೇಹಗಳನ್ನು ಮತ್ತೊಂದರಲ್ಲಿ ಸಹೋದರಿಯರ ದೇಹಗಳನ್ನು ಇನ್ನೊಂದರಲ್ಲಿ ತನ್ನ ದೇಹವನ್ನು ಇಟ್ಟು ಪಶ್ಚಿಮಾಭಿಮುಖವಾಗಿ ಹೊರಟು ಎಲ್ಲಿ ತನ್ನ ದೇಹ ತಣ್ಣಗಾಗುವುದೋ ಅಲ್ಲಿ ಸಂಸ್ಕಾರ ನಡೆಸಬೇಕೆಂತಲೂ, ತನ್ನ ತಲೆಯ ಬಳಿ ತನ್ನ ತಾಯಂದಿರ, ಕಾಲುಗಳ ಬಳಿ ತನ್ನ 7 ಜನ ಸಹೋದರಿಯರ ಸಂಸ್ಕಾರ ನಡೆಸಬೇಕು ಎಂದು ತಿಳಿಸುತ್ತಾನೆ.ಮುಂದುವರಿದು, ಅವರ ಸಂಸ್ಕಾರ ನಡೆಸಿದ ಜಾಗದ ಮೇಲೆ ನಾಲ್ಕು ಸ್ತಂಭಗಳು ಸ್ಥಾಪಿಸಿ ಅದರ ಮೇಲೆ ಪುಟ್ಟದೊಂದು ದೇವಾಲಯ ನಿರ್ಮಿಸಿ ಆ ದೇವಾಲಯದ ಪೂಜಾ ಕೈಂಕರ್ಯಗಳನ್ನು ತಪ್ಪದೇ ನೆರವೇರಿಸಿ ಮೋಕ್ಷ ಪಡೆಯಬೇಕೆಂದು ತಿಳಿಸುತ್ತಾನೆ ಎಂಬುದು ಇಲ್ಲಿನ ಪೌರಾಣಿಕ ಪ್ರತೀತಿ. ಇದಕ್ಕೆ ಪೂರಕವಾಗಿ, ಇಲ್ಲಿ ಪ್ರತಿಷ್ಠಾಪಿಸಲಾಗಿರುವ ಅನಂತಪದ್ಮನಾಭ ಸ್ವಾಮಿ ದೇವರ ತಲೆಯ ಬಳಿ ಇಬ್ಬರು ಮಾತೃ ಮೂರ್ತಿಗಳ ಹಾಗೂ ಕಾಲುಗಳ ಬಳಿ ಏಳು ಜನ ಸಹೋದರಿಯರ ವಿಗ್ರಹಗಳನ್ನು ಕಾಣಬಹುದಾಗಿದೆ.

ಒಮ್ಮೆ ಮುಮ್ಮಡಿ ಕೃಷ್ಣ ರಾಜೇಂದ್ರ ಒಡೆಯರ್ ಈ ಮಾರ್ಗವಾಗಿ ಬಂದಾಗ, ಈ ದೇವಾಲಯ ಹಾಗೂ ಪ್ರಕೃತಿಯ ಸಿರಿಯನ್ನು ಕಂಡು ಇಲ್ಲಿ ತಡೆಗೋಡೆಯೊಂದನ್ನು ನಿರ್ಮಿಸಿ ಕೆರೆಯನ್ನು ಕಟ್ಟುವಂತೆ ಅಜ್ಞಾಪಿಸಿ ದೇವರ ಸೇವೆಗೆ ನೀರು ದೊರೆಯುವಂತೆ ಅನುಕೂಲ ಮಾಡಿಕೊಟ್ಟಿರುತ್ತಾರೆ. ಕ್ರಿ.ಶ. 1898 ರಲ್ಲಿ ನಿರ್ಮಾಣಗೊಂಡ ಈ ಕೆರೆಯ ವೈಶಿಷ್ಟ್ಯವೇನೆಂದರೆ ಸುಮಾರು 200 ಎಕರೆಯಷ್ಟು ಪ್ರದೇಶದಲ್ಲಿ ಸಾಧಾರಣ ಮಳೆಯಾದರೂ ಸಹ ಒಂದು ಅಡಿಯಷ್ಟು ನೀರು ನಿಲ್ಲುತ್ತದೆ.

ಇಲ್ಲಿರುವ ಪುರಾತನ ಶಾಸನಗಳನ್ನು ನೋಡಿದಾಗ ಈ ಪ್ರದೇಶದಲ್ಲಿ ಬಾಣರು, ಗಂಗರು, ಚೋಳರು, ರಾಷ್ಟ್ರಕೂಟರ ಕಾಲದ ಕಲೆ. ಸಂಸ್ಕೃತಿಯ ಕುರುಹುಗಳು ಕಂಡು ಬರುತ್ತವೆ. ಇಲ್ಲಿನ ಕಟ್ಟೆಯ ಮೇಲೆ ಸೀತಾರಾಮ ಲಕ್ಷ್ಮಣರ ದೇವಾಲಯ ಹಾಗೂ ಧ್ವಜಸ್ತಂಭದಲ್ಲಿ ಹನುಮಂತನ ಕೆತ್ತನೆಗಳಿವೆ. ಇಲ್ಲಿ ಗರುಡನ ಚಿತ್ರವನ್ನು ಕಾಣಬಹುದಾಗಿದೆ. ಇಲ್ಲಿರುವ ನೀರಿನಲ್ಲಿ ಔಷಧೀಯ ಗುಣಗಳು ಪರಿಶೋಧಿಸಲ್ಪಟ್ಟಿದೆ.




ಶ್ರೀವೈಷ್ಣವ ಭಕ್ತಾಗ್ರೇಸರಾದ ಶ್ರೀಪೆರಿಯ ತಿರುಮಲೈನಂಬಿ ಅವರು ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ ಪಾಪವಿನಾಶನದಿಂದ ಸ್ವಾಮಿಯವರ ಪೂಜೆ ಮತ್ತು ಅಭಿಷೇಕಕ್ಕಾಗಿ ಈ ತೀರ್ಥವನ್ನು ತರುತ್ತಿದ್ದರು. ಅವರು ತಮ್ಮ ವೃದ್ಧಾಪ್ಯದಲ್ಲಿಯೂ ಸ್ವಾಮಿಯವರಿಗೆ ಪಾಪವಿನಾಶನದಿಂದ ನೀರು ತರುವುದನ್ನು ಕಂಡು ಸ್ವಾಮಿಯು ಅವರ ಮೇಲೆ ಕರುಣೆಯಿಂದ ಒಬ್ಬ ಬೇಟೆಯ ಹುಡುಗನ ರೂಪದಲ್ಲಿ ಬಂದು ಅಜ್ಜ ಬಾಯಾರಿಕೆಯಾಗುತ್ತಿದೆ ಸ್ವಲ್ಪ ಕುಡಿಯಲು ನೀರು ಕೊಡಿರೆಂದು ಕೇಳಿದನು. ಆಗ ಆಚಾರ್ಯರು **"ಮಗು!! ಈ ನೀರು ಸ್ವಾಮಿಯವರ ಪೂಜೆಗೆ ಈ ನೀರನ್ನು ತೆಗೆದುಕೊಂಡು ಹೋಗುತ್ತಿದ್ದೇನೆ, ನಿನಗೆ ಕುಡಿಯಲು ಕೊಡಲು ಸಾಧ್ಯವಿಲ್ಲ"** ಎಂದು ಹೇಳಿ ಅವರು ಮುಂದೆ ಸಾಗಿದರು. ಆಗ ಬಾಲಕ ತನ್ನ ಬಾಣದಿಂದ ಆಚಾರ್ಯರ ಬಳಿಯಿರುವ ಕುಂಡಕ್ಕೆ ಬಾಣದಿಂದ ರಂಧ್ರವನ್ನು ಮಾಡಿ ಆ ನೀರನ್ನು ಕುಡಿದು ದಾಹವನ್ನು ತೀರಿಸಿಕೊಳ್ಳುತ್ತಾನೆ. ಅದರಿಂದ ಆಚಾರ್ಯರು ಸಿಟ್ಟಿಗೆದ್ದು ಪಾಪ ಸಂಹಾರಕ್ಕೆ ಮರಳಲು ಸಿದ್ಧವಾಗುತ್ತಿರುವುದನ್ನು ಕಂಡ ಬಾಲಕನು (ಶ್ರೀವೆಂಕಟೇಶ್ವರ ಸ್ವಾಮಿ) **"ತಾತಾ! ಯಾಕೆ ಕಷ್ಟಪಡುವೆ ಇಲ್ಲಿಯೇ ನಾನು ತೀರ್ಥವನ್ನು ತರಿಸುತ್ತೇನೆ"** ಎಂದು ಹೇಳಿ ಅಂಜನಾದ್ರಿಯ ಬೆಟ್ಟವನ್ನು ನೋಡಿ ಬಾಣದಿಂದ ಹೊಡೆದ ಕೂಡಲೇ ಆಕಾಶಗಂಗೆಯು ಬೆಟ್ಟದಿಂದ ಪ್ರವಹಿಸುತ್ತದೆ. ಶ್ರೀವೆಂಕಟೇಶ್ವರ ಸ್ವಾಮಿಯವರು ಆಚಾರ್ಯ ತಿರುಮಲನಂಬಿಗೆ ಪ್ರತ್ಯಕ್ಷವಾಗಿ ಇನ್ನು ಮುಂದೆ ಈ ಆಕಾಶಗಂಗೆಯ ತೀರ್ಥವನ್ನು ನನ್ನ ಪೂಜಾ ಕಾರ್ಯಕ್ರಮಗಳಿಗೆ ಉಪಯೋಗಿಸಬೇಕೆಂದು ಹೇಳಿ ಅಂತರ್ಧಾನವಾದರು. ಆ ದಿನದಿಂದ ಆಚಾರ್ಯ ತಿರುಮಲನಂಬಿಯವರು ಸ್ವಾಮಿಯವರ ಆರಾಧನೆಗೆ, ಅಭಿಷೇಕಕ್ಕೆ ಈ ಆಕಾಶಗಂಗಾ ತೀರ್ಥವನ್ನು ತಂದು ಆನಂದಿಸಿದರು. ಇಂದಿಗೂ ಆಚಾರ್ಯ ತಿರುಮಲನಂಬಿ ವಂಶೀಯರು ಪ್ರತಿದಿನ ಈ ತೀರ್ಥ ಕೈಂಕರ್ಯವನ್ನು ಮಾಡುತ್ತಿದ್ದಾರೆ.

**ಭಾ**ರತದೇಶದ ಮೂರನೇ ದೊಡ್ಡ ಮಹಾನದಿಯೆನಿಸಿದ ಕೃಷ್ಣಾ ನದಿ ಮಹಾಬಲೇಶ್ವರದಲ್ಲಿ ಹುಟ್ಟಿ ಕರ್ನಾಟಕದ ಮೂಲಕ ಆಂಧ್ರ ಪ್ರದೇಶದಲ್ಲಿ ಹಾದು ಕೊನೆಗೆ ವಿಜಯವಾಡ ಹತ್ತಿರವಿರುವ ಮಚಲೀ ಪಟ್ನಂ ಎಂಬಲ್ಲಿ ಸಮುದ್ರವನ್ನು ಸೇರುತ್ತದೆ. ಕೃಷ್ಣಾನದಿಯ ದಂಡೆ ಮೇಲೆ ತುಂಬಾ ಮಂದಿರಗಳಿದ್ದರೂ ಆಂಧ್ರಪ್ರದೇಶದ ವಿಜಯವಾಡ ಪಟ್ಟಣ ದಲ್ಲಿ ಕೃಷ್ಣಾನದಿ ದಂಡೆಯ ಮೇಲೆ ಕನಕದುರ್ಗಾ ಮಂದಿರ ಬಹಳ ಪ್ರಸಿದ್ಧವಾದದ್ದು. ಈ ಮಂದಿರ ವಿಜಯವಾಡ ನಗರದ ಮಧ್ಯ ಭಾಗ ದಲ್ಲಿರುವ ಇಂದ್ರಕೀಲಕ ಪರ್ವತದಲ್ಲಿದೆ. ವಿಜಯವಾಡ ನಗರ ವಾಣಿಜ್ಯ ನಗರಿ ಅಲ್ಲದೇ ಪೌರಾಣಿಕ ಹಾಗೂ ಐತಿಹಾಸಿಕ ಕ್ಷೇತ್ರವಾಗಿದೆ. ಕೃಷ್ಣಾ ನದಿಗೆ ಕೃಷ್ಣವೇಣೀ ಎಂಬ ಹೆಸರೂ ಇದೇ. ಶ್ರೀವಾದಿರಾಜ ತೀರ್ಥರು ತಮ್ಮ **"ತೀರ್ಥಪ್ರಬಂಧ"** ದಲ್ಲಿ ಕೃಷ್ಣವೇಣೀ ಸ್ತೋತ್ರವನ್ನು ಮಾಡಿದ್ದಾರೆ **(ನಮಾಮಿ ಸುಕೃತ ಶ್ರೇಣೀಂ ಕೃಷ್ಣವೇಣೀಂ ತರಂಗಿ ಣೀಮ್ । ಮದ್ವೀಕ್ಷಣಂ ಕೋಟಿ ಜನ್ಮಕೃತದುಷ್ಕರ್ಮ ಶಿಕ್ಷಣಮ್॥)**

### ಹೆಸರಿನ ಸ್ವಾರಸ್ಯ

ಹಿಂದೆ ವಿಜಯವಾಡ ನಗರಕ್ಕೆ **"ವಿಜಯವಾಟ"** ಅಂದರೆ ವಿಜಯಭೂಮಿ ಎಂದು ಅರ್ಥ. ತೆಲುಗು ಭಾಷೆಯಲ್ಲಿ ವಾಟ ಎಂದರೆ ಭೂಮಿ ಎಂದರ್ಥ. ಮಹಿಷಾಸುರನೆಂಬ ಅಧರ್ಮದ ರಾಕ್ಷಸನನ್ನು ಸಂಹಾರ ಮಾಡಿದ ಮೇಲೆ ಧರ್ಮವನ್ನು ಸ್ಥಾಪಿಸಲು ದುರ್ಗಾದೇವಿ ಇಲ್ಲಿ ಬಂದು ನೆಲೆಸಿದಳು ಎಂದು ಸ್ಥಳಪುರಾಣ ತಿಳಿಸುತ್ತದೆ ಹಾಗಾಗಿ ಈ ಪ್ರದೇಶಕ್ಕೆ ವಿಜಯವಾಟ ಎಂದು ಹೆಸರಾಯಿತು. ಇದಕ್ಕೆ ಇನ್ನೊಂದು ಸುಂದರವಾದ ಕಾರಣವೂ ಇದೆ ವಿಜಯ ಎಂದರೆ ಅರ್ಜುನ, ವಾಟ ಎಂದರೆ ಭೂಮಿ, ಅರ್ಜುನ ಇಲ್ಲಿ ತಪಸ್ಸು ಮಾಡಿದ ಆದ್ದರಿಂದ ಈ ಪ್ರಾಂತ್ಯಕ್ಕೆ ವಿಜಯವಾಟ ಎಂಬ ಹೆಸರು ಬಂದಿತು. ಸುಮಾರು 9 ನೆ ಶತಮಾನದಲ್ಲಿ ಈ ಪ್ರಾಂತ್ಯವನ್ನು ಚಾಲುಕ್ಯರು ಆಳುತ್ತಿದ್ದರು. ಆ ಸಮಯದಲ್ಲಿ ಚೋಳವಂಶದ ರಾಜ ರಾಜೇಂದ್ರ ಚೋಳ ಈ ಪ್ರಾಂತ್ಯದ ಮೇಲೆ ದಂಡೆತ್ತಿ ಬಂದು ಚಾಲುಕ್ಯರನ್ನು ಸೋಲಿಸಿ ತಾನು ವಶಪಡಿಸಿ ಕೊಂಡನು. ಅದರ ಕುರುಹಾಗಿ ಈ ಪ್ರಾಂತ್ಯಕ್ಕೆ **"ರಾಜೇಂದ್ರ ಚೋಳ ಪುರ"** ಎಂದು ಹೆಸರಾಯಿತು. ಮುಂದೆ ಗಜಪತಿ ವಂಶದ ರಾಜರು ಈ ಪ್ರಾಂತ್ಯವನ್ನು ಆಳುತ್ತಿದ್ದಾಗ ಈ ಪ್ರದೇಶವನ್ನು **"ಬಿಜಯವಾಡ"** ಎಂದು ಕರೆಯುತ್ತಿದ್ದರು. (ಒಡಿಯ ಭಾಷೆಯಲ್ಲಿ ಒ ಶಬ್ದಕ್ಕೂ ವ ಶಬ್ದಕ್ಕೂ ಅಬೇಧ) ಮುಂದೆ ಬ್ರಿಟೀಷರ ಕಾಲದಲ್ಲಿ ಅವರಿಗೆ ಈ ಹೆಸರು ಉಚ್ಚಾರ ಮಾಡಲು ಕಷ್ಟವಾದಾಗ **"ಬೆಜವಾಡ"** ಎಂದು ಕರೆದರು ಮುಂದೆ ಅದು ವಿಜಯವಾಡ ಎಂದಾಯಿತು.

### ಇಂದ್ರಕೀಲಕ ಪರ್ವತದ ಇತಿಹಾಸ

ಪಾಂಡವರು ತಮ್ಮ ಪುರೋಹಿತರಾದ ಧೌಮ್ಯರನ್ನು ಮುಂದಿಟ್ಟು ಕೊಂಡು ವನವಾಸಕಾಲದಲ್ಲಿ ಒಂದು ವರ್ಷ ತೀರ್ಥಕ್ಷೇತ್ರಗಳನ್ನು ಸಂಚಾರ ಮಾಡಿದರು. ಸಂಚಾರ ಕ್ರಮೇಣ ಪಾಂಡವರು ವಿಜಯ ವಾಡಕ್ಕೆ ಬಂದಾಗ ಅರ್ಜುನ ಪಾಶುಪತಾಸ್ತ್ರವನ್ನು ಸಂಪಾದಿಸಲು ಕೃಷ್ಣನ ಆದೇಶದ ಮೇಲೆ ರುದ್ರದೇವರನ್ನು ಕುರಿತು ಇಂದ್ರಕೀಲಕ ಪರ್ವತದಲ್ಲಿ ತಪಸ್ಸು ಮಾಡಿದನು. ಹಾಗಾಗಿ ಅರ್ಜುನ ತಪಸ್ಸು ಮಾಡಿದ ಜಾಗವೇ ಇಂದ್ರಕೀಲಕ ಪರ್ವತ. ಆಗ ನಡೆದದ್ದೇ ಕಿರಾತಾರ್ಜುನೀಯ ಪ್ರಸಂಗ (ರುದ್ರದೇವರು ಕಿರಾತನ ರೂಪದಲ್ಲಿ ಬಂದು ಅರ್ಜುನನ ಮೇಲೆ ಯುದ್ಧ ಮಾಡಿದ ಪ್ರಸಂಗ.) ಇಂದಿಗೂ ಈ ಪರ್ವತದ ಸುತ್ತಮುತ್ತಲ ಗೋಡೆಗಳಲ್ಲಿ ಕಿರಾತಾರ್ಜುನೀಯ ಪ್ರಸಂಗದ ರೇಖಾಚಿತ್ರಗಳನ್ನು ನಾವು ಕಾಣಬಹುದು.

### ಪರ್ವತಕ್ಕೆ ಇಂದ್ರಕೀಲಕ ಎಂಬ ಹೆಸರು ಬರಲು ಕಾರಣ

ಕೃತಯುಗದಲ್ಲಿ ಕೀಲನೆಂಬ ಯಕ್ಷನು ದುರ್ಗಾದೇವಿಯನ್ನು ಕುರಿತು ತಪಸ್ಸು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ದುರ್ಗಾದೇವಿ ಪ್ರತ್ಯಕ್ಷಳಾಗಿ ಬೇಕಾದ ವರವನ್ನು ಕೇಳು ಎಂದು. **"ತಾಯೇ ನೀನು**

# ಕನಕದುರ್ಗಾ ಮಹಾತ್ಮ್ಯೆ

– ವಿ. ನಾಗೇಂದ್ರ ಪ್ರಸಾದ್
98454 00816







# ಪಾಪವಿನಾಶನ ತೀರ್ಥ

**ನನ್ನ ಹೃದಯಸ್ಥಾನದಲ್ಲಿ ಬಂದು ನೆಲಸಬೇಕು. ಇದೇ ನನ್ನ ಕೋರಿಕೆ"** ಎಂದಾಗ **"ನೀನು ಒಂದು ಪರ್ವತರೂಪದಿಂದ ಇರು, ನಾನು ಅಸುರರನ್ನೆಲ್ಲಾ ಸಂಹಾರ ಮಾಡಿದ ಮೇಲೆ ನಿನ್ನಲ್ಲಿ ಬಂದು ನೆಲೆಸುತ್ತೇನೆ"** ಎಂದಳು. ಅದರಂತೆ ಮಹಿಷಾಸುರರೇ ಮೊದಲಾದ ಅಸುರರನ್ನೆಲ್ಲಾ ಸದೆ ಬಡಿದು ಇಲ್ಲಿ ಬಂದು ನೆಲೆಸಿದಳು. ಇಂದ್ರಾದಿ ದೇವತೆಗಳು ದಿನಾ ಬಂದು ದುರ್ಗಾದೇವಿಯನ್ನು ಸ್ತೋತ್ರ ಮಾಡುತ್ತಿದ್ದರು. ಹಾಗಾಗಿ ಈ ಪರ್ವತಕ್ಕೆ ಇಂದ್ರಕೀಲಕ ಪರ್ವತ ಎಂಬ ಹೆಸರು ಬಂದಿತು.

ಇಲ್ಲಿನ ದುರ್ಗೆಗೆ **"ಕನಕದುರ್ಗಾ"** ಎಂದು ಕರೆಯುತ್ತಾರೆ. ಕನಕ ಎಂದರೆ ಬಂಗಾರ ಅರ್ಥಾತ್ ಬಂಗಾರದಕಾಂತಿಯಂತೆ ಇರುವ ದುರ್ಗಾದೇವಿ ಎಂದರ್ಥ. ಮೈಸೂರಿನ ಚಾಮುಂಡೇಶ್ವರಿ ಪ್ರತಿಮೆಗೂ ಇಲ್ಲಿನ ದುರ್ಗಾ ಪ್ರತಿಮೆಗೂ ಸ್ವಲ್ಪ ಹೋಲಿಕೆ ಇದೆ. ಎರಡೂ ಕಡೆ ದುರ್ಗಾದೇವಿ ತ್ರಿಶೂಲವನ್ನು ಹಿಡಿದು ಸಿಂಹದ ಮೇಲೆ ಆಸೀನಳಾಗಿದ್ದಾಳೆ. ಇಲ್ಲಿನ ದುರ್ಗಾ ದೇವತೆಯ ಮುಖ ಅರಿಶಿನದಿಂದ ಲೇಪಿಸಿರುವುದರಿಂದ ಮುಖವು ಬಹಳ ಕಾಂತಿಯಿಂದ ಕೂಡಿದೆ. ಇಲ್ಲಿನ ದುರ್ಗಾ ದೇವಿಯ ಮುಖಕ್ಕೆ ಮೂಗುತಿ ಪ್ರಧಾನವಾಗಿ ಕಾಣುತ್ತದೆ. ಇದಕ್ಕೂ ಒಂದು ಐತಿಹ್ಯವನ್ನು ಹೇಳುತ್ತಾರೆ. ಕೃಷ್ಣಾವೇಣಿಯಲ್ಲಿದ್ದ ಮೂಗುತಿಯನ್ನು ದುರ್ಗಾದೇವಿ ಅಪೇಕ್ಷೆಪಟ್ಟಳು. ಕೃಷ್ಣಾದೇವಿ ಅದನ್ನು ಕೊಡದಿದ್ದಾಗ, ದುರ್ಗಾದೇವಿ ಮೂಗುತಿಯನ್ನು ಅಪಹಾರಮಾಡಿ ಬೆಟ್ಟದ ಮೇಲೆ ಕುಳಿತಳು. ಈ ಕಾರಣದಿಂದ ಇಲ್ಲಿ ದುರ್ಗಾದೇವಿಯ ಮುಖಕ್ಕೆ ದಿನವೂ ಅಂದವಾದ ಮೂಗುತಿಯಿಂದ ಅಲಂಕರಿಸುತ್ತಾರೆ.

**ಪಾಪವಿನಾಶನ ತೀರ್ಥವು ತಿರುಮಲೆಯಲ್ಲಿ ಅತ್ಯಂತ ಪ್ರಸಿದ್ಧವಾದ ಪವಿತ್ರ ಕ್ಷೇತ್ರವಾಗಿದೆ. ಈ ತೀರ್ಥದಲ್ಲಿ ಸ್ನಾನ ಮಾಡುವವರ ಎಲ್ಲಾ ಪಾಪಗಳು ನಾಶವಾಗುತ್ತವೆ ಮತ್ತು ಅವರ ಎಲ್ಲಾ ಆಸೆಗಳು ಈಡೇರುತ್ತವೆ ಮತ್ತು ಅವರು ಸುಖ ಶಾಂತಿ ಪಡೆಯುತ್ತಾರೆ. ಹಾಗಾಗಿ ಈ ತೀರ್ಥಕ್ಕೆ ಈ ಹೆಸರು ಬಂದಿದೆ ಎಂದು ಶ್ರೀ ವೆಂಕಟಾಚಲ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಆಶ್ವಯುಜ ಮಾಸದಲ್ಲಿ ಶುಕ್ಲ ಪಕ್ಷ ಸಪ್ತಮಿಯ ಉತ್ತರಾಷಾಢ ನಕ್ಷತ್ರವಿರುವ ಭಾನುವಾರ ಅಥವಾ ಉತ್ತರಾಭಾದ್ರ ನಕ್ಷತ್ರವಿರುವ ದ್ವಾದಶಿ ದಿನದಂದು ಈ ತೀರ್ಥ ವಿಶೇಷ ದಿನವೆಂದು ಸ್ಕಂದಪುರಾಣದಲ್ಲಿ ಪಾಪಗಳ ಸಂಹಾರದ ಬಗ್ಗೆ ಉಲ್ಲೇಖಿಸಲಾಗಿದೆ. ಇಲ್ಲಿನ ಕ್ಷೇತ್ರದೇವತೆಗಳು ಶ್ರೀಗಂಗಾದೇವಿ ಮತ್ತು ಶ್ರೀಆಂಜನೇಯ ಸ್ವಾಮಿ ತಿರುಮಲೆ ತಿರುಪತಿ ದೇವಸ್ಥಾನದ ನೇತೃತ್ವದಲ್ಲಿ ಪಾಪ ವಿನಾಶನಂ ಡ್ಯಾಮ್ ಬಳಿ 02-05-1986 ರಲ್ಲಿ ಶ್ರೀಗಂಗಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಯಿತು. ನಂತರ ಹಳೆ ದೇವಸ್ಥಾನದ ಸ್ಥಳದಲ್ಲಿ ಶ್ರೀಗಂಗಾದೇವಿ ಅಮ್ಮನವರ ಆಲಯವನ್ನು ನೂತನ ಕಟ್ಟಡದೊಂದಿಗೆ ನಿರ್ಮಿಸಿ ದಿನಾಂಕ 18-01-2013 ರಲ್ಲಿ ಮಹಾ ಸಂಪ್ರೋಕ್ಷಣೆ ಕಾರ್ಯಕ್ರಮದೊಂದಿಗೆ ಜೀರ್ಣೋದ್ಧಾರ ಮಾಡಲಾಯಿತು.**



**ಶ್ರೀವೆಂಕಟೇಶ್ವರ ಸ್ವಾಮಿಯವರ ಅವತಾರ ನಕ್ಷತ್ರ ಶ್ರವಣ. ಶ್ರವಣದ ದಿನದಂದು ಬೆಳಗ್ಗೆ ಭೋಗ ಶ್ರೀನಿವಾಸ ಮೂರ್ತಿ ಹಾಗೂ ದೇವಿಯರೊಂದಿಗೆ ಶ್ರೀ ಮಲೆಯಪ್ಪಸ್ವಾಮಿಗೆ ಅಭಿಷೇಕ ನಡೆಯುತ್ತದೆ. ಎಲ್ಲಾ ಸೇವೆಗಳು ಆದನಂತರ ಆ ಸಾಯಂಕಾಲ ಶ್ರೀ ಮಲೆಯಪ್ಪಸ್ವಾಮಿ ಸಹಸ್ರ ದೀಪಾಲಂಕಾರ ಸೇವೆಯಲ್ಲಿ ಪಾಲ್ಗೊಂಡು ನಂತರ ಪುರವೀಧಿಯಲ್ಲಿ ಮೆರವಣಿಗೆ ಪಡೆದು ದೇವಾಲಯದೊಳಗೆ ಪ್ರವೇಶಿಸುತ್ತಾರೆ.**

**ತಿರುಮಲೆಯಲ್ಲಿ ಶ್ರವಣ ನಕ್ಷತ್ರಕ್ಕೆ ಕೆಲ ತಿಂಗಳಿನಲ್ಲಿ ವಿಶೇಷವಾಗಿ ಉತ್ಸವ ಗಳು ನಡೆಸುತ್ತಾರೆ. ಪ್ರತಿ ಕನ್ಯಾಮಾಸದಲ್ಲಿ ಶ್ರವಣದಲ್ಲಿ ಮುಗಿಯುವಂತೆ ಬ್ರಹ್ಮೋತ್ಸವ ಗಳು ನಡೆಯುತ್ತವೆ. ಕಾರ್ತಿಕ ಮಾಸದಲ್ಲಿ ಶ್ರವಣದಂದು ಶ್ರೀ ಸ್ವಾಮಿಯವರಿಗೆ ಪುಷ್ಪಯಾಗೋತ್ಸವ ನಿರ್ವಹಿಸುತ್ತಾರೆ.**



## ಶ್ರವಣ ನಕ್ಷತ್ರೋತ್ಸವ

ಇಲ್ಲಿನ ಮತ್ತೊಂದು ಐತಿಹ್ಯವೆಂದರೆ ಕೃಷ್ಣಾನದಿ ಹರಿಯಲು ಇಂದ್ರಕೀಲಕ ಪರ್ವತ ಅಡ್ಡಿಯಾಯಿತು. ಆಗ ಕೃಷ್ಣಾ ತನಗೆ ನೀರು ಹರಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದಾಗ ಪರ್ವತ ಸ್ವಲ್ಪ ಹಿಂದೆ ಸರಿಯಿತು. ಆದರೆ ಕೃಷ್ಣಾನದಿಯ ರಭಸಕ್ಕೆ ಅಷ್ಟು ಜಾಗ ಸಾಲದಾಯಿತು. ನೀರಿನ ರಭಸ ಜೋರಾದಾಗ, ಪರ್ವತದ ಒಂದು ಭಾಗ ಕಿತ್ತು ಬಂದು ನೀರಿನಲ್ಲಿ ತೇಲಿ ಹೋಯಿತು. ದುರ್ಗಾದೇವಿ ಮಂದಿರದಿಂದ 4 ಕಿ.ಮೀ ದೂರದಲ್ಲಿ ಒಂದು ಸಣ್ಣ ಪರ್ವತಯಿದೆ ಅದಕ್ಕೆ ಸ್ಥಳೀಯರು **"ತೇಲುಕೊಂಡ"** ಅಂದರೆ ತೇಲುವ ಬೆಟ್ಟ ಎನ್ನುತ್ತಾರೆ ಇದನ್ನು ಈಗಲೂ ನೋಡಬಹುದು.

ಅರ್ಜುನ ರುದ್ರದೇವರನ್ನು ಒಲಿಸಿಕೊಂಡ ಜಾಗವೇ ಇಂದ್ರಕೀಲಕ ಪರ್ವತ, ರುದ್ರನನ್ನು ಆರಾಧಿಸಲು ಒಂದು ಮಣ್ಣಿನಲ್ಲಿ ಲಿಂಗವನ್ನು ಮಾಡಿ ಅದರಲ್ಲಿ ರುದ್ರನನ್ನು ಆವಾಹಿಸಿ ದಿನವೂ ಆ ಪರ್ವತದಲ್ಲಿ ಸಿಗುತ್ತಿದ್ದ ಮಲ್ಲಿಗೆ ಹೂವುಗಳಿಂದ ಅರ್ಚಿಸುತ್ತಿದ್ದನು. ಪಾಶುಪತಾಸ್ತ್ರವನ್ನು ರುದ್ರದೇವರಿಂದ ಪಡೆದ ಮೇಲೆ ರುದ್ರ ಒಂದು ಅಂಶದಿಂದ ಮಣ್ಣಿನಲಿಂಗದಲ್ಲಿ ನಿಂತನು ಅದುವೇ ಇಂದು ಮಲ್ಲಿಕೇಶ್ವರ ಎಂದು ಹೆಸರಾಗಿದೆ.





ದುರ್ಗಾದೇವಿಯ ಮಂದಿರದ ಹಿಂಭಾಗದಲ್ಲಿ ಶಿವಲಿಂಗವನ್ನು ಕಾಣಬಹುದು. ಶ್ರೀಮದಾಚಾರ್ಯರು ತಮ್ಮ **"ಮಹಾ ಭಾರತ ತಾತ್ಪರ್ಯನಿರ್ಣಯ"** ದಲ್ಲಿ ಕಿರಾತಾರ್ಜುನೀಯ ಪ್ರಸಂಗವನ್ನು 22 ನೇ ಅಧ್ಯಾಯದ 131 ರಿಂದ 147 ನೆ ಶ್ಲೋಕದವರೆಗೂ ವರ್ಣಿಸಿದ್ದಾರೆ. ಅದರ ಸಾರಸಂಗ್ರಹ ಇಂತಿದೆ. ಅರ್ಜುನ ಅಣ್ಣಂದಿರ ಆಜ್ಞೆಯನ್ನು ಪಡೆದು ಇಂದ್ರಕೀಲಕ ಪರ್ವತಕ್ಕೆ ಬಂದು ಆರು ತಿಂಗಳಕಾಲ ರುದ್ರನನ್ನು ಕುರಿತು ತಪಸ್ಸು ಮಾಡಿದನು. ಅಂತೆಯೇ ಒಂದು ಮರಳಿನಲ್ಲಿ ಲಿಂಗವನ್ನು ಮಾಡಿ ದಿನವೂ ಪೂಜಿಸುತ್ತಿದ್ದನು. ಒಂದು ದಿನ ಮೂಕಾಸುರನೆಂಬ ಅಸುರನು ಅರ್ಜುನನನ್ನು ಸಂಹರಿಸಲು ಯತ್ನಿಸಿದನು. ರುದ್ರ ಕಿರಾತರೂಪದಿಂದ ಬಂದು ಹಂದಿಯ ಮೇಲೆ ಬಾಣ ಪ್ರಯೋಗಿಸಿದನು. ಅರ್ಜುನ ಹಾಗೂ ರುದ್ರ ಇಬ್ಬರು ಸೇರಿ ಹಂದಿಯನ್ನು ಸಂಹರಿಸಿದರು. ನಂತರ ಇಬ್ಬರ ನಡುವೆ ವಾಗ್ವಾದ ನಡೆದು ಅರ್ಜುನ ಹಾಗೂ ರುದ್ರನ ನಡುವೆ ಭಯಂಕರ ಯುದ್ಧ ನಡೆಯಿತು. ಅರ್ಜುನ ರುದ್ರನ ಬಾಣಗಳಿಗೆ ಮೂರ್ಛಿತನಾದನು. ಅರ್ಜುನ ಮತ್ತೆ ಲಿಂಗಕ್ಕೆ ಹೂವುಗಳ ಮೂಲಕ ಪೂಜೆ ಮಾಡುವಾಗ ಆ ಹೂಗಳು ಕೈಲಾಸದಲ್ಲಿ ಬೀಳುತ್ತಿದ್ದವು. ಅರ್ಜುನನಿಗೆ ಆಶ್ಚರ್ಯವಾಯಿತು. ನಂತರ ಕಿರಾತ ರೂಪದಲ್ಲಿ ಬಂದವನು ರುದ್ರನೇ ಎಂದು ತಿಳಿದಾಗ ಮತ್ತೆ ರುದ್ರನನ್ನು ಕುರಿತು ಸ್ತೋತ್ರ ಮಾಡಿದ. ಅವನ ಸ್ತೋತ್ರಕ್ಕೆ ಮೆಚ್ಚಿ ರುದ್ರ ಅರ್ಜುನನಿಗೆ ದರ್ಶನ ನೀಡಿ ಪಾಶುಪತಾಸ್ತ್ರವನ್ನು ನೀಡಿದನು.





ಶಂಕರಾಚಾರ್ಯರು ಇಂದ್ರಕೀಲಪರ್ವತಕ್ಕೆ ಬಂದು ಚಕ್ರವನ್ನು ಸ್ಥಾಪಿಸಿದರು ಆದ್ದರಿಂದ ಇದೊಂದು ಶಕ್ತಿಪೀಠ ಎನಿಸಿದೆ. ಈ ಚಕ್ರ ದುರ್ಗಾದೇವಿಯ ವಿಗ್ರಹದ ಕಾಲಿನ ಭಾಗದಲ್ಲಿ ಇದೆ.











58

# ದಾರಿ ನಾಯಕನ ಪಾಳ್ಯದ ಶ್ರೀ ವೆಂಕಟೇಶ್ವರ ದೇವಾಲಯ

ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಒಂದು ಪ್ರಮುಖ ಇತಿಹಾಸ ಪ್ರಸಿದ್ಧ ಗ್ರಾಮ ದಾರಿನಾಯಕನ ಪಾಳ್ಯ. ಗೌರಿಬಿದನೂರು ಚಿಕ್ಕಬಳ್ಳಾಪುರ ರಸ್ತೆಯಲ್ಲಿ ಸಿಗುವ ಮಂಚೇನ ಹಳ್ಳಿಯಿಂದ 12 ಕಿಲೋ ಮೀಟರ್ ದೂರದಲ್ಲಿದೆ. ದಾರಿನಾಯಕನಪಾಳ್ಯ ಹಿಂದೆ ಒಂದು ಪಾಳಯ ಪಟ್ಟುವಾಗಿದ್ದು ಚಿತ್ರದುರ್ಗದ ನಾಯಕರುಗಳಿಗೆ ನಡೆದುಕೊಳ್ಳುತ್ತಿದ್ದರೆಂಬ ಇತಿಹಾಸವಿದೆ. ಈಗಲೂ ಪ್ರಸ್ತುತ ಗ್ರಾಮದಲ್ಲಿ ಅಲ್ಲಲ್ಲಿ ಕೋಟೆಯ ಅವಶೇಷಗಳನ್ನು ಕಾಣಬಹುದು. ದಾರಿನಾಯಕನ ಪಾಳ್ಯದ ಗ್ರಾಮದಲ್ಲಿ ಪ್ರಸಿದ್ಧ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯ ಹಾಗೂ ಲಕ್ಷ್ಮೀರಂಗನಾಥ ದೇವಾಲಯಗಳಿವೆ. ಊರ ಪ್ರವೇಶದಲ್ಲಿಯೇ ಸಿಗುವ ಆಲಯವು ಗರ್ಭಗೃಹ, ಅಂತರಾಳ,ನವರಂಗ,ಅರ್ಧಮಂಟಪ,ವಿಶಾಲವಾದ ಪ್ರಾಕಾರಗಳನ್ನು ಒಳಗೊಂಡ ರಚನೆಯಾಗಿದೆ. ಗರ್ಭಗುಡಿಯಲ್ಲಿ ಶ್ರೀದೇವಿ ಭೂದೇವಿ ಸಹಿತನಾದ ಶ್ರೀವೆಂಕಟೇಶ್ವರನ ಸುಂದರ ಮೂರ್ತಿಯಿದೆ. ಸುಮಾರು ಐದು ಅಡಿ ಎತ್ತರವಿರುವ ದೇವನು ಕಿರೀಟ ಮುಕುಟವನ್ನು ಧರಿಸಿದ್ದು ಹಸನ್ಮುಖಿಯಾಗಿರುವನು. ಇಲ್ಲಿರುವ ಮೂರ್ತಿಗಳು ಬಹುತೇಕ ಕೋಲಾರ ಜಿಲ್ಲೆಯ ಚಿಕ್ಕ ತಿರುಪತಿಯ ವೆಂಕಟೇಶ್ವರ ದೇವಾಲಯದ ಮೂರ್ತಿಯನ್ನು ಹೋಲುತ್ತದೆ ಎಂಬ ಅಭಿಪ್ರಾಯವಿದೆ. ದೇವಾಲಯಕ್ಕೆ ಮೂರು ಹಂತಗಳ ಅಂದವಾದ ಶಿಖರವಿದೆ. ವಿಜಯನಗರೋತ್ತರ ಕಾಲಕ್ಕೆ ಸೇರುವ ಸ್ಥಳೀಯ ಪಾಳೆಯಗಾರರಿಂದ ನಿರ್ಮಿಸಿರುವ ವೆಂಕಟೇಶ್ವರ ದೇವಾಲಯವು ಶಿಥಿಲ ಹಂತವನ್ನು ತಲುಪಿತ್ತು. ಆದರೆ ಸ್ಥಳೀಯ ಗ್ರಾಮಸ್ಥರು,ನಿವೃತ್ತ ನೌಕರರು ಮುಂತಾದವರು ದೇಶವ್ಯಾಪಿ ದೇಣಿಗೆ ತೆಗೆದು ದೇವಾಲಯದ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಜೀರ್ಣೋದ್ಧಾರ ಮಾಡಿದ್ದಾರೆ. ಇಲ್ಲಿಯ ನಾಲ್ಕು ಚಕ್ರಗಳ ಕಲ್ಲಿನ ರಥವು ಹಿಂದೆ ಬಿದ್ದು ಹಾಳಾಗಿತ್ತು. ಇದನ್ನು ನಿರ್ಮಿಸಿ ದವರು ವಿಶ್ವಕರ್ಮ ಜನಾಂಗದ ಒಂದು ಕುಟುಂಬ ನಂತರ ಇತ್ತೀಚಿಗೆ ಅದೇ ವಂಶದ ವೆಂಕಟರಾಮಾಚಾರಿ ಕುಟುಂಬದವರು ಮತ್ತೊಂದು ರಥವನ್ನು ಮಾಡಿಸಿಕೊಟ್ಟು ತಮ್ಮ ವಂಶದವರು ನಡೆಸಿದ ಸೇವಾ ಕೈಂಕರ್ಯವನ್ನು ಮುಂದುವರೆಸಿರುವುದು ಬಹು ಪ್ರಶಂಸನೀಯ.

ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷ ಮೇ ತಿಂಗಳಿನಲ್ಲಿ ಬರುವ ಪೌರ್ಣಮಿಯಲ್ಲಿ ಬಹು ವೈಭವದಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರುವುದು.

– ಕೆಂಗೇರಿ ಚಕ್ರಪಾಣಿ
94483 86886



ಉತ್ಸವದ ಅಂಗವಾಗಿ ಅಂಕುರಾರ್ಪಣೆ ಧ್ವಜಾರೋಹಣೋತ್ಸವ, ಹನುಮಂತೋತ್ಸವ, ಚಂದ್ರ ಮಂಡಳೋತ್ಸವ, ನವಿಲು, ಸಿಂಹ, ಹಂಸ ವಾಹನೋತ್ಸವಗಳು ಬಹಳ ಅದ್ಧೂರಿಯಿಂದ ಒಂಭತ್ತು ದಿನಗಳ ಕಾಲ ನೆರವೇರುವುದು. ಸಾವಿರಾರು ಭಕ್ತರ ಕುಲದೈವವಾಗಿರುವ ಶ್ರೀಲಕ್ಷ್ಮೀವೆಂಕಟೇಶ್ವರ ದೇವಾಲಯದಲ್ಲಿ ಸದಾಕಾಲ ಸ್ವಾಮಿಯ ಸೇವಾ ಕೈಂಕರ್ಯಗಳು ನಿರಂತರವಾಗಿ ನಡೆಯುತ್ತಿರುವುದು ಉಲ್ಲೇಖನೀಯ. ವೆಂಕಟೇಶ್ವರ ದೇವಾಲಯದ ಸಂಕೀರ್ಣದಲ್ಲಿಯೇ ಇರುವ ಮತ್ತೊಂದು ದೇವಾಲಯ ಶ್ರೀರಂಗನಾಥ ದೇವಾಲಯ. ಶ್ರೀವೆಂಕಟೇಶ್ವರ ದೇವಾಲಯದ ಕಾಲಘಟ್ಟಕ್ಕೆ ಸೇರುವ ರಂಗನಾಥ ದೇವಾಲಯದಲ್ಲಿ ಶೇಷಶಾಯಿ ರಂಗನಾಥನ ಸುಂದರಮೂರ್ತಿಯಿದೆ. ಶೇಷಕಲ್ಪದ ಮೇಲೆ ಪವಡಿಸಿರುವ ಚತುರ್ಭುಜಧಾರಿ ಆದ ದೇವನ ನಾಭಿಯಿಂದ ಬ್ರಹ್ಮ ದೇವನು ಉದಯಿಸುತ್ತಿರುವಂತೆ ಚಿತ್ರಿತವಾಗಿದೆ. ದೇವನ ಕಾಲ ಬಳಿ ಆತನ ಪತ್ನಿಯರಾದ ಶ್ರೀದೇವಿ ಭೂದೇವಿಯರ ಶಿಲ್ಪಗಳಿವೆ. ರಂಗನಾಥನ ಮೂರ್ತಿ ಚಿಕ್ಕದಾದರು ತನ್ನ ಕಲಾತ್ಮಕತೆಯಿಂದ ಬಹಳ ಆಕರ್ಷಕವಾಗಿದೆ.



**ಹೀಗೆ ಬನ್ನಿ :**

ದಾರಿನಾಯಕನ ಪಾಳ್ಯವು ಗೌರಿಬಿದನೂರು ಗುಡಿಬಂಡೆ ರಸ್ತೆಯಲ್ಲಿ ಮುಂಚೇನಹಳ್ಳಿಯಿಂದ 12 ಕಿಲೋಮೀಟರ್ ದೂರದಲ್ಲಿದೆ. ಬೆಂಗಳೂರಿನಿಂದ ಬರುವ ಪ್ರವಾಸಿಗರು ದೊಡ್ಡಬಳ್ಳಾಪುರ, ತೊಂಡೆಬಾವಿ ಮಂಚೇನಹಳ್ಳಿ ಮಿಣಿಗಿನಗುರ್ಕಿ ನಂತರ ದಾರಿನಾಯಕನ ಪಾಳ್ಯವನ್ನು ಸೇರಬಹುದು.

**ಎನ್ನಮನದ ಡೊಂಕ ತಿದ್ದಿಸೋ ಹೇ ಶ್ರೀನಿವಾಸಾ**
**ನಿನ್ನ ಸೇವಕನಾದ ಮೇಲೆ ॥ ಪ ॥**

**ಇನ್ನು ಸಂಶಯವೇಕೆ ನಿನ್ನ ಚರಣದಲ್ಲಿ ಸೇರಿಸೋ**
**ಉದಯವಾದರೆ ಊಟದ ಚಿಂತೆ ಅದರ ಮೇಲೆ ಭೋಗದ ಚಿಂತೆ**
**ಹದಿನಾಲ್ಕು ಲೋಕವಾಳ ಬೇಕೆಂಬ ಚಿಂತೆ ಇದು ಪುಣ್ಯ ಇದು ಪಾಪವೆಂದು**
**ಹೃದಯದಲ್ಲಿ ಭಯವಿಲ್ಲದೆ ಮದನ ಮೋಹನ**
**ನಿನ್ನ ಪಾದವ ನಂಬಿದೆ ದೀನ ದಯಾಳು ॥**

**ನೆರೆಮನೆಯ ಭಾಗ್ಯ ನೋಡಿ ಸಹಿಸಲಾರದ ಸೂಯನಾಗಿ**
**ಹರಿಸ್ಮರಣೆಗೆ ವಿಮುಖನಾದೆ ನರರ ಸ್ತುತಿಯ ಮಾಡಿದೆ**
**ಪರರ ಸತಿಗೆ ಪರರ ಅನ್ನಕೆ ತಿರುಗಿ ತಿರುಗಿ ಚಪಲನಾದೆ**
**ಗುರು ಹಿರಿಯರ ದೂಷಿಸಿ ಮರುಳಾದೆ ದೀನ ಶರಣ್ಯ ॥**

**ಅಗಣಿತ ಸುಖ ಬಂದರೆ ನಾ ಧನಿಕ ನಾನೆಂಬೆ**
**ಮಿಗೆ ಹಾನಿಗೆ ಹರಿಯ ದೂಷಿಸಿ**
**ನೆಗೆದು ಪತಂಗ ಕೆಚ್ಚಿಲಿ ಬೀಳುವ ಬಗೆಯಾದೆನು**
**ಪುರಂದರ ವಿಠಲ ಖಗರಾಜ ಸುವಾಹನಾ ॥**

**ಶ್ರೀ ಪುರಂದರದಾಸರು**





# ಶ್ರೀ ಅನಂತಪದ್ಮನಾಭ ವ್ರತ ಮಹಿಮೆ


– ಶ್ರೀಕಂಠಯ್ಯ ಬಿ.ಆರ್
94494 57684


ಮಾನವಕುಲಕ್ಕೆ ಶ್ರೀವೇದವ್ಯಾಸರು, ಪಂಚಮವೇದವಾದ ಮಹಾಭಾರತವನ್ನು ಕೊಟ್ಟಿದ್ದಾರೆ. ಎಲ್ಲರಿಗೂ ತಿಳಿದ ಹಾಗೆ ಅವರು ರಚಿಸಿದ ಹದಿನೆಂಟು ಪುರಾಣಗಳು ಬಹಳ ಪ್ರಸಿದ್ಧಿಯಾಗಿದೆ. ಎಲ್ಲರೂ ಈ ಪುರಾಣಗಳನ್ನು ಓದಲು ಸಾಧ್ಯವಾಗುವುದಿಲ್ಲ. ಆದರೆ ಅದರಲ್ಲಿ ಅಂತರ್ಗತವಾದ ಕೆಲವು ವ್ರತಗಳನ್ನು ಆಚರಿಸುತ್ತಾರೆ. ವ್ರತಕಥೆಯನ್ನು ಪಠಣೆ ಮಾಡುವಾಗ, ಇದು ಯಾವ ಪುರಾಣದಲ್ಲಿದೆ ಮತ್ತು ಯಾರು ಯಾರಿಗೆ ಉಪದೇಶ ಅಥವಾ ಹೇಳಿದರು ಎಂಬುದಾಗಿ ತಿಳಿಯುತ್ತದೆ. ವ್ರತವನ್ನು ಮಾಡಿ ಅದರ ಕಥೆಯನ್ನು ಓದಿದರೆ, ವ್ರತದ ಪಾವಿತ್ರ್ಯತೆ ಸಂದೇಶಗಳು ಮತ್ತು ಆದರಿಂದ ನಮಗೆ ಆಗುವ ಪ್ರಯೋಜನಗಳು ತಿಳಿಯುತ್ತದೆ.

ಶ್ರಾವಣ ಮತ್ತು ಭಾದ್ರಪದ ಮಾಸಗಳು ಹಬ್ಬ ಮತ್ತು ವ್ರತಗಳ ಸಾಲು. ಇಂತಹ ವ್ರತಗಳಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದ ವ್ರತ **"ಶ್ರೀ ಅನಂತಪದ್ಮನಾಭ ಸ್ವಾಮಿ ವ್ರತ"** ಈ ವ್ರತವನ್ನು ಕೆಲವು ಸಂಪ್ರದಾಯದವರು ಮಾತ್ರ ಆಚರಿಸುವುದನ್ನು ನಾವು ಕಾಣಬಹುದು. ಈ ವ್ರತವನ್ನು ಭಾದ್ರಪದ ಮಾಸದ ಶುಕ್ಲ ಚತುರ್ದಶಿಯಂದು (06-09-25) ಆಚರಿಸಲಾಗುತ್ತದೆ. ಈ ವ್ರತದ ವಿವರಣೆ **"ಭವಿಷ್ಯೋತ್ತರ"** ಪುರಾಣದಲ್ಲಿ ಅಂತರ್ಗತವಾಗಿದೆ ಮತ್ತು ಈ ವ್ರತದ ಮಹಿಮೆಯನ್ನು ಶ್ರೀ ಕೃಷ್ಣನು ವನವಾಸ ಕಾಲಿದಲ್ಲಿದ್ದ ಧರ್ಮರಾಯನಿಗೆ ಹೇಳಿದನು ಎಂದು ವ್ರತ ಕಥೆಯಿಂದ ತಿಳಿದು ಬರುತ್ತದೆ ಹಾಗೂ ಶ್ರೀಕೃಷ್ಣನ ಸ್ವರೂಪವೇ **"ಅನಂತಪದ್ಮನಾಭಸ್ವಾಮಿ"** ಎಂದು ಹೇಳುತ್ತಾನೆ. ಇಲ್ಲಿ ಯಾವ ವ್ರತವನ್ನು ಆಚರಿಸಿದರೂ ಶ್ರದ್ಧೆ, ಭಕ್ತಿ ಮತ್ತು ತನ್ನೀಲತೆ ಮುಖ್ಯ, ಪೂಜೆಗೆ ಆಡಂಬರದ ಅಗತ್ಯವಿಲ್ಲ.

ಈ ವ್ರತವು ಬಹಳ ವಿಶೇಷವಾದುದು. ಇಲ್ಲಿ **'ಯಮುನಾ'** ಪೂಜೆಯನ್ನು ಆಚರಿಸಿ ನಂತರ ಕಲಶದಲ್ಲಿ ಆಹ್ವಾನಿತವಾದ ಯಮುನಾ ನದಿಯ ಜಲವನ್ನು ಉಪಯೋಗಿಸಿಕೊಂಡು ಪೂಜೆಯನ್ನು ಆಚರಿಸುತ್ತಾರೆ. ಇಲ್ಲಿ ಎರಡು ಕಲಶಗಳನ್ನಿಟ್ಟು,ಆ ಕಲಶಗಳಲ್ಲಿ ಪೂಜಿಸಲ್ಪಟ್ಟ ಯಮುನಾ ಜಲವನ್ನು ಹಾಕಿ ಒಂದೊಂದು ಕಲಶದ ಮೇಲೆ ಒಂದೊಂದು ತೆಂಗಿನಕಾಯಿಯನ್ನಿಟ್ಟು ವಸ್ತ್ರವನ್ನು ಹೊದಿಸಿ ದರ್ಭೆಯಲ್ಲಿ ಹೆಣೆದ ಏಳು ಶಿರಸ್ಸುಗಳುಳ್ಳ ಸರ್ಪಾಕಾರ ರೂಪದಲ್ಲಿ ಅನಂತನನ್ನು ಕಟ್ಟಿ ಕಲಶಗಳ ಮಧ್ಯೆ ಇಟ್ಟು ಎಲ್ಲಾ ಪೂಜೆಗಳಂತೆ ಗಣಪತಿ ಪೂಜೆಯನ್ನು ಮಾಡಿ ಪ್ರಾಣಪ್ರತಿಷ್ಠೆಯನ್ನು ಮಾಡಿ ಷೋಡಶೋಪಚಾರ ಪೂಜೆಯನ್ನು ಮಾಡುವ ಸಂಪ್ರದಾಯವಿದೆ. ಇದು ಬಹಳ ಪವಿತ್ರವಾದ ವ್ರತ. ಇದನ್ನು ಅವರವರ ಪದ್ಧತಿಯಂತೆ ಆಚರಿಸುತ್ತಾರೆ.

ಈ ವ್ರತದ ವಿಶೇಷವೆಂದರೆ ಸಂಖ್ಯೆ **'ಹದಿನಾಲ್ಕು'** 14 ಗಂಟುಗಳುಳ್ಳ (ಗ್ರಂಥಿ) ದೋರದ ಪೂಜೆ, 13 ವರ್ಷಗಳು ವ್ರತವನ್ನು ಆಚರಿಸಿ 14 ನೆ ಯ ವರ್ಷದಲ್ಲಿ ಉದ್ಯಾಪನೆಯನ್ನು ಮಾಡುತ್ತಾರೆ ಮತ್ತು ವ್ರತದ ಆಚರಣೆ ಮುಂದುವರಿಸುತ್ತಾರೆ. ಇದರಿಂದ ಮುಂದಿನ ಪೀಳಿಗೆ ಮುಂದುವರಿಸಲು ಅನುಕೂಲವಾಗುತ್ತದೆ. ಇಲ್ಲಿ ವಿಶೇಷವೆಂದರೆ ನವಶಕ್ತಿಪೂಜೆ, ದಿಕ್ಪಾಲಕ ಪೂಜೆ ಹಾಗೂ 14 ಆವರಣಪೂಜೆಯಲ್ಲಿ ವಿವಿಧ ದೇವತೆಗಳನ್ನು ಆಹ್ವಾನಿಸಿ ಪ್ರತಿ ಆವರಣ ಪೂಜೆಯಲ್ಲಿ

**ದಯಾಬ್ದೇ ತ್ರಾಹಿ ಸಂಸಾರ ಸರ್ಪಾನ್ಮಾಂ ಶರಣಾಗತಂ**
**ಭಕ್ತ್ಯಾ ಸಮರ್ಪಯೇ ತುಭ್ಯಂ**
**ಪ್ರಥಮಾವರಣ... ಚತುರ್ದಶಾವರಣಾರ್ಚನಂ**
**ಸಮರ್ಪಯಾಮಿ**

ಎಂದು ಹೇಳಿಕೊಂಡು ಶಂಖೋದಕ ಸಹಿತ ವಿವಿಧ ಪತ್ರೆ ಮತ್ತು ಪುಷ್ಪಗಳಿಂದ ಪೂಜೆ ಮಾಡುತ್ತಾರೆ. ಎಲ್ಲಾ ಪೂಜಾ ವಿಧಿಗಳನ್ನು ಪೂರ್ಣಗೊಳಿಸಿ **"ದೋರಬಂಧನಮ್"** ಪೂಜಿಸಿದ ದಾರವನ್ನು ಪತ್ನಿ ಸಮೇತ ಈ ಪವಿತ್ರವಾದ ದಾರವನ್ನು ಧರಿಸಿ ಧನ್ಯರಾಗುತ್ತಾರೆ. ಹಿಂದಿನ ದಿನ ಧರಿಸಿದ ಹೋದ ವರ್ಷದ ದಾರವನ್ನು ವಿಸರ್ಜಿಸುತ್ತಾರೆ. ಈ ರೀತಿ







ಅವಿಚಿನ್ನವಾಗಿ ಈ ವ್ರತದ ಆಚರಣೆ ನಡೆಯುತ್ತದೆ.

ವಿವಿಧ ಹೆಸರುಗಳಿಂದ ಕರೆಯಲ್ಪಡುವ ಆದಿಶೇಷನ ಮೇಲೆ ಪವಳಿಸಿರುವ ಅನಂತ ಪದ್ಮನಾಭ ರೂಪವಿರುವ ದೇವಾಲಯಗಳನ್ನು, ತಿರುಪತಿಯ ಗೋವಿಂದ ರಾಜಸ್ವಾಮಿ ಶ್ರೀರಂಗ, ಶ್ರೀರಂಗ ಪಟ್ಟಣ ಮತ್ತು ಇನ್ನೂ ಅನೇಕ ಯಾತ್ರಾ ಸ್ಥಳಗಳಲ್ಲಿ ನಾವು ದರ್ಶಿಸಬಹುದು. ನಾವು ಅನಂತನಿಗೆ ಮೀಸಲಾಗಿರುವ ಕೇರಳ ರಾಜ್ಯದಲ್ಲಿರುವ ತಿರುವನಂತಪುರದಲ್ಲಿರುವ ಬೃಹದಾಕಾರವಾದ ಅನಂತಪದ್ಮನಾಭ ದೇವಸ್ಥಾನದಲ್ಲಿ ಅನಂತ ರೂಪನಾದ ಅನಂತಪದ್ಮನಾಭ ಸ್ವಾಮಿಯನ್ನು ದರ್ಶಿಸಿ ಧನ್ಯರಾಗಬಹುದು.

ಈ ವ್ರತವು ಕೌಂಡಿನ್ಯ ಮತ್ತು ಸುಶೀಲೆ ದಂಪತಿಗಳ ಮುಖಾಂತರ ಪ್ರಚಲಿತ ಮತ್ತು ಪ್ರಸಿದ್ಧಿಯಾಯಿತು. ಈ ವ್ರತವನ್ನು ಮಾಡಿದ ಪ್ರಭಾವದಿಂದ ದಂಪತಿಗಳು ಅನಂತವಾದ ಸರ್ವ ಸಂಪತ್ತುಗಳನ್ನು ಪಡೆದರು. ಕೆಲವು ಸಮಯದ ನಂತರ ದುರದೃಷ್ಟವಶಾತ್, ಅಹಂಕಾರದಿಂದ ಎಲ್ಲವನ್ನು ಕಳೆದುಕೊಂಡು ದರಿದ್ರನಾಗಿ ಎಲ್ಲರಿಂದ ದೂಷಿತಗೊಂಡು ಮತ್ತು ತಿರಸ್ಕೃತನಾಗಿ ಕೌಂಡಿನ್ಯನು ಅನೇಕ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ತನ್ನ ತಪ್ಪಿನ ಅರಿವಾಗಿ ಮಹಾಮಹಿಮಾನ್ವಿತನಾದ ಅನಂತನನ್ನು ಹುಡುಕಿಕೊಂಡು ಕಾಡಿನಲ್ಲಿ ಅಲೆಯುತ್ತಾ ಎಲ್ಲರಲ್ಲಿಯೂ ನೀವು ಅನಂತನನ್ನು ಕಂಡಿರಾ? ಎಂದು ಅನೇಕರನ್ನು ಕೇಳುತ್ತಾನೆ ಅದರಲ್ಲಿ,

1. ಹೂವು, ಕಾಯಿ, ಹಣ್ಣುಗಳಿದ್ದ ಮಾವಿನ ಮರ, ಅಲ್ಲಿ ಯಾವ ಪಕ್ಷಿ ಅಥವಾ ಕ್ರಿಮಿಗಳು ಸಂಚಾರ ಮಾಡುತ್ತಿರಲಿಲ್ಲ, 2. ಎಳೇ ಕರುವಿನೊಡನೆ ಕೂಡಿ ಕೊಂಡಿರುವ ಹಸೀ ಹುಲ್ಲಿನ ಮಧ್ಯೆ ಇದ್ದರೂ, ಹುಲ್ಲನ್ನೂ ತಿನ್ನದೆ ಅಲ್ಲಿ ಇಲ್ಲಿ ತಿರುಗಾಡುತ್ತಾ ಇದ್ದ ಆಕಳು 3. ಹಚ್ಚಗಿರುವ ಹುಲ್ಲಿನಲ್ಲಿ ನಿಂತಿರುವ ವೃಷಭನನ್ನು ನೋಡಿದನು. 4. ಒಂದರಿಂದ ಒಂದಕ್ಕೆ ಪ್ರವಹಿಸುತ್ತಿರುವ ಅಲೆಗಳುಳ್ಳ ಅತ್ಯಂತ ಮನೋಹರವಾದ ಪುಷ್ಕರಣೀ ದ್ವಯವನ್ನು ನೋಡಿದನು. 5.ಮುಂದೆ ಒಂದು ಕತ್ತೆಯನ್ನೂ, ಆನೆಯನ್ನೂ ನೋಡಿದನು. ಯಾರನ್ನು ಕೇಳಿದರೂ, ತಾವು ಅನಂತಪದ್ಮನಾಭನನ್ನು ನೋಡಲಿಲ್ಲ ಎಂದು ಹೇಳುತ್ತಾರೆ. ಕೌಂಡಿನ್ಯ ಮಹಾಮುನಿಯು ಅತ್ಯಂತ ದುಃಖಿತನಾಗಿ ಮೂರ್ಛೆ ಹೋದನು. ಕೊನೆಗೆ ಪರಮಾತ್ಮನಾದ ಅನಂತನು ವೃದ್ದಬ್ರಾಹ್ಮಣನಂತೆ ಬಂದು ಪ್ರತ್ಯಕ್ಷನಾಗಿ ತನ್ನ ನಿಜರೂಪದಿಂದ ಶಂಖ, ಚಕ್ರ, ಗಧಾದಾರಿಯಾಗಿ ದರ್ಶನವನ್ನು ಕೊಡುತ್ತಾನೆ. ಇದೇ ಭಗವಂತನ ಲೀಲೆ. ಭಕ್ತರನ್ನು ಪರೀಕ್ಷಿಸಿ ಅವರನ್ನು ಪಕ್ವಮಾಡುತ್ತಾನೆ. ಕೌಂಡಿನ್ಯನು ಆನಂದಭಾಷ್ಪದಿಂದ ಪರಮಾತ್ಮನಾದ ಅನಂತನನ್ನು ನಾನಾ ವಿಧವಾಗಿ ಸ್ತೋತ್ರವನ್ನು ಮಾಡಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ವಿಧವಿಧವಾಗಿ ಬೇಡಿಕೊಳ್ಳುತ್ತಾನೆ. ಭಗವಂತ ಭಕ್ತ ಪರಾಧೀನನಲ್ಲವೆ, ಪ್ರಸನ್ನನಾಗಿ ಎಲ್ಲವನ್ನೂ ಕರುಣಿಸಿ, ಧರ್ಮ ಮಾರ್ಗದಿಂದ ಪ್ರವರ್ತಿಸುವಂತೆ, ಮತ್ತು ಅಂತ್ಯ ಕಾಲದಲ್ಲಿ ಶಾಶ್ವತ ವಿಷ್ಣುಲೋಕವನ್ನು ಹೊಂದುವಂತೆ ವರಗಳನ್ನು ಕೊಟ್ಟು ರಕ್ಷಿಸುತ್ತಾನೆ.

ಆಗ ಕೌಂಡಿನ್ಯನು, ಸ್ವಾಮಿಯನ್ನು ತಾನು ಕಂಡ ಮಾವಿನಮರ, ಹಸು, ಕರು, ವೃಷಭ, ಪುಷ್ಕರಣಿ ಗಾರ್ಧಭ, ಆನೆ, ವಿಚಾರವಾಗಿ ಕೇಳಲಾಗಿ, ಪರಮಾತ್ಮನು

1. ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಸಕಲ ವಿದ್ಯೆಗಳನ್ನು ಓದಿಕೊಂಡು ಗರ್ವಿಸಿ ಯಾವ ಶಿಷ್ಯರಿಗೂ ಹೇಳದೆ ಹೋದದ್ದರಿಂದ ಅಡವಿಯಲ್ಲಿ ಯಾರಿಗೂ ಉಪಯೋಗವಿಲ್ಲದ ಮಾವಿನ ಮರವಾಗಿ ನಿಂತಿರುವನು.



# ಪೌರ್ಣಮಿ ಗರುಡಸೇವೆ

**ಕೇವಲ ನಕ್ಷತ್ರೋತ್ಸವದಲ್ಲಿ ಅಲ್ಲದೆ, ಪ್ರತಿ ತಿಂಗಳೂ ವೈಖಾನಸ ಆಗಮನದ ಪ್ರಕಾರ ಪ್ರತಿ ಪೌರ್ಣಮಿಯ ರಾತ್ರಿ ಹೊತ್ತು ತಿರುಮಲೇಶನಿಗೆ "ಪೌರ್ಣಮಿ ಗರುಡ ಸೇವೆ" ನಿರ್ವಹಿಸುತ್ತಾರೆ. ಪೌರ್ಣಮಿಯಂದು ರಾತ್ರಿ 7.00 ಗಂಟೆಯ ಸಮಯದಲ್ಲಿ ವಜ್ರ ಕವಚ, ವಜ್ರಕಿರೀಟಾದಿ ಸರ್ವಾಭರಣಭೂಷಿತನಾಗಿ ಶ್ರೀ ಮಲೆಯಪ್ಪ ಸ್ವಾಮಿಯು ಚಿನ್ನದ ಗರುಡ ವಾಹನದ ಮೇಲೆ ಬರುತ್ತಾರೆ. ಛತ್ರಚಾಮರದೊಂದಿಗೆ, ಗಜತುರಗ ವೃಷಭ ರಾಜರೊಂದಿಗೆ ತಿರುಮಲೆಯ ಪುರವೀಧಿಗಳಲ್ಲಿ ವಿಹರಿಸುತ್ತಾ ದರ್ಶನ ನೀಡುವರು.**

2. ಪೂರ್ವದಲ್ಲಿ ಒಬ್ಬ ಮಹಾ ಭಾಗ್ಯವಂತನಾದರೂ ತಾನೂ ತಿನ್ನದೆ ಇತರರಿಗೂ ಅನ್ನದಾನವನ್ನು ಮಾಡಲಿಲ್ಲ. ಆದಕಾರಣ ಹುಲ್ಲು ತಿನ್ನಲು ಬಾಯಿಯಿಲ್ಲದೆ ಆಕಳಾಗಿ ಜನಿಸಿ ನಿಂತಿದ್ದಾನೆ.

3. ಹಿಂದಿನ ಜನ್ಮದಲ್ಲಿ ಒಬ್ಬ ಶ್ರೀಮಂತನು ಗರ್ವಿಸಿ ಬ್ರಾಹ್ಮಣರಿಗೆ ಊಷರ ಭೂಮಿಯನ್ನು ದಾನ ಕೊಟ್ಟನಾದ್ದರಿಂದ ಆತನು ವೃಷಭನಾಗಿ ಕಾಡಿನಲ್ಲಿ ತಿರುಗುತ್ತಿದ್ದಾನೆ.

4. ನೀನು ಕಂಡ ಸರಸ್ಸುಗಳು ಒಂದು ಧರ್ಮ, ಮತ್ತೊಂದು ಅಧರ್ಮ.

5. ಒಬ್ಬ ಪುರುಷನು ಪೂರ್ವಜನ್ಮದಲ್ಲಿ ಪರನಿಂದೆ ಮಾಡುತ್ತಾ ಇದ್ದಕಾರಣ, ಅವನು ಗಾರ್ದಭನಾಗಿ ಜನಿಸಿದನು. ಆನೆಯು ಪೂರ್ವದಲ್ಲಿ ತಮ್ಮ ಹಿರಿಯರು ಮಾಡಿದ ಧರ್ಮವನ್ನು ವಿಕ್ರಯಿಸಿದ ಕಾರಣ ಆನೆಯಾಗಿ ಹುಟ್ಟಿರುವನು.

ನೀನು ಪತ್ನಿಯಸಹಿತ ವ್ರತವನ್ನು ಮಾಡಿ,14 ಸಂವತ್ಸರಗಳು ಆಚರಿಸು, ಆ ನಂತರ ನಾನು ಸಂತುಷ್ಟನಾಗಿ ನಿನಗೆ ನಕ್ಷತ್ರ ಸ್ಥಾನವನ್ನು ಕೊಡುತ್ತೇನೆ ಎಂದು ವರಗಳನ್ನು ಕೊಡುತ್ತಾನೆ. ಕೌಂಡಿನ್ಯನು ಪರಮಾತ್ಮನ ಅಣತಿಯಂತೆ ಎಲ್ಲವನ್ನು ಆಚರಿಸಿ ಸಾಯುಜ್ಯವನ್ನು ಪಡೆಯುತ್ತಾನೆ. ಈ ರೀತಿ, ನಮಗೆ ಈ ಶ್ರೀಅನಂತಪದ್ಮನಾಭ ವ್ರತವು ಪ್ರಚಲಿತವಾಯಿತು.

ಈ ಕಥೆಯನ್ನು ಭಕ್ತಿ ಶ್ರದ್ಧೆಯಿಂದ ಓದಿ, ಶ್ರವಣ ಮಾಡಿದರೆ ನಮಗೆ ಎಲ್ಲ ರೀತಿಯ ವಿಷಯಗಳನ್ನು ಗ್ರಹಿಸಿ, ಪ್ರಯೋಜನಗಳನ್ನು ತಿಳಿಯಬಹುದು.

ದಾನವನ್ನು ಮಾಡಬೇಕಾದರೆ ಪತ್ನಿಯ ತನ್ನ ಅಭಿಮತ ಪೂರ್ವಕವಾಗಿ ಒಂದು ತೊಟ್ಟು ನೀರನ್ನು ಹಾಕುತ್ತಾಳೆ. ಆಗಲೆ ಆ ದಾನಕ್ಕೆ ಫಲ. ಯಾವ ದಾನವನ್ನು ಕೊಟ್ಟರು ಅದು ನನ್ನದಲ್ಲ, ದಾನ ತೆಗೆದುಕೊಳ್ಳುವವರದು ಎಂಬ ಭಾವನೆಯಿಂದ **"ನ ಮಮ"** ಎಂಬ ಭಾವನೆಯಿಂದ ಕೊಡಬೇಕು. ಉಪಾಯನ ದಾನ ವ್ರತ ಅಥವಾ ಪೂಜೆಗಳ ನಂತರ ಪೂಜೆ ಮಾಡಿಸಿದ ಪುರೋಹಿತನಿಗೆ ದಾನವನ್ನು ಕೊಡಬೇಕು. ಇದನ್ನು **"ಉಪಾಯನದಾನ"** ಎಂದು ಕರೆಯುತ್ತಾರೆ. ಇದಂ ಉಪಾಯನ ದಾನಂ ಬ್ರಾಹ್ಮಣಾಯ(ಆಯಾಯ ವ್ರತದ ಪ್ರಕಾರ) **"ಸ್ವರೂಪಾಯ ತುಭ್ಯಮಹಂ ಕಾಮಯಮಾನಃ ಸಂಪ್ರದದೇ ನ ಮಮ ನ ಮಮ"** ಇದರಿಂದ ಪೂಜೆಯ ಫಲ ದೊರೆಯುತ್ತದೆ. ಇದೇ, ನಮಗೆ ಹಿರಿಯರಿಂದ ಬಂದ ಬಳುವಳಿ. ನಾವೆಲ್ಲರೂ, ಶ್ರೀಅನಂತ ಪದ್ಮನಾಭನನ್ನು ಸ್ಮರಿಸಿ ಧನ್ಯರಾಗೋಣ.



ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ॥ ಬಿ.ಎನ್.ಶ್ರೀನಿವಾಸನ್

**ಕಳೆದ ಸಂಚಿಕೆಯಿಂದ**

ಮೇಲಿನ ಅಂಶಗಳು ತಥ್ಯವಲ್ಲವೆನ್ನಲು ಕಾರಣಗಳು ಹೀಗಿವೆ.

1. ಆಲಯದಲ್ಲಿನ ಶಾಸನಗಳ ಅಧ್ಯಯನದಿಂದ ಉತ್ತರ ಭಾರತದ ಜನ ದೇವರನ್ನು ಬಾಲಾಜೀ ಎಂದು ಕರೆಯುತ್ತಿರುವುದು ತೀರ ಈಚೆಗೆ ಎಂದು ತಿಳಿದುಬರುತ್ತದೆ. ಕ್ರಿ.ಶ. 17ನೇ ಶತಮಾನದ ಮೊದಲ ಯಾವುದೇ ಶಾಸನದಲ್ಲಿಯಾಗಲೀ, ಸಾಹಿತ್ಯ ಕೃತಿಯಲ್ಲಿಯಾಗಲೀ ಬಾಲಾಜಿ ಎಂಬ ಪ್ರಯೋಗವಿಲ್ಲ. ವಾಸ್ತವವೆಂದರೆ ಉತ್ತರ ಭಾರತದವರು ಶಿವಾಜಿಯ ಕಾಲದಿಂದ ತಿರುಪತಿಗೆ ಬರುವ ಪರಂಪರೆ ಬೆಳೆಸಿಕೊಂಡರು (ಕ್ರಿ.ಶ.17 ನೇ ಶತಮಾನದ ಮಧ್ಯಭಾಗ) ಹೀಗಾಗಿ ಉತ್ತರ ಭಾರತದ ಜನ ದೇವರನ್ನು ಯಾವ ಹೆಸರಿನಿಂದ ಕರೆದರೂ ಅದು ಆಲಯದ ಪ್ರಾಚೀನತೆಯನ್ನು ಸೂಚಿಸದು.

ಪರ್ಯಾಯವಾಗಿ, ಮಗುವೆಂದು ಗುರುತಿಸಲಾದ ಶ್ರೀಕೃಷ್ಣನೊಡನೆ ವಿಷ್ಣುವಿನ ಕಥೆ ಅವತಾರ ಕಥೆಯಾಗಿ ಹೊಂದಿಕೊಂಡಿದೆ. ಭಾಗವತದಲ್ಲಿ-ತಮದ್ಭುತಂ ಬಾಲಕ ಮಂಬುಜೇಕ್ಷಣಂ-ಎಂದು ಕೃಷ್ಣ ಹುಟ್ಟಿದಾಗ ಆತ ತನ್ನ ತಂದೆ ವಸುದೇವನಿಗೆ ನೀಡಿದ ದರ್ಶನವನ್ನು ವಿವರಿಸಲಾಗಿದೆ. ಹೀಗಾಗಿ ದುರ್ಗೆಯ ಹೆಸರಾದ ಬಾಲಾ ಎಂಬ ಪದದೊಡನೆ ಅಲ್ಲದೆ ಭಾಗವತದಲ್ಲಿ ಹೇಳಲಾದ ಶ್ರೀಕೃಷ್ಣಾವತಾರ ವಿವರಣೆಯಾಗಿರುವ ಬಾಲಕ ಪದದೊಡನೆ ಬಾಲಾಜಿ ಎಂಬ ಹೆಸರು ಸಂಬಂಧ ಹೊಂದಿರುವುದು ಸಂಭವನೀಯ.

ಏನೇ ಆದರೂ ಈ ವಿವಾದವನ್ನು ಗಟ್ಟಿಯಾಗಿ ಹಿಡಿಯಲು ಯಾಕೆ ಸಾಧ್ಯವಿಲ್ಲವೆಂದರೆ ಉತ್ತರ ಭಾರತೀಯರು ಆಲಯಕ್ಕೆ ಬರಲು ಆರಂಭಿಸಿದ್ದೇ ತೀರ ಈಚೆಗೆ. ವಿಜಯನಗರದ ಅರಸರ ಕಾಲದವರೆಗೆ ಆಲಯವು ಉತ್ತರದತ್ತಣಿಂದ ಈಗ ಕಂಡುಬರುವಂತೆ ಭಕ್ತರನ್ನು ಸೆಳೆಯುತ್ತ ಇದ್ದಿತೆಂಬುದಕ್ಕೆ ಆಧಾರಗಳಿಲ್ಲ.

2. ಈ ಪರ್ವತ ಪಂಕ್ತಿಯನ್ನು ಸರ್ವದಾ ವೆಂಗಡವೆಂದು ಕರೆದದ್ದುಂಟು. ಶೇಷಾಚಲ ಎಂಬ ಹೆಸರೂ ಈಚಿನದೇ. ಇದರಿಂದಾಗಿ ದೇವಿಯ ರೂಪವಾದ ಮೇರು ಚಕ್ರವೆಂಬ ಆಕಾರಕ್ಕೆ ಪ್ರತ್ಯೇಕ ವೈಶಿಷ್ಟ್ಯವಿಲ್ಲದೆ ಪರ್ವತವು ವೆಂಗಡವೂ, ಪರ್ವತದ ಒಡೆಯ ವೆಂಕಟಾಚಲಪತಿಯೂ ಆದರು.

3. ಕ್ರಿ.ಶ.1628 ರ ಸುಮಾರಿನಲ್ಲಿ ಶ್ರೀವೈಷ್ಣವನಾದ, ಮಟ್ಲಕುಮಾರ ಅನಂತರಾಜನಿಂದ ನಿರ್ಮಾಣ ಆದದ್ದು ಗಾಳಿಗೋಪುರ ಎನ್ನಲು ಶಾಸನದ ಸಾಕ್ಷಿಯಿದೆ. ಈ ಮಟ್ಲ ಕುಮಾರನು ಶ್ರೀವೈಷ್ಣವನೆಂಬುದು ಪ್ರಸಿದ್ಧವಾಗಿ ಒಂದು ಶ್ರೀವೈಷ್ಣವ ಆಲಯಕ್ಕೆ 17ನೇ ಶತಮಾನದಲ್ಲಿ ಕಾಳಿ ಗೋಪುರ ನಿರ್ಮಿಸಿದ ಎಂಬುದು ಅಸಂಬದ್ಧವಾಗುತ್ತದೆ. ಹಾಗಾಗಿ ಈ ವಾದದಲ್ಲಿ ಗಟ್ಟಿತನವಿಲ್ಲ.

4. ಆಲಯ ವಿಮಾನದಲ್ಲಿ ಒಂದು ಕಿರಿಯ ಸಿಂಹ ವಿದ್ದು ಶಕ್ತಿಯ ಸಂಕೇತವಾಗಿದೆ. ಸಿಂಹ ಸಂಕೇತ ಶಕ್ತಿಯ ಸಂಕೇತ ಎಂಬರ್ಥದಲ್ಲಿ ಮಾತ್ರವೇ ಬಳಕೆಯಾಗಿಲ್ಲ. ವೈಷ್ಣವ ಪರಂಪರೆಯನ್ನು ಎತ್ತಿ ಹಿಡಿಯುವ ವೈಖಾನಸ ಹಾಗೂ ಪಾಂಚರಾತ್ರ ಆಗಮಗಳು ವಿಮಾನದ ಮೂಲೆಗಳಲ್ಲಿ ಸಿಂಹಗಳನ್ನಾಗಲೀ,ಗರುಡನನ್ನಾಗಲೀ ಸ್ಥಾಪಿಸಬಹುದೆಂದು ಸ್ಪಷ್ಟವಾಗಿ ಹೇಳಿವೆ. ಭೃಗುಸಂಹಿತೆ ಈ ವಿಷಯವನ್ನು ಖಚಿತಗೊಳಿಸಿದೆ.



ಆಗಮ ಶಾಸ್ತ್ರಗಳು ವಿಮಾನಗೋಪುರದ ಮೂಲೆಗಳಲ್ಲಿಯೇ ಅಲ್ಲದೆ,ಮಂಟಪಗಳ ಮೇಲೂ ಒಂದೇ ಸಿಂಹ ಅಥವಾ ಗರುಡನನ್ನು ಸ್ಥಾಪಿಸಬೇಕೆಂದು ಹೇಳುತ್ತವೆ. ಪದೇ ಪದೇ ಶತ್ರುಗಳಿಂದ ಧಾಳಿಗಳಾಗುವ ನಿರೀಕ್ಷೆಯಿರುವ ಮಂದಿರಗಳ ಶಿಖರಗಳಲ್ಲಿ ಸಿಂಹಗಳನ್ನು ಸ್ಥಾಪಿಸುವುದು ಸಾಮಾನ್ಯ. ಆಲಯವು ಜನರಿಂದ ದೂರಪ್ರಾಂತ್ಯದಲ್ಲಿ, ಮೂಲೆಯಲ್ಲಿರುವಾಗ ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರಣಗಳಿಂದಾಗಿ ಗರುಡನನ್ನು ಬಳಸುವರು.

ಕ್ರಿ.ಶ.13 ನೇ ಶತಮಾನದಲ್ಲಿ ವೀರನರಸಿಂಗಯಾದವರಾಯನು ನಿರ್ಮಿಸಿದಂತೆಯೇ ನಾವು ಇಂದು ಕಾಣುವ ಆಲಯ ವಿಮಾನವಿದೆಯೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಆ ರಾಯನ ಶಿಲ್ಪಿಗಳಿಗೆ ಸಿಂಹವನ್ನು ಅಥವಾ ಗರುಡನನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದ್ದಿತು. ತಮ್ಮ ಆಶ್ರಯದಾತ ವೀರನರಸಿಂಗರಾಯನು ತನ್ನ ಹೆಸರಿನಲ್ಲಿಯೇ ಸಿಂಹವನ್ನು ಹೊಂದಿದ್ದರಿಂದಾಗಿ ಅವರು ಸಹಜವಾಗಿ ಸಿಂಹವನ್ನು ಆಯ್ದುಕೊಂಡರು.

ಆಲಯದ ಯಾವ ಭಾಗದಲ್ಲಿಯಾದರೂ ಗಣೇಶ ಅಥವಾ ದುರ್ಗೆಯ ಮೂರ್ತಿಗಳಿದ್ದರೂ ವೈಷ್ಣವ ಆಲಯದ ನಿರ್ಮಾಣದ ಬಗ್ಗೆಯಿರುವ ಆಗಮಶಾಸ್ತ್ರ ನಿಯಮವನ್ನು ಮೀರಿದಂತೆ ಆಗುವುದಿಲ್ಲ. ಕಾರಣ ಇವರೆಲ್ಲರೂ ಪರಿವಾರ ದೇವತೆಗಳ ಸಾಲಿನಲ್ಲಿ ಬರುತ್ತಾರೆ. ಹೀಗಾಗಿ ಎಲ್ಲೋ ಒಂದು ಕಡೆ ಒಬ್ಬದೇವತೆಯ ಇರುವಿಕೆಗಳು ಆಲಯ ವಿಗ್ರಹದ ಬಗ್ಗೆ ಪರಿಣಾಮಕಾರಿಯಾಗದು.

5. ಉಳ್‌ಚಾತ್-ನಿಸ್ಸಂದೇಹವಾಗಿ ಬಹುದೀರ್ಘವಾದದ್ದೇ. ಇಲ್ಲಿಯೂ ಶಾಸನಗಳನ್ನು ಗಮನವಿಟ್ಟು ಓದಿದಲ್ಲಿ ಈ ಒಳವಸನ-ಉಳ್‌ಚಾತ್-ಅರ್ವಾಚೀನವೆಂಹುದು ಸ್ಪಷ್ಟ ಆಗುತ್ತದೆ. ದೇವರನ್ನು ಅಲಂಕರಿಸುವ ಅಸಂಖ್ಯ ಆಯುಧ ಆಭರಣಗಳಿಂದಾಗಿ ಈ ಬಟ್ಟೆ ಬಹಳ ಉದ್ದವಾಯಿತು. ವಿಗ್ರಹ ಅತ್ಯಂತ ಪವಿತ್ರವಾಗಿ ಅತ್ಯಂತ ಗೌರವಪ್ರದ ಆಗಿ ಇರುವುದರಿಂದ ಯಾವುದೇ ಆಭರಣದ ಅಲಂಕಾರದಿಂದಲೂ ವಿಗ್ರಹದಲ್ಲಿ ಗೆರೆ ಬೀಳಬಾರದು. ಇದಕ್ಕಾಗಿ ಆಭರಣಗಳ ಅಡಿಯಲ್ಲಿ ದಪ್ಪವಾದ ಒತ್ತುಗಡೆಯಿರಬೇಕು. ಉದ್ದವಾದ ವಸ್ತ್ರವು ಈ ಒಂದೇ ಕಾರಣದಿಂದಲೇ ಬಂದಿದೆಯೆಂದು ಯಾರಾದರೂ ಒಪ್ಪುತ್ತಾರೆ. ಇದರಿಂದಾಗಿ ಈ ವಸ್ತ್ರದ ಉದ್ದಳತೆಗೂ ವಿಗ್ರಹ ದೇವರೂ ದೇವನಾಯಕಿಯೋ ಆಗಿರುವುದಕ್ಕೂ ಸಂಬಂಧವಿಲ್ಲ. ಹಾಗಲ್ಲದೇ ಇದೇ ವಾದವನ್ನು ಹಿಡಿದು ಮುಂದುವರೆದರೆ ಪವಿತ್ರವಾದ ಸಂದರ್ಭಗಳಲ್ಲಿ ಪುರುಷರು ಉಡುವ ಹತ್ತು ಮೊಳ ಪಂಚೆಯಿಂದಾಗಿ ಅವರೆಲ್ಲ ಮಹಿಳೆಯರೆಂದು ವಾದಿಸಬೇಕಾದೀತು.

6. ಆಲಯದ ಪೂಜಾ ಪರಿಕರಗಳಲ್ಲಿ ಚಂದನವು ವಿಜಯನಗರದ ಕಾಲದಿಂದ ಎಂದರೆ ಕ್ರಿ.ಶ.15 ನೇ ಶತಮಾನದ ನಂತರ ಮಾತ್ರವೇ ಸ್ಥಳಪಡೆಯಿತೆಂಬುದನ್ನು ಶಾಸನಗಳ ಶುದ್ಧಮನನ್ನ ಅಧ್ಯಯನದಿಂದ ತಿಳಿಯಬಹುದು. ಅದಕ್ಕೂ ಮುಂಚೆ ಚಂದನದ ಉಲ್ಲೇಖವಿಲ್ಲ. ವಕ್ಷಃಸ್ಥಳದ ಲಕ್ಷ್ಮಿಗೆ ರಾತ್ರಿಯ ಹೊತ್ತಿನಲ್ಲಿ ಚಂದನವನ್ನು ಹಚ್ಚುವರು ಹಾಗೂ ದೇವರ ಪಾದಗಳಲ್ಲಿ ಚಂದನ ಪಾತ್ರೆಗಳೆರಡನ್ನೂ ಇಡುವರು. ವಿಷ್ಣುವನ್ನು ಅಲಂಕಾರ ಪ್ರಿಯದೇವರೆಂದೂ,ಶಿವನನ್ನು ಅಭಿಷೇಕ ಪ್ರಿಯದೇವರೆಂದೂ, ಸ್ವಾಮಿಗೆ (ಹರಿಗೆ) ಚಂದನ ಗಂಧವು ಅಪೇಕ್ಷಿತವೆಂದೂ ಹಿಂದೂಗಳಲ್ಲಿನ ಪರಂಪರಾಗತ ನಂಬಿಕೆಯಾಗಿದೆ. ಚಂದನವನ್ನು ಸ್ತ್ರೀಪುರುಷರಿಬ್ಬರಿಗೂ ಕೊಡಬಹುದಾದದ್ದು. ಅದರಲ್ಲಿ ಸ್ತ್ರೀಯರಿಗೆ ಮಾತ್ರವೆಂಬುದೇ ನಿಲ್ಲ.

(ಮುಂದುವರೆಯುತ್ತದೆ)



# ತಿರುಮಲೆಯ ಸುತ್ತಮುತ್ತ ನೋಡಬಹುದಾದ ಸ್ಥಳಗಳು

ತೆಲುಗು ಮೂಲ: ಶ್ರೀ ಬಿ.ವಿ. ರಮಣ
ಅನುವಾದ : ಎಸ್. ವಾದಿರಾಜು

ಆಂಧ್ರಪ್ರದೇಶದ ರಾಜ್ಯದ ತಿರುಪತಿಯ ಜಿಲ್ಲೆಯಲ್ಲಿರುವ ತಿರುಮಲೆ ಅತ್ಯಂತ ಪ್ರಸಿದ್ಧವಾದ ಪುಣ್ಯಕ್ಷೇತ್ರ. ಇದು ಭಾರತ ದೇಶದಲ್ಲೇ ಅತಿ ದೊಡ್ಡ ಧಾರ್ಮಿಕ ಕ್ಷೇತ್ರವೆಂದರೆ ತಪ್ಪಾಗಲಾರದು. ಕಲಿಯುಗದ ಪ್ರತ್ಯಕ್ಷದೈವವಾದ ಶ್ರೀವೇಂಕಟೇಶ್ವರ ಸ್ವಾಮಿಯು ನೆಲೆಸಿರುವ ತಿರುಮಲೆಯ ಆಲಯ ಮುಖ್ಯವಾಗಿದ್ದು, ಆ ದೇವಾಲಯದ ಸುತ್ತಮುತ್ತಲೂ ಅನೇಕ ದರ್ಶನೀಯ ಸ್ಥಳಗಳು ಇವೆ. ಈ ತಿರುಮಲೆಯ ಆಲಯವು ಸಮುದ್ರದ ಮಟ್ಟದಿಂದ 2800 ಅಡಿಗಳ ಎತ್ತರದಲ್ಲಿರುವ ಕಾಡಿನ ಪ್ರದೇಶ ಅಂತರ್ಭಾಗದಲ್ಲಿ ನೆಲೆಸಿದೆ. ಇಲ್ಲಿ ಎರಡು ಘಾಟ್ ರಸ್ತೆಗಳು, ಎರಡು ಪ್ರಧಾನ ಮೆಟ್ಟಿಲುಗಳ ದಾರಿಗಳನ್ನು ಹೊಂದಿರುವ ತಿರುಮಲೆಯಲ್ಲಿ ಅನೇಕ ವಿಶೇಷಗಳನ್ನು ನಾವು ನೋಡಬಹುದು. ಅವುಗಳು ಈ ಕೆಳಕಂಡಂತಿವೆ.

## 1. ನಾರಾಯಣಗಿರಿಯಲ್ಲಿ ಇರುವ ಸ್ವಾಮಿಯ ಪಾದಗಳು


ಸ್ವಾಮಿಯ ಪಾದಗಳು

ಶ್ರೀಮನ್ನಾರಾಯಣನು ವೈಕುಂಠದಿಂದ ಈ ಭೂಲೋಕಕ್ಕೆ ಬಂದಾಗ ಮೊಟ್ಟಮೊದಲು ತನ್ನ ಪಾದಗಳನ್ನು ಇರಿಸಿದ ಪ್ರದೇಶವೇ ಈ ನಾರಾಯಣಗಿರಿ. ಈ ಘಟನೆಯ ನೆನಪಾಗಿ ಶ್ರೀಸ್ವಾಮಿಯ ಪಾದದ್ವಯಗಳು ಇಲ್ಲಿ ಏರ್ಪಟ್ಟು ಭಕ್ತರಿಂದ ಸೇವೆಯನ್ನು, ಪೂಜೆಯನ್ನು ಸ್ವೀಕರಿಸುತ್ತಿವೆ. ನಾರಾಯಣ ಗಿರಿ ಎತ್ತರವಾದ ಬೆಟ್ಟವೆಂದು ಪ್ರಸಿದ್ಧಿಯಾಗಿದೆ. ಆಷಾಢ ಶುದ್ಧ ಏಕಾದಶಿಯಂದು ಇಲ್ಲಿ ಛತ್ರ ಸ್ಥಾಪನೋತ್ಸವವು ವೈಭವದಿಂದ ನಡೆಯುತ್ತದೆ. ಈ ಸಂದರ್ಭದಲ್ಲಿ ಶ್ರೀಸ್ವಾಮಿಯ ಪಾದದ್ವಯಗಳ ಮೇಲೆ ಒಂದು ಭೂಚಕ್ರದ ಛತ್ರಿಯನ್ನು ಇರಿಸಿ, ಅರ್ಚಕರು ಪೂಜೆಯನ್ನು ನಿರ್ವಹಿಸುತ್ತಾರೆ. ತಿರುಮಲೆಯ ಬೆಟ್ಟದ ತಪ್ಪಲಿನಲ್ಲಿ ತಿರುಪತಿ ಪಟ್ಟಣವು ನೆಲೆಗೊಂಡಿರುವಂತೆ ನಾರಾಯಣಗಿರಿ ತಪ್ಪಲಿನಲ್ಲಿ ತಿರುಮಲೆಯು ನೆಲೆಸಿದೆ.ಯಾತ್ರಿಕರು ಈ ಸ್ಥಳವನ್ನು ಸಂದರ್ಶಿಸಬೇಕೆಂದರೆ ತಿರುಮಲೆ ಬಸ್ಸ್ಟ್ಯಾಂಡಿನಿಂದ ಬಸ್ಸಿನ ಸೌಲಭ್ಯವೂ ಇದೆ.

## 2. ಶಿಲಾತೋರಣ


ಶಿಲಾತೋರಣ

ತಿರುಮಲೆಯ ಬೆಟ್ಟಗಳಾದ ಶೇಷಾಚಲ ಶ್ರೇಣಿಯ ಪ್ರಾಚೀನತೆಗೆ ದರ್ಪಣ ಹಿಡಿದಂತೆ ಈ ಶಿಲಾತೋರಣ ಒಂದು ಅಪುರೂಪವಾದ ಭೌಗೋಳಿಕ ಚಿಹ್ನೆಯಾಗಿದೆ. ಪುರಾಣದ ಪ್ರಕಾರ ಶ್ರೀವೇಂಕ ಟೇಶ್ವರನು ಭೂಮಿಯ ಮೇಲೆ ಬಂದಾಗ ಮೊದಲು ತನ್ನ ಪಾದವನ್ನು ನಾರಾಯಣಗಿರಿ ಶಿಖರದ ಮೇಲೆ ಇರಿಸಿದರೆ, ತನ್ನ ಎರಡನೆಯ ಪಾದವನ್ನು ಶಿಲಾತೋರಣದ ಬಳಿ ಇರಿಸಿದನೆಂದು ಪ್ರತೀತಿ. ಈ ತೋರಣವನ್ನೇ ದ್ವಾರವೆಂದು ಭಾವಿಸಿ, ಶ್ರೀ ಸ್ವಾಮಿಯು ಇಲ್ಲಿಂದ ಹೊರಟು ಈಗಿನ ತಿರುಮಲೆಯ ದೇವಾಲಯ ಇರುವ ಪ್ರದೇಶವನ್ನು ಸೇರಿದನೆಂದು ಇತಿಹಾಸವು ತಿಳಿಸುತ್ತಿದೆ. ಸುಮಾರು 10 ಅಡಿಗಳ ಎತ್ತರ, 25 ಅಡಿಗಳ ಅಗಲ ಇರುವ ಈ ಶಿಲೆಯು ಬಹಳ ಅಪುರೂಪವಾದುದು ಮತ್ತು ಅದ್ಭುತವೂ ಆಗಿದೆ. ಕೆಲವು ಕೋಟಿ ವರ್ಷಗಳ ಹಿಂದೆ ಈ ಪ್ರಾಂತ್ಯವೆಲ್ಲಾ ಸಮುದ್ರದಿಂದ ಮುಚ್ಚಲ್ಪಟ್ಟಿತ್ತಂತೆ. ಭೂಪರಿಣಾಮ ಕ್ರಮದಲ್ಲಿನ ಅಂಗವಾಗಿ ಹಲವು ಬದಲಾವಣೆಗಳಿಗೆ ಒಳಗಾಗಿ,ಸಮುದ್ರವು ದಕ್ಷಿಣ ದಿಕ್ಕಿಗೆ ಚಲಿಸಿತಂತೆ. ಈ ಹಿನ್ನೆಲೆಯಲ್ಲಿ ಏರ್ಪಟ್ಟ ಒಂದು ಭೌಗೋಳಿಕ ಸ್ವರೂಪವೇ ಈ ಶಿಲಾತೋರಣ.

## 3. ಚಕ್ರತೀರ್ಥ

ತಿರುಮಲೆಯು ಪುಣ್ಯ ತೀರ್ಥಗಳ ನಿಲಯವಾದ್ದರಿಂದ ಇದಕ್ಕೆ **'ತೀರ್ಥಾದ್ರಿ'** ಎಂಬ ಮತ್ತೊಂದು ಹೆಸರೂ ಇದೆ. 108 ತೀರ್ಥಗಳನ್ನು ಪುರಾಣಗಳು ಹೆಸರಿಸುತ್ತಿವೆ.ಇವುಗಳಲ್ಲಿ ಇಂದಿಗೂ ಶ್ರೀ ಸ್ವಾಮಿಯ ಚಕ್ರಾಯುಧದ ಹೆಸರಿನಲ್ಲಿ ನೆಲೆಸಿರುವ ತೀರ್ಥರಾಜ ಈ ಚಕ್ರತೀರ್ಥ! ಇದು ತಿರುಮಲೆಯ ಆಲಯದ ವಾಯುವ್ಯ ದಿಕ್ಕಿನಲ್ಲಿ 3 ಕಿ.ಮೀ. ದೂರದಲ್ಲಿ ಶಿಲಾತೋರಣದ ಸಮೀಪದಲ್ಲಿ ಒಂದು ಪ್ರಪಾತದಲ್ಲಿ ಕಂಡು ಬರುವ ಅಪುರೂಪವಾದ ತೀರ್ಥ. ಪುರಾಣದ ಪ್ರಕಾರ ಒಮ್ಮೆ ಪದ್ಮನಾಭನೆಂಬ ವಿಪ್ರನನ್ನು ಒಬ್ಬ ರಾಕ್ಷಸನು ನುಂಗಲು ಧಾವಿಸಿದಾಗ ಪದ್ಮನಾಭನು ವೇಂಕಟೇಶ್ವರನನ್ನು ಮೊರೆ ಹೊಕ್ಕನಂತೆ. ಆಗ ಹರಿಯು ತನ್ನ ಭಕ್ತನನ್ನು ರಕ್ಷಿಸುವುದಕ್ಕಾಗಿ ಆ ರಾಕ್ಷಸನ ಮೇಲೆ ತನ್ನ ಚಕ್ರವನ್ನು ಪ್ರಯೋಗಿಸಿ ಅವನನ್ನು ಸಂಹರಿಸಿದನಂತೆ. ಈ ಘಟನೆಯ ಪ್ರತೀಕವಾಗಿ ಸುದರ್ಶನ ಚಕ್ರತ್ತಾಳ್ವಾರ್ ಇಲ್ಲಿ ಒಂದು ಬಂಡೆಯಲ್ಲಿ ನೆಲೆಸಿದ್ದಾನೆ. ಇಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿಯೂ ದರ್ಶನವನ್ನು ನೀಡುತ್ತಿದ್ದಾರೆ. ವೃಶ್ಚಿಕಮಾಸದ ಶುದ್ಧ ದ್ವಾದಶಿಯಂದು ಇಲ್ಲಿಗೆ ಶ್ರೀವೇಂಕಟೇಶ್ವರ ಸ್ವಾಮಿಯು ಮೆರವಣಿಗೆಯಲ್ಲಿ ಬರುತ್ತಾರೆ.


ಚಕ್ರತೀರ್ಥ

## 4. ಶ್ರೀ ಅಭಯಾಂಜನೇಯಸ್ವಾಮಿ ಮಂದಿರ



ಶ್ರೀ ಅಭಯಾಂಜನೇಯಸ್ವಾಮಿ

ಎಷ್ಟೋ ಸಮಯದಿಂದ ಇಲ್ಲಿ ಮೂಲವಿಗ್ರಹವು ಇದ್ದರೂ ಇತ್ತೀಚೆಗೆ ಕೆಲವು ಸ್ಥಾನಿಕ ಭಕ್ತರ ಸಹಾಯದಿಂದ ನಿರ್ಮಾಣಗೊಂಡಿರುವುದೇ ಈ ಅಭಯಾಂಜನೇಯ ಸ್ವಾಮಿಯ ಮಂದಿರ. ತಿರುಮಲೆಯ ದೇವಸ್ಥಾನದಿಂದ ವಾಯುವ್ಯ ದಿಕ್ಕಿನಲ್ಲಿ ಅತ್ಯಂತ ಸುಂದರವಾದ ಪ್ರಕೃತಿಯ ನಡುವೆ,ವೇದಪಾಠಶಾಲೆಗೆ ಹೋಗುವ ಮಾರ್ಗದಲ್ಲಿ ಈ ಮಹಿಮಾನ್ವಿತವಾದ ದೇವಾಲಯವು ನೆಲೆಸಿದೆ. ಹಿಂದೆ ತಿರುಮಲೆಯ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಬರುವಾಗ ಮದನಪಲ್ಲಿ ಮಾರ್ಗದಲ್ಲಿ ಇರುವ ಭಾಕರಾಪೇಟ್ ನಲ್ಲಿ ಘಾಟ್ ರಸ್ತೆ ಇದೆ. ಅಲ್ಲಿಂದ ಬರುವ ಯಾತ್ರಿಕರು ಮೊದಲು ಭಾಕರಾಪೇಟೆಯ ಹತ್ತಿರದಲ್ಲಿ ಇರುವ ಬಾಲವೇಂಕಟೇಶ್ವರ ಸ್ವಾಮಿಯನ್ನು ದರ್ಶಿಸಿ, ರಾತ್ರಿ ಅಲ್ಲೇ ನಿದ್ರಿಸಿ, ಬೆಳಗಿನ ಝಾವ ಎದ್ದು ಸ್ವಾಮಿ ಕೋನ ಎಂಬ ಕಾಡಿನ ಮುಖಾಂತರ **'ಹುಲಿಬೋನು, ಟೇಂ ಕಾಯನೆಟ್ಟು'** ಗ್ರಾಮಗಳ ಮೂಲಕ ತಿರುಮಲೆಯನ್ನು ತಲುಪುತ್ತಿದ್ದರು. ಈ ಕ್ರಮದಲ್ಲಿ ವಿಜಯನಗರ ರಾಜರ ಕಾಲದಲ್ಲಿ ಸ್ಥಾಪನೆಗೊಂಡ ಶಿಲಾಮಂಟಪವು ಕಂಡು ಬರುತ್ತದೆ. ಈ ಮಂಟಪದ ನೆರಳಿನಲ್ಲಿ ಆಂಜನೇಯಸ್ವಾಮಿ ಈಗ ಶ್ರೀಅಭಯಾಂಜನೇಯ ಸ್ವಾಮಿಯಾಗಿ ಪೂಜೆಗಳನ್ನು ಸ್ವೀಕರಿಸುತ್ತಿದ್ದಾನೆ. ಆದರೆ ಹಿಂದಿನ ಕಾಲದಲ್ಲಿ ಇದ್ದ ದಾರಿ ಈಗ ಕಂಡು ಬರುವುದಿಲ್ಲ. ಈ ಗುಡಿಯ ದಾರಿಯಲ್ಲಿ ಇರುವ ತಿರುಮಲೆಗೆ ಓವರ್ ಹೆಡ್‌ಟ್ಯಾಂಕ್ ನಂತಹ **"ಮೂರ್ತಿ ನಾಯನಿಕೆರೆಯೂ"** ದರ್ಶನೀಯ ಸ್ಥಳಗಳಲ್ಲಿ ಒಂದೆಂದು ಹೇಳಬಹುದು.

## 5, ನಾಗಲಬಾವಿ

ಸ್ಥಾನಿಕರ **'ನಾಗಲಬಾವಿ'** ಎಂದು ಕರೆಯುತ್ತಿರುವ ಈ ಪ್ರದೇಶದ ಹೆಸರು **'ನಾಗತೀರ್ಥ'**ಇಲ್ಲಿ ಒಂದು ದೊಡ್ಡ ಕಲ್ಲಿನ ಬಂಡೆಯಲ್ಲಿ ವಿಶೇಷ ರೀತಿಯಲ್ಲಿ ನಾಗ ಶಿಲ್ಪಗಳು ಕೆತ್ತಲ್ಪಟ್ಟಿವೆ. ಇಲ್ಲೇ ಇರುವ ಒಂದು ಪುಷ್ಕರಿಣಿಯು ನೋಡಲು ಮನೋಹರವಾಗಿದೆ. ಶೇಷಾಚಲ ಎಂಬ ಹೆಸರು ಬರುವುದಕ್ಕೆ ಕಾರಣವಾದ ಆದಿಶೇಷನ ರೂಪವು ಸರ್ಪಕ್ಕೆ ಪ್ರತೀಕವಾಗಿದೆ. ನಾಗರ ಚವಿತಿಯಂದು ಇಲ್ಲಿ ವಿಶೇಷವಾದ ಪೂಜೆ ನಡೆಯುತ್ತದೆ. ತಿರುಮಲೆಯ ಗುಡಿ ಬಳಿ ಇರುವ ವರಾಹಸ್ವಾಮಿಯ ಅತಿಥಿ ಗೃಹಗಳ ಮೂಲಕ ಹಾದು ಹೋಗಿ ರಸ್ತೆಯನ್ನು ದಾಟಿ **"ಬಾಟ ಗಂಗಮ್ಮ ಗುಡಿ"** ಯನ್ನು ತಲುಪಿ ಅಲ್ಲಿಂದ ಸ್ವಲ್ಪ ಮುಂದೆ ಹೋಗಿ ಎಡಭಾಗಕ್ಕೆ ತಿರುಗಿದರೆ ನಾಗತೀರ್ಥವನ್ನು ತಲುಪಬಹುದು.



ನಾಗಲಬಾವಿ

## 6. ನಕ್ಷತ್ರವನ



ನಕ್ಷತ್ರ ವನ

ಜಾತಕರೀತ್ಯಾ 27 ನಕ್ಷತ್ರಗಳಿವೆ. ಒಂದೊಂದು ದೈವೀಕ ವೃಕ್ಷವು ಪ್ರತೀಕವಾಗಿವೆ. ಅಂತಹಾ 27 ನಕ್ಷತ್ರಗಳಿಗೂ ಅನ್ವಯವಾಗುವಂತೆ 27 ವೃಕ್ಷಗಳನ್ನು ನಕ್ಷತ್ರದ ಆಕೃತಿಯಲ್ಲಿ ನಿರ್ಮಾಣ ಮಾಡಿರುವಂತಹಾ ಪ್ರದೇಶವೇ ಈ ನಕ್ಷತ್ರವನ. ತಿ.ತಿ.ದೇ., ಅವರ ವನ್ಯ ಪ್ರದೇಶದ ಇಲಾಖೆಯು ಈ ನಕ್ಷತ್ರ ವನವನ್ನು ನಿರ್ಮಾಣ ಮಾಡಿದೆ. ತಿರುಮಲೆಯ ಪಾಪವಿನಾಶನದ ಮಾರ್ಗದಲ್ಲಿ ಪಾರುವೇಟ ಮಂಟಪದ ಬಳಿ ಈ ವನವು ಇದೆ. ಸಂಕ್ರಾಂತಿಯ ಸಂದರ್ಭದಲ್ಲಿ ಶ್ರೀಮಲೆಯಪ್ಪ ಸ್ವಾಮಿಯು ವಿನೋದಕ್ಕಾಗಿ ಬೇಟೆಯಾಡುವುದಕ್ಕೆ ನಿರ್ಮಿಸಿದ ಮಂಪದ ಸಮುದಾಯವೇ ಈ ಪಾರುವೇಟ ಮಂಟಪ. ಇತ್ತೀಚೆಗೆ ಈ ಮಂಟಪವನ್ನು ಪುನರ್ನಿರ್ಮಾಣ ಮಾಡಿದ್ದಾರೆ.ಆಹ್ಲಾದಕರವಾದ ಪ್ರಕೃತಿಯ ಮಡಿಲಿನಲ್ಲಿ ನೇತ್ರಾನಂದಕರವಾದ ನಕ್ಷತ್ರವನದೊಂದಿಗೆ ಪಾರುವೇಟ ಮಂಟಪವನ್ನೂ ದರ್ಶಿಸಬಹುದು.

## 7. ಕಾಲ್ ತೇರು

**"ಕಲ್"** ಅಂದರೆ ತಮಿಳಿನಲ್ಲಿ ಕಲ್ಲು ಎಂದರ್ಥ! ತೇರು ಅಂದ್ರೆ ರಥ! ಅಂದರೆ **"ಕಲ್ಲಿನ ರಥ"** ಎಂದರ್ಥ ಶ್ರೀ ಸ್ವಾಮಿಗೆ ಭೋಗತೇರು ಎಂದು ಕರೆಯಲ್ಪಡುವ ಚಿಕ್ಕ ಬ್ರಹ್ಮರಥ, ಮರದ ದೊಡ್ಡ ರಥಗಳ ಬಗೆಗೆ ತಿಳಿದೇ ಇದೆ. ಅನೇಕರಿಗೆ ಈ ಕಲ್ಲಿನ ರಥದ ಬಗೆಗೆ ತಿಳಿದಿಲ್ಲ. ತಿರುಮಲೆ ಟಿ.ಬಿ. ಗಾರ್ಡನ್ಸ್‌ನಲ್ಲಿ ಶ್ರೀವಾರಿಮೆಟ್ಟು ನಡಿಗೆಯ ದಾರಿಯ ಮೂಲಕ ತಿರುಮಲೆಯನ್ನು ಪ್ರವೇಶಿಸುವವರಿಗೆ ಎದುರಿನಲ್ಲಿ ಕಂಡು ಬರುವ ದೃಢವಾದ ನಿರ್ಮಾಣವೇ ಕಲ್ಲಿನ ರಥ. ಈ ನಯನಮನೋಹರವಾದ ಶಿಲ್ಪ ಶೋಭಿತವಾದ ಮಂಟಪವು ದೊಡ್ಡ ದೊಡ್ಡ ಕಲ್ಲಿನ ಚಕ್ರಗಳನ್ನು ಹೊಂದಿದ್ದು ತಿರುಮಲೆಗೆ ಉತ್ತರ, ಪೂರ್ವ ಸನ್ನಿಧಿ ಬೀದಿಗಳ ಸಂಗಮ ಸ್ಥಳದಲ್ಲಿ ಗಂಭೀರವಾಗಿ ನಿಂತಿದೆ. ಭಕ್ತರ ಸೌಕರ್ಯಾರ್ಥವಾಗಿ ಸನ್ನಿಧಿ ಬೀದಿಗಳನ್ನು ಅಗಲ ಗೊಳಿಸುವ ನಿಟ್ಟಿನಲ್ಲಿ ತಿ.ತಿ.ದೇ., ಈ ಕಲ್ಲಿನ ರಥವನ್ನು ಅಲ್ಲಿಂದ ಬೇರೆ ಕಡೆಗೆ



ಕಾಲ್‌ತೇರು

ವರ್ಗಾಯಿಸಿದೆ. ಆದರೆ ಅದರ ಭಾರೀ ಚಕ್ರಗಳು ಮಾತ್ರಾ ಭೂಮಿಯಲ್ಲೇ ಹೂತು ಹೋಗಿ ಮೇಲೆತ್ತುವುದಕ್ಕೆ ಅಸಾಧ್ಯವಾಗಿದೆ. ವಿಜಯನಗರದ ಚಕ್ರವರ್ತಿಯಾದ ಶ್ರೀಕೃಷ್ಣದೇವರಾಯ, ಅಚ್ಯುತ ದೇವರಾಯರ ಅಂತರಂಗಿಕ ಅಧಿಕಾರಿಯಾಗಿದ್ದ ಎಲ್ಲಪ್ಪನಾಯಕರ್ ಇದನ್ನು ಕ್ರಿ.ಶ.1527ರಲ್ಲಿ ತಿರುಮಲೆಯಲ್ಲಿ ನೆಲೆಗೊಳಿಸಿದ್ದಾರೆ.


ಕ್ಷೇತ್ರಪಾಲಕ ಗುಂಡು

## 8.ಕ್ಷೇತ್ರಪಾಲಕ ಗುಂಡು (ಬಂಡೆಗಲ್ಲು)

ತಿರುಮಲೆಯ ಕ್ಷೇತ್ರಪಾಲಕ ರುದ್ರ ದೇವ. ಹಿಂದೆ ಶ್ರೀಹರಿಯ ಆಲಯದಲ್ಲಿ ಕ್ಷೇತ್ರಪಾಲಕನ ಹೆಸರಿನಲ್ಲಿ ಒಂದು ದೊಡ್ಡ ಕಲ್ಲು ಇತ್ತು. ರಾತ್ರಿಯ ವೇಳೆಯಲ್ಲಿ ಆ ಶಿಲೆಯ ಗುಂಡಗೆ ತಿರುಗುತ್ತಾ ತಿರುಮಲೆಯನ್ನು ಕಾವಲು ಕಾಯುತ್ತಿತ್ತಂತೆ. ಒಂದು ದಿನ ಆಕಸ್ಮಿಕವಾಗಿ ಒಬ್ಬ ಬಾಲಕ ಆ ಬಂಡೆ ಉರುಳುವಾಗ ಅದಕ್ಕೆ ಸಿಕ್ಕಿ ಕೊಂಡು ಮರಣಿಸಿದನಂತೆ. ಇದರಿಂದ ಆ ಬಂಡೇಗಲ್ಲನ್ನು ಗುಡಿಗೆ ದೂರದಲ್ಲಿ ಗೋಗರ್ಭ ತೀರ್ಥದ ಬಳಿಗೆ ಬದಲಾಯಿಸಿದರಂತೆ, ಶಿವರಾತ್ರಿಯ ದಿನ ಈ ಕ್ಷೇತ್ರಪಾಲಕ ಬಂಡೆಗಲ್ಲಿಗೆ ಅರ್ಚನೆ, ಅಭಿಷೇಕ ಎಲ್ಲವೂ ವೈಭವದಿಂದ ನಡೆಯುತ್ತದೆ. ತಿರುಮಲೆಯ ಗುಡಿಗೆ ಈಶಾನ್ಯ ದಿಕ್ಕಿನಲ್ಲಿ ಗೋಗರ್ಭ ತೀರ್ಥ ಮತ್ತು ಪಾಂಡವ ತೀರ್ಥಗಳೂ ದರ್ಶನೀಯ ಸ್ಥಳಗಳೇ!

## 9.ಹಾತೀರಾಂಜೀ ಮಠ

ಶ್ರೀನಿವಾಸನ ದೇವಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಸ್ವಲ್ಪ ಎತ್ತರವಾದ ಪ್ರದೇಶದಲ್ಲಿ ಇರುವ ರಾಜಭವನದಂತಹಾ ಕಟ್ಟಡವೇ ಹಾತೀರಾಂಜೀ ಮಠ. ಈ ಮಠದ ಮೂಲಪುರುಷ ಹಾತೀರಾಂಜೀ ಬಾವಾಜಿ. ಆತ ಸ್ವಾಮಿಯ ಪರಮಾಪ್ತಭಕ್ತ. ಆತ ಸ್ವಾಮಿಯೊಂದಿಗೆ ಸ್ವತಹಾ ಪಗಡೆಯಾಟ ಆಡಿದನೆಂದು ಪ್ರತೀತಿ. ಬ್ರಿಟೀಷರು ತಿರುಮಲೆ ತಿರುಪತಿ ಇತರ ಅನುಬಂಧ ಆಲಯಗಳ ಪಾಲನೆಯ ಜವಾಬ್ದಾರಿಯನ್ನು ಹಾತೀರಾಂಜೀಮಠದ ಮಹಂತರಿಗೆ ಒಪ್ಪಿಸಿದರು.ತಿ.ತಿ.ದೇವಸ್ಥಾನಗಳ ವಿಚಾರಣಾ ಕರ್ತರಾಗಿ ಮಠದ ಮಹಂತರು 1933 ವರ್ಷದವರೆಗೂ ಕೆಲಸ ಮಾಡಿದರು. ಅವರ ಕಾಲದಲ್ಲಿ ಭಕ್ತರ ಅನುಕೂಲಕ್ಕಾಗಿ ಅನೇಕ ಯೋಜನೆಗಳು, ಸೇವೆಗಳು ದೇವಾಲಯದಲ್ಲಿ ಪ್ರಾರಂಭಿಸಿದರು. ನಿರ್ಮಾಣದಲ್ಲಿ ಬಹಳ ಕಲಾವಂತಿಕೆಯಿಂದ ಕೂಡಿರುವ ಈ ಮಠದಲ್ಲಿ ಮಹಂತರ ಆಸನ, ಶ್ರೀಸ್ವಾಮಿಯು ಹಾತೀರಾಂಜೀ ಬಾವಾಜಿ ಇಬ್ಬರೂ ಪಗಡೆಯಾಟ ಆಡಿದ ಪ್ರದೇಶ. ಕೃಷ್ಣಾಲಯ, ದಶಾವತಾರಗಳು, ಹನುಮಂತನ ವಿಗ್ರಹಾಕೃತಿ ದರ್ಶನೀಯ ಸ್ಥಳಗಳು.


ಹಾತೀರಾಂಜೀ ಮಠ

## 10. ಅನಂತಾಳ್ವಾನ್ ಹೂದೋಟ

ತಿರುಮಲೆಯ ದೇವಾಲಯಕ್ಕೆ ನೈರುತ್ಯ ದಿಕ್ಕಿನಲ್ಲಿರುವ ನೋಡಲೇ ಬೇಕಾದಂತಹಾ ಉದ್ಯಾನವನವೇ ಅನಂತಾಳ್ವಾನ್ ಹೂದೋಟ. ಇದು ಒಬ್ಬ ಮಹಾಭಕ್ತನ ಕತೆಗೆ ಸಂಕೇತವಾಗಿ ನಿಂತಿದೆ. ವೈಷ್ಣವ ವಾಙ್ಞಯ ಪರಿಭಾಷೆಯಲ್ಲಿ ಹೇಳಬೇಕೆಂದರೆ ಶ್ರೀರಂಗಂ, ವಿಷ್ಣು ಕಂಚಿಯು ಭೋಗ, ತ್ಯಾಗ ಮಂಟಪಗಳಾದರೆ ತಿರುಮಲೆಯ ಪುಷ್ಪಮಂಟಪ. ತಿರುಮಲೆಯಲ್ಲಿ ಪುಷ್ಪ ಸೇವೆಯನ್ನು ಪ್ರಾರಂಭಿಸಿದ್ದು ತಿರುಮಲೆ ನಂಬಿಯಾದರೆ, ಆ ಸೇವೆಯನ್ನು ಮುಂದುವರೆಸಿದ ಮತ್ತೊಬ್ಬ ಮಹಾನುಭಾವ ಅನಂತಾಳ್ವಾನ್. ಶ್ರೀನಿವಾಸನ ಬ್ರಹ್ಮೋತ್ಸವದ ಕೊನೆಯ ದಿನ ಧ್ವಜಾವರೋಹಣದ ನಂತರ ಬಾಗ್ ಸವಾರಿ ಉತ್ಸವ ಬಹಳ ವೈಭವದಿಂದ ನಡೆಯುತ್ತದೆ. ಬಾಗ್ ಎಂದರೆ ತೋಟ ಎಂದರ್ಥ.ಶ್ರೀದೇವಿ ಭೂದೇವಿ ಸಮೇತನಾದ ಮಲೆಯಪ್ಪಸ್ವಾಮಿ **"ಪುರಿ ಶೈವಾರಿ ತೋಟ"** ಎಂದು ಕರೆಯಲ್ಪಡುವ ಅನಂತಾಳ್ವಾನ್ ತೋಟಕ್ಕೆ ಮೆರವಣಿಗೆಯಲ್ಲಿ ಬರುತ್ತಾರೆ. ಅನಂತಾಳ್ವಾನ್ ಬೃಂದಾವನದಲ್ಲಿ ನೆಲೆಸಿರುವ ಬಕುಲ ವೃಕ್ಷಕ್ಕೆ ಪೂಜೆ ಮಾಡುತ್ತಾರೆ. ಅನಂತಾಳ್ವಾನ್ ಕೆರೆಯನ್ನು ತೋಡುತ್ತಿರಬೇಕಾದರೆ ಒಬ್ಬ ಬಾಲಕನ ರೂಪದಲ್ಲಿ ಸ್ವಾಮಿಯು ಅವನ ಸಹಾಯಕ್ಕೆ ಬಂದ. ಆಗ ಅನಂತಾಳ್ವಾನ್ ಅವನ ಸಹಾಯವನ್ನು ತಿರಸ್ಕರಿಸಿ ಕಳುಹಿಸಿದ. ಆದರೂ ಮತ್ತೆ ಮತ್ತೆ ಸಹಾಯಕ್ಕೆ ಬಂದಾಗ ಕೋಪದಿಂದ ತನ್ನ ಕೈಯಲ್ಲಿದ್ದ ಗಡ ಪಾರಿಯನ್ನು ಆ ಬಾಲಕನತ್ತ ಎಸೆದಾಗ ಅದು ಆ ಬಾಲಕನ ಗಡ್ಡವನ್ನು ಗಾಯ ಗೊಳಿಸಿತು. ಆ ಬಾಲಕನಿಗೆ ಗಲ್ಲದಿಂದ ರಕ್ತಕಾರುತ್ತಿರುವಾಗ ಅವನು ಅಪ್ರದಕ್ಷಿಣೆಯಾಗಿ ಓಡುತ್ತಾ ಗರ್ಭಗುಡಿಯೊಳಗೆ ಪ್ರವೇಶಿಸಿ ಮಾಯವಾದ. ಹೀಗೆ ಅಪ್ರದಕ್ಷಿಣೆಯಾಗಿ ಆಲಯವನ್ನು ಪ್ರವೇಶಿಸಿದ ಸಂದರ್ಭವನ್ನು ನೆನಪಿಸುತ್ತಾ ಅದೇ ರೀತಿಯಲ್ಲಿ ಬಾಗ್‌ಸವಾರಿ ಉತ್ಸವವನ್ನು ನೆರವೇರಿಸುವುದು ಇಲ್ಲಿನ ವಿಶೇಷವಾಗಿದೆ. ಭಕ್ತಿ ವಿಶ್ವಾಸಗಳು ಮತ್ತು ತಿಳಿದುಕೊಳ್ಳಬೇಕೆಂಬ ಆಸೆ ಇದ್ದರೆ ತಿರುಮಲೆಯ ಸುತ್ತಮುತ್ತಲು ಅನೇಕ ದರ್ಶನೀಯ ಸ್ಥಳಗಳು ನಮಗೆ ಕಾಣಸಿಗುತ್ತದೆ. ಇನ್ನೂ ಶಂಖತೀರ್ಥ, ತರಿಗೊಂಡವೆಂಗಮಾಂಬ ಬೃಂದಾವನ, ಜಪಾಲಿತೀರ್ಥ, ಆಕಾಶಗಂಗೆ, ಪಾಪವಿನಾಶನ ತೀರ್ಥ, ಡ್ಯಾಮುಗಳು ಶಿಲಾತೋರಣದ ಬಳಿ ಇರುವ ರಾಕ್‌ಗಾರ್ಡನ್, ಇನ್ನಿತರ ಪ್ರದೇಶಗಳು ಪುರಾಣಗಳು ಇತಿಹಾಸಗಳು, ಸ್ವಾಮಿಯಲೀಲೆಗಳು, ಮಹಾತ್ಮೆಗಳು, ಜಾನಪದ ಕಥೆಗಳು, ಸ್ಥಾನಿಕರ ಕತೆಗಳಲ್ಲಿ ಮೇಳೈಸಿ ಭಕ್ತಜನರನ್ನು ಆಕರ್ಷಿಸುತ್ತಿವೆ. ಭಕ್ತರು ಸಾಗ ರೋಪಾದಿಯಲ್ಲಿ ಬಂದು ಶ್ರೀವೇಂಕಟೇಶ್ವರನನ್ನು ದರ್ಶಿಸುತ್ತಿರುತ್ತಾರೆ. ಜೊತೆಗೆ ಪುರಾಣೇತಿಹಾಸವನ್ನು ಒಳಗೊಂಡಿರುವ ಈ ಪುಣ್ಯಸ್ಥಳಗಳನ್ನು ದರ್ಶಿಸಿ ಜೀವನವನ್ನು ಧನ್ಯವಾಗಿಸಿ ಕೊಂಡು ಶ್ರೀನಿವಾಸನ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕೆಂಬುದೇ ನಮ್ಮ ಉದ್ದೇಶ.


ಅನಂತಾಳ್ವಾನ್ ಹೂದೋಟ

ಓಂ ನಮೋ ವೆಂಕಟೇಶಾಯ!!!



16-07-2025 ರಂದು ಸ್ವಾಮಿಯವರ ಆಣಿವಾರ ಆಸ್ಥಾನ ಸಂದರ್ಭವಾಗಿ ಶ್ರೀರಂಗಂ, (ತಮಿಳುನಾಡು) ಶ್ರೀರಂಗನಾಥ ಸ್ವಾಮಿ ಆಲಯದ ವತಿಯಿಂದ ಸ್ವಾಮಿಯವರಿಗೆ ರೇಷ್ಮೆವಸ್ತ್ರಗಳನ್ನು ಸಮರ್ಪಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಶ್ರೀ ಜೀಯರ್‌ಗಳು, ತಿ.ತಿ.ದೇ., ಅಧ್ಯಕ್ಷರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ, ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಆಡಳಿತ ಮಂಡಳಿಯ ಸದಸ್ಯರು ಪಾಲ್ಗೊಂಡರು.




21-07-2025 ರಂದು ಮೈಸೂರು ಮಹಾರಾಜ ಜಯಂತಿ ಸಂದರ್ಭವಾಗಿ ತಿ.ತಿ.ದೇ., ಪಲ್ಲವೋತ್ಸವವನ್ನು ವೈಭವವಾಗಿ ನಿರ್ವಹಿಸಿತು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ಕರ್ನಾಟಕ ರಾಜ್ಯದ ಪ್ರತಿನಿಧಿಗಳು, ಮೈಸೂರು ಸಂಸ್ಥಾನದ ಪ್ರತಿನಿಧಿಗಳು ಇತರ ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಪಾಲ್ಗೊಂಡರು.



28-07-2025 ರಂದು ಭಾರತದ ಮಾಜಿ ಉಪರಾಷ್ಟ್ರಪತಿ ಶ್ರೀ ಎಂ. ವೆಂಕಯ್ಯನಾಯುಡು ರವರು ಸ್ವಾಮಿಯವರ ದರ್ಶನವನ್ನು ಪಡೆದರು. ದರ್ಶನಾನಂತರ ಇವರಿಗೆ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ರವರು ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡಿದರು. ತಿ.ತಿ.ದೇ., ಆಡಳಿತ ಮಂಡಳಿಯ ಸದಸ್ಯರು ಶ್ರೀ ಜಿ. ಭಾನುಪ್ರಕಾಶ್ ರೆಡ್ಡಿ ಪಾಲ್ಗೊಂಡರು.



ತಿರುಮಲೆಯಲ್ಲಿರುವ ತಿ.ತಿ.ದೇ., ಅನ್ನಮಯ್ಯ ಭವನದ ಎದುರುಗಡೆ ನೂತನ ಶ್ರೀವಾಣಿ ದರ್ಶನ ಟಿಕೆಟ್ಟುಗಳನ್ನು ನೀಡುವ ಕೇಂದ್ರವನ್ನು ಪ್ರಾರಂಭಿಸಿತು. ಈ ಕಾರ್ಯಕ್ರಮವನ್ನು ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯುಡು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲ ರಾವ್ ಐ.ಎ.ಎಸ್., ರವರು ಪ್ರಾರಂಭಿಸಿದರು.






28-07-2025 ರಂದು ತಿ.ತಿ.ದೇ., ಹಿಂದೂ ಧರ್ಮ ಪ್ರಚಾರ ಪರಿಷತ್ ಸಂಯುಕ್ತವಾಗಿ ಸದ್ಗಮಯ ಶಿಕ್ಷಣ ಕಾರ್ಯಕ್ರಮವನ್ನು ನಿರ್ವಹಿಸಿತು. ಈ ಕಾರ್ಯಕ್ರಮದಲ್ಲಿ ಡಿ.ಪಿ.ಪಿ. ಕಾರ್ಯದರ್ಶಿ ಶ್ರೀ ಶ್ರೀರಾಮ ರಘುನಾಥ್, ತಿ.ತಿ.ದೇ., ವಿದ್ಯಾಶಾಖಾಧಿಕಾರಿ ಶ್ರೀ ವೆಂಕಟ ಸುನಿಲ್ ಇತರ ಅಧಿಕಾರಿಗಳು ಪಾಲ್ಗೊಂಡರು.

# ದೇವ - ಪಿತೃಗಳಿಗೆ ಭಕ್ತಿ ಸಮರ್ಪಿಸುವ ಭದ್ರ ಮಾಸ - ಭಾದ್ರಪದ

- ಶ್ರೀಮತಿ. ವಾರುಣಿ ಹೊನ್ನಾಳಿ
99160 22982

ಹಿಂದೂ ಚಾಂದ್ರಮಾನ 12 ತಿಂಗಳುಗಳಲ್ಲಿ ಭಾದ್ರಪದ 6 ನೇ ಮಾಸ. ಹುಣ್ಣಿಮೆಯಂದು ಪೂರ್ವಾಭಾದ್ರಪದ ಅಥವಾ ಉತ್ತರಾ ಭಾದ್ರಪದ ನಕ್ಷತ್ರ ಬರುವುದರಿಂದ ಈ ಮಾಸಕ್ಕೆ ಭಾದ್ರಪದ ಎಂಬ ಹೆಸರು ಭೂಷಣವಾಗಿದೆ. ಸೂರ್ಯನು ಸಿಂಹರಾಶಿಯಲ್ಲಿ ಇರುವಾಗ ಶುಕ್ಲ ಪಾಡ್ಯ ತಿಥಿಯಿಂದ ಈ ಮಾಸ ಪ್ರಾರಂಭವಾಗಿ ಕನ್ಯಾರಾಶಿಯಲ್ಲಿ ಸೂರ್ಯನಿರುವಾಗ (ಅಮಾವಾಸ್ಯೆ) ಅಂತಿಮವಾಗುತ್ತದೆ.

ಇದು ಮುಂಗಾರು ಫಸಲಿಗೆ ಅನುಕೂಲಕರ ಮಾಸ. ನಾಡಹಬ್ಬ-ಆಶ್ವಯುಜಮಾಸಕ್ಕೆ ಭದ್ರವಾದ ನೆಲೆಯನ್ನು ಕಲ್ಪಿಸಿ ದಸರೆಗೆ ಮುನ್ನುಡಿ ಬರೆಯುವ ತಿಂಗಳು ಇದು. ಅನಂತ ಹುಣ್ಣಿಮೆ ದಿನ ಬಹುತೇಕ ಸನ್ಯಾಸಿಗಳ ಚಾತುರ್ಮಾಸ್ಯ ವ್ರತ ದೀಕ್ಷಾ ಸಮಾಪ್ತಿಯಾಗಿ ಸೀಮೋಲ್ಲಂಘನವನ್ನೂ ಮಾಡುತ್ತಾರೆ. ಭಾದ್ರಪದ ಮಾಸಾಂತ್ಯಕ್ಕೆ ವರ್ಷ ಋತುವೂ ಮುಗಿಯುತ್ತದೆ. ಅಂದ ಹಾಗೆ ಈ ವರ್ಷ ವಿಶ್ವಾವಸು ಸಂವತ್ಸರದಲ್ಲಿ ಆಗಸ್ಟ್ 24 ರಿಂದ ಸೆಪ್ಟೆಂಬರ್ 21 ರವರೆಗೆ ಭಾದ್ರಪದ ಆಚರಣೆ ಇರುತ್ತದೆ. ಮಹಾರಾಷ್ಟ್ರದಲ್ಲಿ ಭದ್ರ, ಬಂಗಾಳಿಯಲ್ಲಿ ಭದ್ರೋ, ನೇಪಾಳಿಯಲ್ಲಿ ಭದ್ರವೋ, ಅಸ್ಸಾಮಿಯಲ್ಲಿ ಭಾದ. ಹಿಂದಿಯಲ್ಲಿ ಭಾಡೋ ಅಥವಾ ಭದ್ರಬಾ, ಕನ್ನಡ ಮತ್ತು ಸಂಸ್ಕೃತದಲ್ಲಿ ಭಾದ್ರಪದ ಮಾಸ ಎಂದೇ ಇದು ಹೆಸರಾಗಿದೆ ಇದಕ್ಕೆ **"ನ ಭಾಸ್ಯ ಭಾದ್ರಪದ"** ಪ್ರೌಷ್ಠಪದ ಎಂಬ ಹೆಸರೂ ಉಂಟು. ವೇದದಲ್ಲಿ ಇಷಃ ಎಂಬ ನಾಮಾಂತರವೂ ಇದೆ. ಆಯಾ ಪ್ರದೇಶದ ಭಾಷಾಶೈಲಿಗೆ ಅನುಗುಣವಾಗಿ ಹೆಸರುಗಳು ಭಿನ್ನ-ಭಿನ್ನವಾದರೂ ಸಂಸ್ಕೃತಿ ಮತ್ತು ಆಚರಣೆಗೆ ಸಂಬಂಧಿಸಿದಂತೆ ದೇಶಾದ್ಯಂತ ಏಕತ್ವ ವನ್ನು ಬಿಂಬಿಸುತ್ತದೆ ಈ ಮಾಸ.

### ವಿಶೇಷತೆ ಏನು?

ಭಾದ್ರಪದಮಾಸಕ್ಕೆ ನಿಯಾಮಕ-ಹೃಷಿಕೇಶರೂಪಿ ಪರಮಾತ್ಮ. ಈತ 4 ಮುಖ, 8 ಭುಜ ಹೊಂದಿದ್ದು, ಶ್ರೇಷ್ಠ ಹಂಸಾರೂಢನಾಗಿ ಶ್ವೇತ ವರ್ಣದಿಂದ ಕೂಡಿದ ಸ್ವರೂಪವುಳ್ಳವನಾಗಿರುತ್ತಾನೆ ಎಂದು ಶ್ರೀತತ್ವ ನಿಧಿ ಗ್ರಂಥ ವರ್ಣಿಸಿದೆ. ಮಾಸದ ಅಭಿಮಾನಿ ದೇವತೆ ಹೃಷಿಕೇಶನ ಪ್ರೀತ್ಯರ್ಥವಾಗಿ ಬೆಲ್ಲದ ಅನ್ನ, ಪಾಯಸ, ಕನ್ನಡಿ ದಾನ ಮಾಡುವ ಪದ್ಧತಿ ಇದೆ. ಈ ಮಾಸವು 15 ದಿನ ದೇವತೆಗಳಿಗೆ,ಉಳಿದ 15 ದಿನ ಪಿತೃಗಳಿಗೆ ಪ್ರಿಯವಾಗಿದೆ. ವರ್ಷಪೂರ್ಣ ಇಂಥ **"ದೇವ ಪಿತೃ"** ಸಮನ್ವಯ ಮಾಸ ಇಲ್ಲ. ಹಾಗಾಗಿಯೇ ಭಾದ್ರಪದಕ್ಕೆ ವಿಶೇಷ ಮನ್ನಣೆ.

### ಗೌರವಾದರ

**ಭಾದ್ರಪದೇ ಮಾಸಿ ನಿತ್ಯಂ ಪ್ರಾತಃಸ್ನಾನಂ ಕರೋತಿ ಯಃ**
**ನಿತ್ಯದಾನಂ ತಥಾ ಕಾರ್ಯಂ ಪುರಾಣ ಶ್ರವಣಂ ಚರೇತ್**
**ಶ್ರವಣೇನ ಭವೇತ್ ಜ್ಞಾನಾನ್ಮೋಕ್ಷಂ ಚ ವಿಂದತಿ**
**ವ್ರತಾನಿ ನಿಯಾಮಾನ್ ಧೃತ್ವಾ ಶುಚಿಃ ಪ್ರಯತಮಾನಸಃ**
**ದೇವತಾರ್ಚನ ವಿಧಿರತಃ ಪಿತೃಣಾಂ ಶ್ರಾದ್ಧಕರ್ಮಕೃತ್**
**ಸ ಯಾತಿ ಪರಮಂ ಸ್ಥಾನಂ ಪುನರಾವರ್ತಿ ವರ್ಜಿತಂ**

ಈ ತಿಂಗಳಿನಲ್ಲಿ ನಸುಕಿನಲ್ಲೇ ಸ್ನಾನಮಾಡಿ, ನಿತ್ಯವೂ ಸುವಸ್ತುಗಳನ್ನು ದಾನ ನೀಡಬೇಕು. ರಾಮಾಯಣ, ಭಾರತ ಭಾಗವತಾದಿಗಳನ್ನು ಶ್ರವಣ ಮಾಡಬೇಕು. ನಂತರ ದೇವ ತಾರ್ಚನೆ ಮಾಡಿ ಪಿತೃಶ್ರಾದ್ಧ ಮಾಡಬೇಕು. ಇದರಿಂದ ಜ್ಞಾನ, ಭಕ್ತಿ, ವೈರಾಗ್ಯ ಪ್ರಾಪ್ತಿಯಾಗುತ್ತದೆ. ದೈಹಿಕ ಮಾನಸಿಕವಾಗಿ ಶುಚಿಯಾಗಿ ಮತ್ತೆ ಮತ್ತೆ ವ್ರತಾಚರಣೆಗಳನ್ನು ಮಾಡುವುದರಿಂದ ಮೋಕ್ಷ ಲಭ್ಯ ಎನ್ನುತ್ತದೆ ಮಾಸದ ಧರ್ಮ.

### ಗಣೇಶ ಪ್ರಥಮಪೂಜಿತ :

ಭದ್ರಮಾಸವು ಪ್ರಥಮ ಪೂಜಿತ ಗಣೇಶನ ಆರಾಧನೆಯಿಂದ ಚಾಲನೆ ಪಡೆಯುತ್ತದೆ. ಅದಕ್ಕೂ ಮೊದಲು ಆತನ ಮಾತೆಗೆ ಭಕ್ತಿ ಸಮರ್ಪಣೆ. ವೃದ್ಧಿ ಚಂದ್ರನ ಪ್ರತೀಕವಾಗಿ 15 ದಿನ ಪ್ರಕಾಶಮಾನವಾಗಿ ಬೆಳಗಿ ದೇವ-ದೇವಿಯರ ಪೂಜಾದಿಗಳಿಗೆ ನಿಗದಿಯಾಗಿದ್ದರೆ (ಶುಕ್ಲಪಕ್ಷ) ಉಳಿದ ಕತ್ತಲೆಯ 15 ದಿನ (ಕೃಷ್ಣಪಕ್ಷ) ಪಿತೃಗಳ ಕಾರ್ಯಗಳಿಗೆ (ಪಿತೃಪಕ್ಷ) ಕ್ಕೆ ಮೀಸಲಾಗಿದೆ. ಮಾಸದ ಪ್ರತಿಯೊಂದು ಆಚರಣೆ ಹಿನ್ನೆಲೆಯಲ್ಲಿ ತನ್ನದೇ ಆದ ಆಧ್ಯಾತ್ಮಿಕ ಮಹತ್ವ ಅಡಗಿದೆ. ಸರ್ವಪಿತೃ ಅಮಾವಾಸ್ಯೆಯೊಂದಿಗೆ ಎಲ್ಲಾ ಮೃತ ಆತ್ಮಗಳಿಗೂ ಸದ್ಗತಿ ಕೋರಿ ಪಿಂಡಪ್ರಧಾನ ಮಾಡುವುದರೊಂದಿಗೆ ಮಾಸ



ಮಂಗಳ ಕಾಣುತ್ತದೆ. ತಮಿಳುನಾಡಿನಲ್ಲಿ ಪುರಟ್ಟಾಸಿ ಮಾಸ ಎಂದೇ ಇದನ್ನು ಕರೆಯುತ್ತಾರೆ. ವೈಷ್ಣವ ಮತ್ತು ಶೈವ ಪಂಥದವರು ಈ ಅವಧಿಯ ನಿಗದಿತ ದಿನಗ ಳಂದು ಉಪವಾಸವನ್ನೂ ಮಾಡುತ್ತಾರೆ.

### ವ್ರತ ಮತ್ತು ಹಬ್ಬಗಳೇ ವಿಜೃಂಭಿಸುತ್ತದೆ

ಭಾದ್ರಪದ ಶುಕ್ಲ ತೃತೀಯಾ ನಸುಕಿನಲ್ಲೇ ಸುಮಂಗಲಿಯರು ಸ್ವರ್ಣಗೌರಿವ್ರತಾನುಷ್ಠಾನ ಮಾಡು ತ್ತಾರೆ. ಮರುದಿನ ಗಣಪತಿ ವ್ರತ. ಇದು ದೇಶದ ಗಡಿ ಯನ್ನೂ ಮೀರಿದ ವಿಜೃಂಭಣೆಯ ಆಚರಣೆಯಾಗಿದೆ. ಒಂದು ಅರ್ಥದಲ್ಲಿ ಸ್ವದೇಶಿ ಚಳವಳಿ,ಸ್ವಾತಂತ್ರ್ಯ ಆಂದೋಲನಕ್ಕೂ ಸ್ಫೂರ್ತಿ ನೀಡಿದ ಗಣಪನನ್ನು ಮನೆ, ಮಂದಿರ - ಬೀದಿಯ ಪ್ರಮುಖ ವೇದಿಕೆಗಳಲ್ಲಿ ಪೂಜಿಸುವ ಪುಣ್ಯ ಕಾಲ. ಶತಮಾನಗಳಿಂದಲೂ ಇದು ಅಂತಾ ರಾಷ್ಟ್ರೀಯ ಹಬ್ಬವೂ ಹೌದು. ದೇಶ-ಭಾಷೆ ಮೀರಿದವನು ಗಣನಾಯಕ. ಚೌತಿ ಚಂದ್ರನನ್ನು ನೋಡಿದರೆ ಅಪವಾದ ಬರುತ್ತದೆ ಎಂಬ ವ್ರತ ಕಥೆಯೂ ಇದೆ. ಸಂಜೆ ಗಣೇಶನ ಸನ್ನಿಧಿಯಲ್ಲೇ ಶ್ಯಮಂತಕೋಪಾಖ್ಯಾನ ಓದಿ ಉತ್ತರ ಪೂಜೆ ಮಾಡುವುದು ಪದ್ಧತಿ. ಸಾಮವೇದಿಗಳಿಗೆ ಉಪಾ ಕರ್ಮದ ದಿನ. ಮರುದಿನ ಋಷಿ ಪಂಚಮಿ. ಅಷ್ಟಮಿ ಯಂದು ದೂರ್ವಾಷ್ಟಮಿ. ದ್ವಾದಶೀ ವಾಮನಜಯಂತಿ. ಇಂದಿನಿಂದ ಕ್ಷೀರವ್ರತ ಶುರು. ಶುಕ್ಲ ಚತುರ್ದಶಿ ಅನಂತ ಪದ್ಮನಾಭ ವ್ರತ. ಬಹುತೇಕ ಸಾರ್ವಜನಿಕ ವೇದಿಕೆಗ ಳಲ್ಲಿ ಗಣೇಶನ ವಿಸರ್ಜನೆ-ರಾಜಬೀದಿ ಉತ್ಸವದ ದಿನ ವಿದು. ಪೂರ್ಣಿಮಾ-ಉಮಾಮಹೇಶ್ವರ ವ್ರತಾಚರಣೆ. ಒಟ್ಟಾರೆ ಶುಕ್ಲ ಪಕ್ಷವಿಡೀ ಹತ್ತಾರು ವ್ರತ ಮತ್ತು ಹಬ್ಬಗಳೇ ವಿಜೃಂಭಿಸುತ್ತವೆ.

### ದಧಿ - ಕ್ಷೀರ ವ್ರತಕಾಲ

ಚಾತುರ್ಮಾಸ್ಯ ಆಹಾರ ಸ್ವೀಕಾರ ಪದ್ಧತಿಯ 2ನೇ ತಿಂಗಳು ಮೊಸರು (ದಧಿ)ವ್ರತ ಚಾಲನೆಯಲ್ಲಿದ್ದು, ಏಕಾದಶಿಯಿಂದ 3ನೇ ತಿಂಗಳ (ಕ್ಷೀರ) ವ್ರತ ಸಂಕಲ್ಪ ಮಾಡುವ ಕಾಲಘಟ್ಟ. ಈ ತಿಂಗಳು ಮೊದಲಾರ್ಧ ಮೊಸರು, ನಂತರ ಹಾಲು ಬಳಕೆಗೆ ಬಾರದು. ಈ ಮಾಸದಲ್ಲಿ ಮಳೆಯೂ ಉಂಟು-ಕೊಂಚ ಬಿಸಿಲೂ ಉಂಟು. ಹಾಲು ಸೇವಿಸಿದರೆ ಶ್ವಾಸಕೋಶದಲ್ಲಿ ಕಫ ಉತ್ಪತ್ತಿಯಾಗಿ ಆರೋಗ್ಯ ಕೆಡುತ್ತದೆ ಎಂದು ಆಯುರ್ವೇದ ಶಾಸ್ತ್ರವೇ ಹೇಳುತ್ತದೆ. ಹಾಗಾಗಿ ಚಾತುರ್ಮಾಸ ವ್ರತ ಅನುಷ್ಠಾನ ವಂತ ಯತಿಗಳು ವೈದಿ ಕರು ಇವುಗಳನ್ನು ಸಾವಿರಾರು ವರ್ಷಗಳಿಂದ ತಪ್ಪದೇ ಪಾಲಿಸಿ ಕೊಡು ಬಂದಿದ್ದಾರೆ.

### ಶ್ರಾದ್ಧ ಕರ್ಮಗಳಿಗೆ ಮೀಸಲು - ಪಿತೃಪಕ್ಷ

ಭಾದ್ರಪದ ಕೃಷ್ಣಪಕ್ಷ "ಶ್ರಾದ್ಧಕರ್ಮ"ಕ್ಕಾಗಿಯೇ ಮೀಸ ಲಾಗಿದೆ. ಇದನ್ನು ಪಿತೃಪಕ್ಷ, ಮಹಾಲಯವೆಂದೂ ಹೇಳುತ್ತಾರೆ. ಪಿತೃಗಳನ್ನು ಉದ್ದೇಶಿಸಿ ಮಾಡುವ ವೈದಿಕ ಕರ್ಮಕ್ಕೆ ಈ ಸಂದರ್ಭ ಆದ್ಯತೆ. ಭರಣಿ ನಕ್ಷತ್ರ ಬರುವ ದಿನವನ್ನು ಮಹಾಭರಣಿ ಶ್ರಾದ್ಧ ಎಂದೂ,ವ್ಯತೀಪಾತವೆಂದೂ ಮಹಾವ್ಯತೀಪಾತವೆಂದೂ ಅಷ್ಟಮೀ ತಿಥಿಯನ್ನು ಮಧ್ಯಾಷ್ಟಮಿ-ಅವಿಧವಾ ನವಮಿ ಎಂದೂ ಚತುರ್ದಶಿ ಯನ್ನು ಘಾತವೆಂದೂ (ಅಪಘಾತದಲ್ಲಿ ಮೃತರಿಗೆ ಶ್ರಾದ್ಧ) ಅಮಾ ವಾಸ್ಯೆಯನ್ನು ಮಹಾಲಯವೆಂದೂ ಹೇಳುತ್ತಾರೆ. ಪಕ್ಷ ಪರ್ಯಂತ ಅಪ ಸವ್ಯದಲ್ಲಿ ತಿಲತರ್ಪಣ, ಶ್ರಾದ್ಧ ಪಿಂಡ ಪ್ರದಾನಗಳು ಮೃತರ ಆತ್ಮಗಳಿಗೆ ಶಾಂತಿ ಕೋರುತ್ತವೆ. ದಾನ ಮತ್ತು ಬ್ರಾಹ್ಮಣ ಭೋಜನ ದಿಂದಲೇ ಸರ್ವ ಪಿತೃಗಳನ್ನೂ ತೃಪ್ತಿ ಪಡಿಸುವ ಪ್ರಕ್ರಿಯೆ. ನಿಯಮ ಪ್ರತಿಯೊಂದು ಸಮುದಾಯದಲ್ಲೂ ಇದೆ.

### ಪ್ರೋಷ್ಠಪದಿ ಆರಂಭ

ಭಾದ್ರಪದ ಶುಕ್ಲಪಕ್ಷದ 15 ದಿನಗಳು ಶ್ರವಣ ಯಜ್ಞಕ್ಕಾಗಿ ತಮ್ಮದೇ ಆದ ವಿಶೇಷತೆಯನ್ನು ಹೊಂದಿವೆ. ಕಾರಣ ಇಷ್ಟೇ ಭಾದ್ರಪದ ಮಾಸಕ್ಕೆ ಪ್ರೋಷ್ಠಪದಿ ಎಂಬ ಹೆಸರೂ ಇದೆ. ಈ 15 ದಿನದಲ್ಲಿ ಮತ್ಸ್ಯರೂಪೀ ಪರಮಾತ್ಮನ ವಿಶೇಷ ಸನ್ನಿಧಾನ ಇರುತ್ತದೆ. ಹಾಗಾಗಿ ಇದಕ್ಕೆ ಪ್ರೋಷ್ಠಪದ ಎಂಬ ನಾಮಧೇಯ. ಪ್ರೋಷ್ಠ ಎಂದರೆ ಶ್ರೇಷ್ಠಜಾತಿಯ ಮೀನು. ಪದ (ಪದಿ)ಎಂದರೆ ಪಾದ. ದೇವರು ಮತ್ಸ್ಯಾವತಾರ ಮಾಡಿದ್ದು ಪ್ರೋಷ್ಠ ಜಾತಿಯ ಮೀನಾಗಿ. ಪ್ರೋಷ್ಠಪದಿ ಎಂದರೆ, ಭಗವಂತನಿಗೂ ಆತನ ಅವಯವ ಗಳಿಗೂ ಭೇದ ಇಲ್ಲದ ಪ್ರೋಷ್ಠನಾಮಕ ಸ್ವರೂಪ. ಆತನ ಪಾದಗಳಲ್ಲಿ ಮೋಕ್ಷ ಸ್ಥಾನ ಪ್ರಾಪ್ತಿಯಾಗಲೆಂದು ಭಕ್ತಿಯಿಂದ ಬೇಡುವ ಕಾಲ.

ಪ್ರೋಷ್ಠನಾಮಕ ಭಗವಂತನ ಗುಣ ಸ್ವರೂಪ ತಿಳಿಸಿಕೊಡುವುದೇ ಶ್ರೀಮದ್‌ಭಾಗವತ. ಹಾಗಾಗಿ ಭಾದ್ರಪದ ಶುಕ್ಲ ದಲ್ಲಿ 15 ದಿನ ಭಾಗವತ ಹೇಳುವ-ಕೇಳುವ ಪ್ರವೃತ್ತಿ ಇದ್ದರೆ ದೇವರು ನಮ್ಮಿಂದ ಸಾಧನೆ ಮಾಡಿಸಿ ಅನಂತ ವರ ಕರುಣಿಸುತ್ತಾನೆ ಎಂದಿದ್ದಾರೆ ಸಾಕ್ಷಾತ್ ವೇದ ವ್ಯಾಸರು. ಹಾಗಾಗಿ ಈ 15 ದಿನ ಗಳಲ್ಲಿ ಗುಡಿ, ದೇವ ಸನ್ನಿಧಿ, ಮಠ, ಛತ್ರ ಗಳಲ್ಲಿ ಪಂಡಿತರಿಂದ ಭಾಗವತ ಸತ್ರವೇ ನೆರವೇರುತ್ತದೆ.



ಪರೀಕ್ಷಿತ ಮಹಾರಾಜನಿಗೆ ಶುಕಮುನಿಗಳ ಭಾಗವತ ಹೇಳಿದ್ದೂ ಇದೇ ಸಂದರ್ಭದಲ್ಲಿ.

**ಧನ್ವಂತರಿ ಅವತರಿಸಿದ ಪುಣ್ಯ ಕಾಲ**

ಸರ್ವರೀತಿಯ ದೈಹಿಕ ಮಾನಸಿಕ ರೋಗಗಳನ್ನು ದೂರ ಮಾಡುವ ಧನ್ವಂತರೀರೂಪೀ ದೇವ ಹಾಲಿನ ಕಡಲಿ ನಲ್ಲಿ ಪ್ರಾದುರ್ಭಾವಗೊಂಡಿದ್ದು ಭಾದ್ರಪದ ಶುಕ್ಲ ದ್ವಿತೀಯಾ ದಿನ.

ನಮಾಮಿ ಧನ್ವಂತರಿಯಾದಿದೇವಂ
ಸುರಾಸುರೈರ್ವಂದಿತ ಪಾದಪದ್ಮಂ
ಲೋಕೇಜೆ ರಾಖುಗ್ರ್ವಯ ಮೃತ್ಯುನಾಶಂ
ದಾತಾರ ಮೀಶಂ ವಿವಿಧೌಷಧೀನಾಂ..

ಎಂದಿವೆ ವೇದಗಳು ಧನ್ವಂ ಎಂದರೆ ಕಾಯಿಲೆ. ಅಂತರೀ ಎಂದರೆ ನಾಶ ಮಾಡುವಾತ. ಅವನೇ ಧನ್ವಂತರಿ. ಈ ಬಾರಿ ಆಗಸ್ಟ್ 25 ರಂದು ಧನ್ವಂತರಿ ಜಯಂತಿ ಆಚರಣೆ ಇದೆ. ಕನ್ನಡ ನಾಡಿನ ಸಾಂಸ್ಕೃತಿಕ ರಾಜಧಾನಿ ಮೈಸೂರಿ ನಲ್ಲಿರುವ ವಿಶ್ವದ ಅತಿ ಎತ್ತರದ ಧನ್ವಂತರಿ ಸನ್ನಿಧಿಯಲ್ಲಿ ಒಂದು ವಾರಗಳ ಕಾಲ ಧನ್ವಂತರಿ ಪ್ರಾದುರ್ಭಾವ ಉತ್ಸವ ವಿಶೇಷವಾಗಿ ನೆರವೇರುತ್ತದೆ.

ದೀರ್ಘತಮ ಎಂಬುವನ ಮನೆಯಲ್ಲಿ ಈತ ಮಗನಾಗಿ ಅವತರಿಸಿ ಬಂದು ಆಯುರ್ವೇದ ಶಾಸ್ತ್ರವನ್ನು ಉಪದೇಶಿಸಿದ. ಧನ್ವಂತರೀ ಜಯಂತಿಯ ಶುಭ ದಿನದಲ್ಲಿ ಪರಮಾತ್ಮನ ಕಾರುಣ್ಯದಿಂದ ಆರೋಗ್ಯ ಭಾಗ್ಯ ದೊರಕಲಿ. ಇದು ಇಹ-ಪರ ಸಾಧನೆಗೆ ಸೂಕ್ತ ಶಕ್ತಿ ಸಾಮರ್ಥ್ಯ, ಸಂಪತ್ತು ನೀಡಲಿ, ಯಾವುದೇ ರೋಗ-ಮಾರಿಗಳು ಲೋಕಕ್ಕೆ ಅಂಟದಿರಲಿ ಎಂದು ಪ್ರಾರ್ಥನೆ ಮಾಡುವ ಶುಭ ಕಾಲಘಟ್ಟ.

**ಹರ್ತಾಲಿಕಾ ತೀಜ್ ಆಚರಣೆ:**

ಶುಕ್ಲ ತೃತಿಯಾ ದಿನ ದಕ್ಷಿಣ ಭಾರತದವರು ಗೌರೀ ಹಬ್ಬ ಮಾಡಿದರೆ ರಾಜಸ್ಥಾನ, ಉತ್ತರ ಪ್ರದೇಶ, ಉತ್ತರಾಖಂಡ. ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ಹರ್ತಾಲಿಕಾ ತೀಜ್ ಆಚರಣೆ ಮಾಡುತ್ತಾರೆ. ಮಹಿಳೆಯರು ದೀರ್ಘಸುಮಂಗಲಿ ಭಾಗ್ಯಕ್ಕೆ ಕನ್ಯೆಯರು ಶಿವನಂಥ ಪತಿ ಪ್ರಾಪ್ತಿಯಾಗಲಿ ಎಂದು ಪ್ರಾರ್ಥಿಸುತ್ತಾರೆ.

## ಧ್ವಜಸ್ತಂಭ ಮಂಟಪ

**ಪ್ರತಿಮಾ ಮಂಟಪ ಮತ್ತು ರಂಗನಾಯಕ ಮಂಟಪದ ಮಧ್ಯೆ ಒಂದಷ್ಟು ವಿಶಾಲವಾದ ಸ್ಥಳವಿದೆ. ಅದರ ಮಧ್ಯದಲ್ಲೇ ಚಿನ್ನದ ಹೊಳಪಿನಿಂದ ಹೊಳೆಯುತ್ತಿರುವ ಗರುಡಗಂಬವಿದೆ. ಈ ಧ್ವಜಸ್ಥಂಭ ಮಂಟಪವು ಇಪ್ಪತ್ತು ಶಿಲಾಸ್ಥಂಬಗಳಿಂದ ಕಟ್ಟಲ್ಪಟ್ಟಿರುವ ಪ್ರಾಂಗಣವಾಗಿದೆ. ಮೂರು ದಿಕ್ಕಿನಲ್ಲೂ ಕಬ್ಬಿಣದ ಸರಳುಗಳನ್ನು ಉಪಯೋಗಿಸಿ ಮಾಡಿದ ಬೇಲಿಯಿದೆ. ಗರುಡಗಂಬದ ಪೂರ್ವಕ್ಕೆ ಅಂದರೆ ಹೆಬ್ಬಾಗಿಲಿನಿಂದ ಒಳಗೆ ಹೋಗುವಾಗ ಗರುಡಗಂಬದ ಮುಂದೆಯೇ ಬಲಿ ಪೀಠವಿದೆ. ಈಶಾನ್ಯ ದಿಕ್ಕಿನಲ್ಲಿ "ಕ್ಷೇತ್ರಪಾಲಕಶಿಲಾ" ಎಂಬ ಹೆಸರಿನ ಕಲ್ಲೊಂದಿದೆ.**

# ಹೃದ್ರೋಗಗಳಿಂದ ಕಾಪಾಡುವ ಋಷಿವಿದಿತ ವೈದ



**– ಮೂಲ ಡಾ॥ ಮಧುಸೂದನ ಶರ್ಮ**
**ಅನುವಾದ : ಡಿ. ಎಸ್. ಬದ್ರಿನಾಥ್**

ನಮ್ಮ ಆರೋಗ್ಯ ಸಂರಕ್ಷಣೆಯಲ್ಲಿ ಅತ್ಯಂತ ಪ್ರಾಧಾನ್ಯತೆ ಪಡೆದು ಕೊಂಡಿರುವ ಅತಿ ಮುಖ್ಯ ಅವಯವವೆಂದರೆ ಅದು ಹೃದಯ. ಪಾಶ್ಚಾತ್ಯ ಆಹಾರ ವಿಧಿ ವಿಧಾನಗಳಿಂದ, ಜೀವನಶೈಲಿ ಕಾರಣಗಳಿಂದ ವಿವಿಧ ಕಾರಣ ಗಳಿಂದಾಗಿ ವಯಸ್ಸು ಸ್ತ್ರೀ ಪುರುಷ ಲಿಂಗ ಭೇದ ಇತ್ಯಾದಿಗಳ ಪರಿವಿಲ್ಲದೆ ಹೃದಯಕ್ಕೆ ಸಂಬಂಧಿಸಿದ ವಿವಿಧ ಆರೋಗ್ಯ ಸಮಸ್ಯೆಗಳು ದಿನದಿನಕ್ಕೂ, ಹೆಚ್ಚಾಗುತ್ತಿರುವುದು ಗಮನಿಸಬೇಕಾದ ವಿಷಯ.

**ಕಾರಣಗಳು :** ಅವಶ್ಯಕತೆಗೂ ಮೀರಿದ ಆಹಾರ ಸೇವನೆ, ಫಾಸ್ಟ್ ಫುಡ್, ಜಂಕ್ ಫುಡ್ಸ್‌ಗಳಂತಹ ಆಹಾರಗಳು, ಹೊರಗಡೆ ಸಿಗುವ ತಿಂಡಿ ತಿನಿಸುಗಳ ಅಪರಿಮಿತ ಸೇವನೆ, ಅಧಿಕ ಎಣ್ಣೆ ಕೊಬ್ಬಿನ ಪದಾರ್ಥಗಳು, ಮಸಾಲೆ, ಕರಿದ ಪದಾರ್ಥಗಳ ಸೇವನೆ. ಮದ್ಯಪಾನ, ಧೂಮಪಾನ, ಮಾನಸಿಕ ಒತ್ತಡ, ವ್ಯಾಯಾಮ ರಹಿತ ಸೇವನೆ,ಅಧಿಕ ಬೊಜ್ಜು, ಮಧುಮೇಹ,ರಕ್ತ ಹೀನತೆಯಂತ ಹವು ಪರೋಕ್ಷವಾಗಿ ಅಪರೋಕ್ಷ ವಾಗಿ ಅಸಂಖ್ಯಾತ ಹೃದ್ರೋಗಗಳಿಗೆ ಕಾರಣೀಭೂತವಾಗಿವೆ. ಇಂತಹವು ಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಅತ್ಯಂತ ಪ್ರಾಚೀನ ಆಯುರ್ವೇದ ವಿಧಾನ ಪರಿವರ್ಜನ ಎಂಬ ವಿಷ ಯಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದೆ. ಅಂದರೆ ನೇರವಾಗಿ ಹೇಳ ಬೇಕೆಂದರೆ ಹೃದ್ರೋಗಗಳಿಗೆ ಕಾರಣವಾಗುವ ವಿವಿಧ ಅಂಶಗಳ ಪ್ರಭಾವ ನಮ್ಮ ದೇಹ, ಮನಸ್ಸುಗಳ ಮೇಲೆ ಬೀಳದಂತೆ ಜಾಗ್ರತೆ ವಹಿಸು ವುದರ ಮೂಲಕ ಆರೋಗ್ಯವಂತ ವಾದ ಚೊಕ್ಕ ಜೀವನವನ್ನು ಸಾಗಿಸ ಬಹುದೆಂದು ಇದರ ಅರ್ಥವೆಂದು ಗ್ರಹಿಸಬಹುದು.

ಹೃದ್ರೋಗಗಳು ಬಾರದಂತಿ ರಲು, ಶೀಘ್ರ ಗುಣವಾಗಲು, ಪ್ರಮಾದ ಕರವಾಗದೇ ಇರರು, ಸನಾತನ ಕಾಲದಿಂದಲೂ ಆಚರಣೆ ಪದ್ಧತಿ

**ತಿರುಮಲೆಯಲ್ಲಿ....**
**ರಕ್ತ ದಾನ ಮಾಡಿರಿ!**



**ತಿರುಮಲೇಶನ ಆಶೀರ್ವಾದ ಪಡೆಯಿರಿ...!!**

**"ಮಾನವ ಸೇವೆಯೇ... ಮಾಧವ ಸೇವೆ"**

**ಎಂಬುದು ನಮ್ಮ ಆರ್ಷಧರ್ಮ**
**ಜೊತೆಯ ಪ್ರಾಣಿಯನ್ನು ಯಾವ ವಿಧದಲ್ಲಿ**
**ರಕ್ಷಿಸಿದರೂ ಯಾವ ರೀತಿಯಲ್ಲಿ**
**ಕಾಪಾಡಿದರೂ**
**ಅದು ಅಂತ್ಯವಿಲ್ಲದ ಪುಣ್ಯವನ್ನು ನಮಗೂ**
**ನಮ್ಮ ಸಂತತಿಗೂ ದೊರಕಿಸಿ ಕೊಡುತ್ತದೆ.**
**ಕಲಿಯುಗ ವೈಕುಂಠವಾಸನ ಪುಣ್ಯಧಾಮವಾದ**
**ತಿರುಮಲೆಯಲ್ಲಿ ರಕ್ತದಾನ ಮಾಡುವುದು ಪರಮಪವಿತ್ರ ಕಾರ್ಯ.**
**ನಿಮ್ಮ ರಕ್ತದಿಂದ ಮತ್ತೊಬ್ಬ ಮನುಷ್ಯನ ಪ್ರಾಣ ಉಳಿಯುತ್ತದೆ.**

**ತಿರುಮಲೆಯಲ್ಲಿ ರಕ್ತ ದಾನ ಮಾಡಿರಿ**

**ತಿರುಮಲೆಯ ಅಶ್ವಿನಿ ಆಸ್ಪತ್ರೆಯಲ್ಲಿ**
**ಪ್ರತಿ ದಿನ ಬೆಳಗ್ಗೆ 8-00 ರಿಂದ 12-00 ಗಂಟೆಯವರೆಗೆ**
**ಯಾರು ಬೇಕಾದರೂ ರಕ್ತದಾನ ಮಾಡಬಹುದು.**
**ಫೋನ್ - 0877 - 2263601**

**ಬನ್ನಿ...... ರಕ್ತದಾನ ಮಾಡಿರಿ ! ಆಪತ್ತಿನಲ್ಲಿದ್ದವರನ್ನು ರಕ್ಷಿಸಿರಿ.... !!**

ಯಲ್ಲಿರುವ ಋಷಿವಿದಿತ ವೈದ್ಯ ಬಹಳ ಚೆನ್ನಾಗಿ ಉಪಚರಿಸುತ್ತದೆ. ಮುಖ್ಯವಾಗಿ ಕೆಳಕಂಡ ಆಹಾರ ಔಷಧಿಗಳು ಒಳ್ಳೆಯ ಫಲಿತಾಂಶಗಳನ್ನು ನೀಡಬಲ್ಲವು.

**ಅಡುಗೆ ಮನೆ ಔಷಧಿಗಳು:**

ದಿನವೂ ಒಂದೆರಡು ಬಾರಿ ಬಾರಿಯೊಂದಕ್ಕೆ ಚಕ್ಕೆಯ ಚೂರ್ಣವನ್ನು ತಕ್ಕಷ್ಟು ಜೇನಿನಲ್ಲಿ ಇಲ್ಲವೇ 50 ಮಿ.ಲೀ. ಹುಳಿ ಮಜ್ಜಿಗೆಯಲ್ಲಿ ಕಲಿಸಿ ಸೇವಿಸುವುದರಿಂದ ರಕ್ತ ಹೆಪ್ಪುಗಟ್ಟುವ ಪರಿಸರ ಕಡಿಮೆಯಾಗಿ ಹೃದಯ ರೋಗಗಳಿಂದ ರಕ್ಷಣೆ ದೊರೆಯುತ್ತದೆ.

ದಿನವೂ ಒಂದು ಬಾರಿ 10 ಮಿ.ಲೀ. ಶುಂಠಿ ರಸವನ್ನು 10 ಮಿ.ಲೀ ಜೇನು ಅಥವಾ 50 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಯಾವುದೇ ಪ್ರತಿರೋಧವಿರದೆ ಹೃದಯಕ್ಕೆ ಒಳ್ಳೆಯ ರಕ್ತ ಪರಿಚಲನೆಯಾಗಿ ಕ್ರಿಯಾ ಸಾಮರ್ಥ್ಯ ಉತ್ತಮವಾಗಿರುತ್ತದೆ.

ಅರಿಶಿನ ಪುಡಿ,ದಾಲ್ಚಿನ್ನಿ ಚಕ್ಕೆಯ ಪುಡಿ ಸಮವಾಗಿ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಗ್ರಾಂ ಪುಡಿಯನ್ನು ತಕ್ಕಷ್ಟು ಜೇನು ಇಲ್ಲವೇ ನೀರಿನಲ್ಲಿ ಕಲಿಸಿ ತೆಗೆದುಕೊಳ್ಳುವುದರಿಂದ ಸಹ ಹೃದಯದ ಆರೋಗ್ಯ ಸಂರಕ್ಷಣೆಯಾಗುತ್ತದೆ.

200 ಮಿ.ಲೀ. ಜೇನಿನಲ್ಲಿ 100ಗ್ರಾಂ ಬೆಳ್ಳುಳ್ಳಿ ಎಸಳುಗಳನ್ನು ಹಾಕಿ ಕಲಿಸಿ ವಾರ-ಹತ್ತು ದಿನಗಳು ಹಾಗೆಯೇ ಇಟ್ಟು ದಿನವೂ ಬೆಳಗ್ಗೆ ಎರಡು-ಮೂರು ಬೆಳ್ಳುಳ್ಳಿ ಎಸಳುಗಳನ್ನು ತಿನ್ನುವುದು ಅಥವಾ ದಿನವೂ ಒಂದು ಬಾರಿ ಭೋಜನ ಸಮಯದಲ್ಲಿ ಮೊದಲ ತುತ್ತು ಅನ್ನದಲ್ಲಿ ಒಂದೆರಡು ಬೆಳ್ಳುಳ್ಳಿ ಎಳಸುಗಳನ್ನು ಇಟ್ಟು ಅಗೆದು ತಿಂದರೆ ನಮ್ಮ ದೇಹಕ್ಕೆ ಆರೋಗ್ಯಕ್ಕೆ ಉತ್ತಮವಾಗುವ ಎಚ್.ಡಿ.ಎಲ್ ಕೊಲೆಸ್ಟ್ರಾಲ್ ಹೆಚ್ಚಾಗುತ್ತದೆ. ಹಾನಿಕಾರಕವಾದ ಎಲ್.ಡಿ.ಎಲ್.ವಿ.ಎಲ್.ಡಿ.ಎಲ್. ಟ್ರೆಗ್ಲಾಜಲೈಡ್ಸ್ ಕೂಡ ತಗ್ಗುತ್ತದೆ. ಇದರಿಂದ ಎದೆ ನೋವಿನಂತಹ ಸಮಸ್ಯೆಗಳಿಂದ ಹೊರ ಬರಬಹುದು.

ಏಳುತ್ತಲೇ ಪಿಸ್ತಾ, ಬಾದಾಮಿ ಬೀಜಗಳನ್ನು ದಿನಕ್ಕೆರಡು ಮೂರು ಸ್ಪೂನ್ ಇಲ್ಲವೇ ನೀರಿನಲ್ಲಿ ಯಾವುದಾದರು ಒಂದನ್ನು 5-6 ಸ್ಪೂನ್ ತೆಗೆದುಕೊಂಡು 7-8 ಗಂಟೆಗಳು ನೀರಿನಲ್ಲಿ ನೆನೆಸಿ ತಿನ್ನುವುದರಿಂದ ಕೂಡಾ ಹೃದ್ರೋಗಗಳಿಂದ ಹೊರ ಬರಬಹುದು.



**ಆಯುರ್ವೇದ ಔಷಧಿಗಳು :**

ಅರ್ಜುನಾರಿಷ್ಟ, ಅರ್ಜುನಚೂರ್ಣಂ, ಅಮಲಕಿ ರಸಾಯನಂ, ಶೃಂಗಿಭಸ್ಮ, ಪ್ರಭಾಕರವಟಿ, ಲಶುನಾದಿವಟಿ, ಅಜಮೋದಾರಂ, ಶೃಂಗಾರಾಭ್ರರಸ, ನಿಶ ಅಮಲಕಿ,ಚ್ಯವನಪ್ರಾಶ, ಹೃದಯಾರ್ಣವರಸ ಮುಂತಾದ ವಿವಿಧ ಬಗೆಯ ಔಷಧಿಗಳನ್ನು ಆಯುರ್ವೇದ ವೈದ್ಯರ ಪರಿವೀಕ್ಷಣೆಯಲ್ಲಿ ಬಳಸುವುದರಿಂದ ಸಹ ಸತ್ಫಲಿತಗಳು ಉಂಟಾಗುತ್ತವೆ.

**ಆಚರಿಸಬೇಕಾದ ನಿಯಮಗಳು ಹಾಗೂ ಔಷಧಿಗಳು :**

1. ದಿನಕ್ಕೆ 3-5 ಲೀಟರ್‌ವರೆಗೆ ಅವರವರ ವಯಸ್ಸು, ಶರೀರ ತತ್ವ , ವಾತಾವರಣ, ಸ್ಥೂಲತೆ, ಶಾರೀರಕ ಶ್ರಮ, ಇತರ ಬಂಧಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವಲ್ಪ ಸ್ವಲ್ಪವೇ ನೀರನ್ನು ಸೇವಿಸುತ್ತಿರಬೇಕು.

2. ಹೊತ್ತಿಗೆ ಸರಿಯಾಗಿ ಆಹಾರ ಸೇವನೆಯೂ ಮುಖ್ಯ. ಒಂದೆ ಬಾರಿ ಹೊಟ್ಟೆ ಬಿರಿಯುವಷ್ಟು ಆಹಾರ ಸೇವನೆ ಕೂಡ ಒಳ್ಳೆಯದಲ್ಲ.

3. ಸಾಕಷ್ಟು ವಿಶ್ರಾಂತಿ, ನಿದ್ರೆ ಬಹಳ ಅಗತ್ಯ.

4. ದಿನವೂ ಅರ್ಧ ಗಂಟೆಯಿಂದ ಗಂಟೆಯವರೆಗೆ ಅವರವರ ವಯಸ್ಸು ಆರೋಗ್ಯ ಪರಿಸ್ಥಿತಿಗಳಿಗನುಗುಣವಾಗಿ ದೈಹಿಕ ವ್ಯಾಯಾಮ ಮಾಡುತ್ತಿರಬೇಕು.

5. ಮಾನಸಿಕ ಒತ್ತಡವಿರದಂತೆ ನೋಡಿಕೊಳ್ಳಬೇಕು.

6. ಧ್ಯಾನ, ಯೋಗ, ಪ್ರಾಣಾಯಾಮದಂತಹ ಪ್ರಕ್ರಿಯೆಗಳು ಸಹ ಹೃದಯದ ಆರೋಗ್ಯ ಹದಗೆಡದಂತೆ ಸಹಾಯ ಮಾಡುತ್ತವೆ.

"ಸಮ್ಮೀಶ್ವರ! ನಿಜ. ನಾನು ಒಂದು ಯಾಗ ವನ್ನು ಪ್ರಾರಂಭಿಸಿ ಭೂಮಿಯನ್ನು ಅಗೆಯುತ್ತಿದ್ದಾಗ ಅತ್ಯಾಶ್ಚರ್ಯವಾಗುವಂತೆ, ಸೀತೆಯನ್ನು ಕಂಡೆ. ಆ ಮಗು ನನಗೆ ಸಾಮಾನ್ಯದಂತೆ ಕಾಣ ಅಲ್ಲ. ಅವಳು ನನಗೆ ಲೌಲೋಕ್ಯೈಕಮಾತೆಯಾಗಿ ಕಂಡಳು. ವರಪುತ್ರಿಗೆ ತಕ್ಕ ಸೂಕ್ತವಾದ ಮಾನವ ವರ ನಿದ್ದಾನೆಯೇ? ಇನ್ನೂ ಎಷ್ಟು ಕಾಲ ಕಾಯ ಬೇಕು? ಸೀತೆಯ ರೂಪಲಾವಣ್ಯಗಳನ್ನು ನೋಡಿದರೆ, ಆ ತಾಯಿ ರಮಾದೇವಿಯ ವಂಶಸ್ಥೆ ಎಂದು ನನಗೆ ತೋರುತ್ತದೆ. ಈ ಮಗಳಿಗೆ ಹರಿ ಅಂಶ ಜನೇ ಸೂಕ್ತವಾದ ವರ ಆದರೆ ಅಂತಹ ಪುರುಷ ನಿದ್ದಾನೆಯೇ?"

ಇನ್ನೊಂದು, ನಿನಗೆ ತಿಳಿದಿದೆಯಲ್ಲವೇ! ನನ್ನಲ್ಲಿರುವ ಶಿವ ಧನುಸ್ಸಿನ ಕಥೆ ಆ ಬಿಲ್ಲನ್ನು ದಾರ ದಿಂದ ಕಟ್ಟಿ ಮುರಿಯಬಲ್ಲವನೇ ಆ ಕನ್ಯೆಯನ್ನು ಮದುವೆಯಾಗಲು ಅರ್ಹ. ಇವನೇ ಸೀತೆಗೆ ತಕ್ಕ ವರ. ಆದ್ದರಿಂದಲೇ ಆ ಶಿವಧನಸ್ಸನ್ನು ಮುರಿದು ಧನುರ್ಭಂಗ ಮಾಡಬಲ್ಲವನಿಗೆ ನನ್ನ ಮಗಳನ್ನು ಮದುವೆ ಮಾಡುತ್ತೇನೆ ಎಂದು ಪ್ರಕಟಣೆ ಕೂಡಾ ನೀಡಿದ್ದೇನೆ ಇವೆಲ್ಲಾ ನಿಮಗೆ ತಿಳಿದಿದೆಯಲ್ಲವೇ ಎಂದನು. ಜನಕರಾಜನ ಮಾತುಗಳನ್ನು ಕೇಳಿದ ಶತಾನಂದನು ಮಹಿಪಾಲ ಸೀತೆ ಭೂಮಿಜ. ಆ ತಾಯಿಗೆ ಸೂಕ್ತ ಪುರುಷಶ್ರೇಷ್ಠನಿದ್ದಾನೆ. ಅಲ್ಲದೆ, ನಾಲ್ವರು ಹೆಣ್ಣು ಮಕ್ಕಳಿಗೆ ಸೂಕ್ತ ವರಗಳಿರುವ ರಾಜಮನೆ ತನವಿದೆ. ನಿಮ್ಮ ಎಲ್ಲಾ ಕೋರಿಕೆಗಳು ಈಡೇರ ಬೇಕೆಂದರೆ ವೆಂಕಟಾಚಲ ಮಹಿಮೆಯನ್ನು ಶ್ರದ್ಧೆಯಿಂದ ಕೇಳು. ನಿಮ್ಮ ಕೋರಿಕೆ ಈಡೇರುತ್ತದೆ ವೆಂಕಟಗಿರಿಯ ಮಹಿಮೆಗಳನ್ನು ಕೇಳಿದ ಬ್ರಹ್ಮಾದಿಯರೇ ಸ್ವತಃ ಕೃತ ಕೃತ್ಯರಾಗಿದ್ದಾರೆ.

ವೆಂಕಟಾದ್ರಿಯ ಮಹಿಮೆ ಇಷ್ಟೇ ಎಂದು ಹೇಳಲಾಗುವುದಿಲ್ಲ. ಈ ಬೆಟ್ಟದ ಮಹಿಮೆಯನ್ನು ಕೇಳುವವರಿಗೆ ಪಾಪ ಪರಿಹಾರ, ದಾರಿದ್ರ್ಯ ನಿವಾರಣೆ ಮತ್ತು ರೋಗಗಳ ನಿರ್ಮೂಲನೆ ಖಚಿತ. ಇದಲ್ಲದೆ ಅವರ ಆಳವಾದ ಆಸೆಗಳು ಖಂಡಿತವಾಗಿಯೂ ಈಡೇರುತ್ತವೆ. ಎಲ್ಲಾ ಶುಭವಾಗುತ್ತದೆ 'ಮಹಾರಾಜ! ಈ ಬೆಟ್ಟವು ಅತ್ಯಂತ ಪ್ರಾಚೀನವಾದುದು. ಕೃತಯುಗದಲ್ಲಿ ಈ ಬೆಟ್ಟಕ್ಕೆ "ವೃಷಭಾದ್ರಿ" ಎಂಬ ಹೆಸರಿತ್ತು ತ್ರೇತಾಯುಗದಲ್ಲಿ "ಅಂಜನಾದ್ರಿ" ದ್ವಾಪರಯುಗದಲ್ಲಿ "ಶೇಷಪರ್ವತ" ಮತ್ತು ಕಲಿಯುಗದಲ್ಲಿ ವೆಂಕಟಗಿರಿ ಎಂಬ ಪ್ರಸಿದ್ಧ ಹೆಸರುಗಳಿದ್ದವು ಎಂದು ಹೇಳುತ್ತಿದ್ದಂತೆ ಮಹಾರಾಜ ಜನಕನು ಕುತೂಹಲವನ್ನು ತಡೆಯಲಾರದೆ "ಮುನಿಗಳೇ ಒಂದು ಬೆಟ್ಟಕ್ಕೆ ಇಷ್ಟೊಂದು ಹೆಸರುಗಳು ಈ ಹೆಸರುಗಳು ಹೇಗೆ ಬಂದವು ಎಂದು ತಿಳಿಯ ಬೇಕೆಂಬ ಬಯಕೆ' ಎಂದನು, ಸರಿ ಎಂದು ಹೇಳಲು ಪ್ರಾರಂಭಿಸಿದನು.

ಒಂದಾನೊಂದು ಕಾಲದಲ್ಲಿ ಆ ಬೆಟ್ಟದ ಮೇಲೆ ವೃಷಭಾಸುರ ಎಂಬ ರಾಕ್ಷಸ ವಾಸಿಸುತ್ತಿದ್ದ. ಅವನಿಗೆ ಮುನಿಗಳೆಂದರೆ ಕೋಪ. ಆದ್ದರಿಂದ ಮುನಿವೃಂದದವರನ್ನು ಹಿಂಸಿಸುತ್ತಿದ್ದನು. ಆ ರಾಕ್ಷಸನ ಕಾಟವನ್ನು ಸಹಿಸಲಾಗದೆ, ಎಲ್ಲಾ ಋಷಿಗಳು ಒಟ್ಟಾಗಿ ವರಾಹ ದೇವನಲ್ಲಿಗೆ ಹೋಗಿ ತಮ್ಮ ದುಃಖವನ್ನು ತೋಡಿಕೊಂಡರು. ಅವರು ಭಗವಂತನನ್ನು "ಓ ದೇವರೇ ಈ ಬೆಟ್ಟದಲ್ಲಿ ವೃಷಭಾಸುರನೆಂಬ ಪಾಪಿ ರಾಕ್ಷಸನಿದ್ದಾನೆ. ನಾವು ಅವನಿಗೆ ಯಾವುದೇ ಹಾನಿ ಮಾಡದಿದ್ದರೂ, ಅವನು ನಮ್ಮಂತಹ ಸಾತ್ವಿಕರನ್ನು ವಿನಾಕಾರಣ ವಿವಿಧ ರೀತಿಯಲ್ಲಿ ಹಿಂಸಿಸುತ್ತಿದ್ದಾನೆ. ದಯವಿಟ್ಟು ಆ ರಾಕ್ಷಸನನ್ನು ಸಂಹರಿಸಿ ನಮ್ಮನ್ನು ರಕ್ಷಿಸು"ಎಂದು ಪ್ರಾರ್ಥಿಸಿದರು.



# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎಸ್. ಪಾರ್ವತಿ



ಋಷಿಗಳ ವೇದನೆಯನ್ನು ಅರ್ಥೈಸಿದ ವರಾಹ ಸ್ವಾಮಿಯು, "ಆರ್ಯರೇ! ನಿಮ್ಮ ವೇದನೆಯ ಕಾರಣ ನನಗೆ ತಿಳಿಯಿತು. ಅಸುರ ಸಂಹಾರ ಖಂಡಿತವಾಗಿಯೂ ಆಗುತ್ತದೆ. ನೀವು ನಿರ್ಭಯವಾಗಿ ಹೊರಡಿ" ಎಂದು ಅವರಿಗೆ ಭರವಸೆ ನೀಡಿದನು. ಭಗವಂತನ ಭರವಸೆಯಿಂದ ಋಷಿಗಳು ತಮ್ಮ ಚಿಂತನೆಗಳನ್ನು ತ್ಯಜಿಸಿ ಜಪತಪಾದಿಗಳಲ್ಲಿ ಮಗ್ನರಾದರು. ಋಷಿಗಳು ಉಲ್ಲೇಖಿಸಿದ ವೃಷಾಭಾಸುರನು ಸಾಮಾನ್ಯನಾಗಿರಲಿಲ್ಲ. ಕೇವಲ ದೈತ್ಯನೂ ಅಲ್ಲ. ಅವನು "ಕರಾಳ ನೃಸಿಂಹ" ಮಂತ್ರೋಪಾಸಕನು. ಪ್ರತಿದಿನ ಸ್ವಾಮಿ ಮಂತ್ರ ಜಪ ಮಾಡುತ್ತಾ ತುಂಬೂರು ತೀರ್ಥದ ಸುತ್ತಮುತ್ತಲ ಪ್ರದೇಶದಲ್ಲಿ ಧ್ಯಾನ ಮಾಡುತ್ತಾ ಪೂಜೆಯ ಅಂತ್ಯದಲ್ಲಿ ತನ್ನ ಶಿರವನ್ನೇ ಕತ್ತರಿಸಿ ನರಹರಿಗೆ ಅರ್ಪಿಸುತ್ತಿದ್ದನು. ಆತನ ರಾಕ್ಷಸ ಭಕ್ತಿಯಿಂದ ಸಂತಸಗೊಂಡ ಭಗವಂತನು ಅವನ ಶಿರವನ್ನು ಮೊದಲಿನಂತೆ ಕರುಣಿಸುತ್ತಿದ್ದನು. ಈ ರೀತಿಯ ಪೂಜೆಯು ಐದುನೂರು ವರ್ಷಗಳ ಕಾಲ ಸಾಗಿತು. ಅಸುರನ ರಾಕ್ಷಸ ಭಕ್ತಿಯಿಂದ ಸಂತುಷ್ಟನಾದ ಭಗವಂತನು ವೃಷಭಾಸುರನ ಮುಂದೆ ಪ್ರತ್ಯಕ್ಷನಾದನು ವರವನ್ನು ಬೇಡು ಎಂದನು.

"ಓ ಪರಮಾತ್ಮನೇ ನನಗೆ ಸ್ವರ್ಗ ಬೇಡ. ನನಗೆ ಬ್ರಹ್ಮ ಲೋಕಬೇಡ. ಎಲ್ಲರೂ ಬಯಸುವ ಮೋಕ್ಷವೂ ನನಗೆ ಬೇಡ ಪ್ರಭು ಅನ್ಯಥಾ ಭಾವಿಸಬೇಡಿ." ನೀನು ಅನೇಕ ಅವತಾರಗಳನ್ನು ಎತ್ತಿ ಎಷ್ಟೋ ರಾಕ್ಷಸರನ್ನು ಕೊಂದಿದ್ದೀಯ. "ಆ ಅವತಾರಗಳ ಬಲಗಳನ್ನೆಲ್ಲಾ ಒಟ್ಟುಗೂಡಿಸಿ ನನ್ನ ಮುಂದೆ ನೀವು ನಿರಂತರ,ನಿಮ್ಮೊಂದಿಗೆ ಹೋರಾಡಬೇಕೆಂಬ ಸಣ್ಣ ಆಸೆ ನನ್ನದು" ಎಂದು ಅವನು ವಿನಂತಿಸಿದನು. ಆ ರಾಕ್ಷಸನ ಅಲೌಕಿಕ ಬಯಕೆಗೆ ತನ್ನೊಳಗೆ ನಕ್ಕು, ಅಂತಹ ಸಮ್ಯಕ್ ರೂಪದೊಂದಿಗೆ ಕಾಣಿಸಿಕೊಂಡನು.

ಅವರಿಬ್ಬರ ನಡುವೆ ಭೀಕರ ಯುದ್ಧ ನಡೆಯಿತು. ಒಂದು ಹಂತದಲ್ಲಿ ಸೋಲಿನಂಚಿನಲ್ಲಿದ್ದು ರಾಕ್ಷಸನು ಆರಿ ಹೋಗುವ ದೀಪವು ಇದ್ದಕ್ಕಿದ್ದಂತೆ ಬೆಳಗಿದಂತೆ ನರಕಂಠೀರವನಿಗಿಂತ ರಾಕ್ಷಸನೇ ಹೆಚ್ಚು ಶಕ್ತಿಶಾಲಿಯಾದಾಗ ದೇವತೆಗಳು ಚಿಂತಾಕ್ರಾಂತರಾದರು. ನರಹರಿ ಗೆಲುವಿಗಾಗಿ ಕಾತರದಿಂದ ಕಾಯುತ್ತಿದ್ದರು.ಭಗವಂತ ತಕ್ಷಣವೇ ಗರುಡ ವಾಹನಾರೂಢನಾದನು. ಸಾವಿರ ಕೈಗಳಿಂದ ಮತ್ತು ಸಾವಿರ ಆಯುಧಗಳಿಂದ ಆ ರಾಕ್ಷಸನ ಮೇಲೆ ದಾಳಿ ಮಾಡಿದನು. ಮಾಂತ್ರಿಕನಾಗಿದ್ದ ಆ ರಾಕ್ಷಸನು ಗರುಡನ ಮೇಲೆ ಸವಾರಿ ಮಾಡುತ್ತಿದ್ದ ವಿಷ್ಣುವಿನ ರೂಪದಲ್ಲಿ ಕಾಣಿಸಿಕೊಂಡನು.ರಾಕ್ಷಸನ ಮಾಯೆಯನ್ನು ತಿಳಿದ ಭಗವಂತನು ತನ್ನ ಮಾಯಾಜಾಲದಿಂದ ಅವನ ಮಾಯಾ ರೂಪವನ್ನು ನಾಶಪಡಿಸಿದನು. ಆಗ ವೃಷಭಾಸುರನು ತನ್ನ ಸಹಜ ವೇಷದಲ್ಲಿ ನಿಲ್ಲಬೇಕಾಯಿತು.

ಚಪಲರಾಕ್ಷಸ ! ನನ್ನ ಎದುರಿಗೆ ನಿಂತು ನನ್ನ ಸರಿಸಾಟಿಯಾಗಿ ಹೋರಾಡಲು ನಿರ್ಧರಿಸಿದ್ದೀಯ. ವರವನ್ನು ಕೋರಿದ್ದೀಯ. ಆದರೂ ನೀನೇನು ನಿನ್ನ ಬಲವೇನು ಭಕ್ತಿಯಿಂದ ನನ್ನನ್ನು ಸ್ಮರಿಸಿದ್ದರಿಂದ ಇಷ್ಟು ದಿನ ನಿನ್ನನ್ನು ಸಂಹರಿಸದೇ ಬಿಟ್ಟಿದ್ದೆ. ನಿನ್ನ ಎಲ್ಲಾ ತಪ್ಪುಗಳನ್ನು ನಾನು ಕ್ಷಮಿಸಿದ್ದೇನೆ. ಆದರೆ ನೀನು ಇಂದು ಮಾಯಾ ವಿಷ್ಣುವಿನ ರೂಪದಲ್ಲಿ ವಿಜೃಂಭಿಸಿದ್ದೀಯ. ನೀನು ಎಲ್ಲಿ ಅಡಗಿಕೊಂಡರೂ ನಿನ್ನನ್ನು ಬಿಡುವುದಿಲ್ಲ. ರಾಕ್ಷಸ ನನ್ನ ಕೈಯಲ್ಲಿನ ಚಕ್ರಾಯುಧದಿಂದ ನಿನ್ನನ್ನು ನಿಗ್ರಹಿಸಿದ್ದರೆ, ನಾನು ನಾರಸಿಂಹನೇ ಅಲ್ಲ ಎಂದು ಚಕ್ರ ವನ್ನು ತೆಗೆದುಕೊಂಡನು. ಭಗವಂತನು ಚಕ್ರಧಾರಿಯಾಗುತ್ತಿದ್ದಂತೆ ತನ್ನದೇನೂ ನಡೆಯುವುದಿಲ್ಲವೆಂದು ಅರಿತ ವೃಷಭಾ ಸುರನು ಪರಿಶುದ್ಧವಾದ ಭಕ್ತಿಯಿಂದ ಭಗವಂತನ ಪಾದಗಳಿಗೆ ಬಿದ್ದನು.

**- ಮುಂದುವರೆಯುತ್ತದೆ.**

## ಪ್ರಕಟನೆ

**ಚಂದಾದಾರರು ತಮ್ಮ ಬದಲಾದ ವಿಳಾಸವನ್ನು ಸಪ್ತಗಿರಿ ಕಾರ್ಯಾಲಯಕ್ಕೆ ಪತ್ರದ ಮುಖಾಂತರ ನಿಮ್ಮ ಬದಲಾದ ವಿಳಾಸವನ್ನು ಬರೆದು ಕಳುಹಿಸಿಕೊಡಬೇಕು. ಚಂದಾದಾರರಿಗೆ ನಿಗದಿತ ಸಮಯದೊಳಗೆ ಪುಸ್ತಕವನ್ನು ತಲುಪಿಸಲಾಗುತ್ತದೆ. ತಮ್ಮ ವಿಳಾಸವನ್ನು ಬದಲಿಸಲು ಈ ಕೆಳಗಿನ ಈ ಮೇಲ್ ಮುಂಖಾಂತರವು ತಿಳಿಸಬಹುದು. ನಮ್ಮ ಈ ಮೇಲ್ ಐಡಿ chiefeditortpt@gmail.com ಅನ್ನು ಸಂಪ್ರದಿಸಬಹುದು.**

**- ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ. ತಿರುಪತಿ - 517 507**



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ತಿರುಪ್ಪಲ್ಲಾಂಡ್ ಸಾಮಾನ್ಯವಾಗಿ ವಿಷ್ಣುವಿಗೆ ಹಾಡಲ್ಪಟ್ಟ ಮಂಗಳಾಶಾಸನ ಪಾಶುರ. ಇದು ಪೆರಿಯಾಳ್ವಾರ್ ಚರಿತ್ರೆಯಿಂದ ವ್ಯಕ್ತಪಡುವ ಅಂಶ. ತಿರುವೇಂಗಡದ ಒಡೆಯನು ವಿಷ್ಣುವಿನ ರೂಪವೇ ಆಗಿರುವುದರಿಂದಲೂ, ಎಲ್ಲಾ ಶ್ರೀವೈಷ್ಣವ (ದೇವಸ್ಥಾನಗಳಲ್ಲೂ ಶಾತ್ತುಮೊರೈ ಸಂದರ್ಭದಲ್ಲಿ ಅನುಸಂಧಾನ ಮಾಡುವ ರೂಢಿ ಇರುವುದರಿಂದಲೂ ಈ ತಿರುಪ್ಪಲ್ಲಾಂಡಿನ ಮೊದಲ ಪಾಶುರವನ್ನು ತಿರುಮಲೆಯ ದೇವರಿಗೂ ಅನ್ವಯಿಸಿ ಈ "ಮಂಗಳಾಶಾಸನ ಪಾಶುರಮುಲು" ಪುಸ್ತಕದ ಆರಂಭದಲ್ಲೇ ಸೇರಿಸಿದ್ದಾರೆಂದು ಭಾವಿಸುತ್ತೇನೆ. ಇದಕ್ಕೆ "ಮನವಾಳಮಾಮುನಿ"ಗಳ "ಉಪದೇಶ ರತ್ತಿನ ಮಾಲೆ"ಯ ಪಾಶುರವು ಆಧಾರ.

ಕೋದಿಲವಾಂ ಆಳ್ವಾರ್‌ಗಳ್ ಕೂರುಕಲೈಕ್ಕೆಲ್ಲಾಂ
ಆದಿತಿರುಪಲ್ಲಾಂಡಾನದುವುಂ ವೇದತ್ತುಕ್ಕಾ
ಓಮೆನ್‌ರಮದು ಪೋಲ್ ಉಳ್ಳದಕ್ಕೆಲ್ಲಾಂಶುರುಕ್ಕಾಯ್
ತ್ತಾನ್ ಮಂಗಳ ಮಾದಲಾಲ್

ಎಂದರೆ

ಕುಂದಿಲ್ಲದಾಳ್ವಾರ್ ಪ್ರಬಂಧಗಳಿಗೆಲ್ಲ ಮೊದ
ಲೆಂದು ತಿರುಪ್ಪಲ್ಲಾಂಡು ಸಲೆಸಂದು ದೆಂತೆನಲು
ವೇದ ಕೋಂ ಎಂತಂತೆ ಪಲ್ಲಾಂಡು ತಾ ದ್ರವಿಡ
ವೇದಕೆಲ್ಲಡಕ ಮಂಗಳವು ತಾನಾಯ್ತು

(ಡಾ.ವಿನೋದಾ ಅವರ ಉಪದೇಶ ರತ್ತಿನಮಾಲೈ ಪುಸ್ತಕದಿಂದ)

ಆದ್ದರಿಂದ ಆದಿಸ್ತುತಿಯಾದ ಪಲ್ಲಾಂಡ್‌ನಿಂದ ಆಳ್ವಾರರು ಮಂಗಳಾಶಾಸನ ಪಾಶುರಮುಲು ಪ್ರಾರಂಭಗೊಂಡಿರಬೇಕೆನ್ನಿಸುತ್ತದೆ.

ಇದೇ ರೀತಿ 'ತಿರುಪ್ಪಾವೈ' ನಲ್ಲೂ ವಾಚ್ಯವಾಗಿ ವೇಂಗಡದೊಡೆಯನನ್ನು ಆಂಡಾಳ್ ಹಾಡಿಲ್ಲದಿದ್ದರೂ ಅಲ್ಲಿನ ವರ್ಣನೆಗಳು ಸೂಚ್ಯವಾಗಿ (ಆ ಪಾಶುರಗಳಲ್ಲಿ) ಅವನನ್ನೇ ಕುರಿತದ್ದು ಎಂಬುದಾಗಿ ವ್ಯಾಖ್ಯಾನ ಮಾಡಿ "ಆಳ್ವಾರುಲ ಮಂಗಳಾಶಾಸನ ಪಾಶುರಮುಲು" ವಿನಲ್ಲಿ 'ವಂಗಕ್ಕಡಲ್ ಕಡೈಂದ'

ಪಾಶುರದಲ್ಲಿ ಬರುವ ಮಂಗಳಾಶಾಸನವನ್ನು ವೇಂಗಡನಾಥನದೇ ಎಂದು ಹೇಳಿರುತ್ತಾರೆ. ಇದು 'ತಿರುಪ್ಪಾವೈ' ನ ಫಲಶ್ರುತಿಯ ಪಾಶುರ.

'ವಂಗಕ್ಕಡಲ್ ಕಡೈಂದಮಾಧವನ್ನೈ' ಎಂದೂ 'ಈರಿರಂಡು ಮಾಲ್ವರೈ ತ್ತೋಳ್‌ಶೆಂಗಣ್ ತಿರುಮುಗತ್ತ್‌ಚ್ಚೆಲ್ವತ್ತಿರುಮಾಲಾಲ್'ಎಂಬುದಾಗಿ ಶ್ರೀನಿವಾಸನನ್ನೇ ವರ್ಣಿಸಿ ಆ ವಾತ್ಸಲ್ಯ ಜಲಧಿಯ 'ತಿರುವರುಳ್‌ಪೆತ್ತು ಇನ್ಬುರುವರ್' ಎನ್ನುವ ಸರ್ವತೋಮುಖವಾದ ದಿವ್ಯ ಕೃಪೆಯನ್ನು ಎಲ್ಲರೂ ಹೊಂದಲೆಂಬುದಾಗಿ ಪ್ರಬಂಧದಲ್ಲಿ ಹಾಡಲ್ಪಟ್ಟಿರುವ ವಿಧಾನ. ಶ್ರೀ ಮಹಾಲಕ್ಷ್ಮಿಯ ಮೂಲಕ ಪರಮಾತ್ಮನ ಕೃಪೆ ಜೀವರಿಗೆ ಲಭಿಸುವ ಕಾರಣ ಈ ಮಹಾಲಕ್ಷ್ಮಿಯ ಸಂಬಂಧೋಪಜ್ಞತವನ್ನು 'ಮಾಧವನ್ನೈ' (ಮಾಧವ) ಎಂಬುದಾಗಿಯೂ ವಿರೋಧಿ ನಿರಸನವು ತಿಳಿಯಲ್ಪಡಬೇಕೆಂಬುದಾಗಿ (ಪರಮಾತ್ಮನ ಕೈಂಕರ್ಯಕ್ಕೆ ಏರ್ಪಡುವ ವಿರೋಧವನ್ನು) 'ಕೇಶವನ್ನೈ' ಎಂಬುದಾಗಿಯೂ ಆಂಡಾಳ್ ಈ ಪಾಶುರದಲ್ಲಿ ವಿವರಿಸಿದ್ದಾಳಂತೆ. ಈ ರೀತಿ ಚೇತನರ ಸರ್ವ ಪಾಪಗಳನ್ನು ದಹಿಸುವವನೂ, ಸರ್ವಾಭೀಷ್ಟವನ್ನೂ ದಯಪಾಲಿಸುವವನೂ (ವೇಂಕಟ ಎನ್ನುವ ಪದದ ಅರ್ಥವನ್ನೂ ಹಿಂದೆ ವಿವರಿಸಿರುವುದನ್ನು ಗಮನಿಸಿ)ಆ ಶ್ರೀನಿವಾಸನೇ ತಾನೆ! ಈ ರೀತಿ ಮೊದಲಿನಿಂದಲೂ ತಿರುಪ್ಪಾವೈ ಅಲ್ಲಿ ಪರಮಾತ್ಮನ ಹಲವು ಅವತಾರಗಳನ್ನೂ ವರ್ಣಿಸಿ ಕಡೆಗೆ ಶ್ರೀನಿವಾಸನ ದಿವ್ಯ ಅವತಾರದೊಂದಿಗೆ ಮಂಗಳಾಶಾಸನ ಮಾಡಲ್ಪಟ್ಟಿದೆ. 'ಈರಿರಂಡು ಮಾಲ್ವರೈತ್ತೋಳ್' ಎನ್ನುವ ಸ್ಥಾನದಲ್ಲೂ ಈ ವಿಶೇಷಣವು ಶ್ರೀನಿವಾಸನಿಗೇ ಎಂಬುದಾಗಿ ವಿಶದೀಕರಿಸುತ್ತಾರೆ. ಶಂಖ ಚಕ್ರಾಲಂಕೃತವಾದ ಊರ್ಧ್ವಹಸ್ತದಿಂದಲೂ ಕಟಿತಟ ಸಂಘಟಿತವಾದ ಸ್ವಪಾದ ಕಮಲ ಸಂದರ್ಶಕವಾದ ಮುದ್ರಾಲಂಕೃತಗೊಂಡ ಇತರ ಹಸ್ತದ್ವಯಗಳಿಂದಲೂ ಕೂಡಿದ ವೇಂಕಟಾಚಲಪತಿ ವಿಗ್ರಹವನ್ನೇ ವಿವರಿಸುತ್ತದೆ. ಇವಕ್ಕಿಂತ ವಿಶೇಷವಾದ ಅಂಶವೇನೆಂದರೆ ಈ ಪಾಶುರದಲ್ಲಿ ಬರುವ "ಶೆಲ್ವತ್ತಿರುಮಾಲಾಲ್" ಎನ್ನುವುದು ಶ್ರೀನಿವಾಸನ ದಿವ್ಯ ಕೃಪೆ ಎಂದೇ ಅರ್ಥ.

- ಮುಂದುವರೆಯುತ್ತದೆ.




ವೈದಿಕ ಸಂಪ್ರದಾಯ ಪ್ರಕಾರ ಜಾತಾಶೌಚಂ, ಮೃತಾಶೌಚಂ, ನಂತಹ ವೇಳೆಗಳಲ್ಲಿ ಆಲಯ ಪ್ರವೇಶ ನಿಷೇಧ. ಆದರೂ ಯಾತ್ರಿಕರಿಂದ, ಸಿಬ್ಬಂದಿಗಳಿಂದ ತಿಳಿದೋ ತಿಳಿಯದೆಯೋ ಇಂತಹ ದೋಷಗಳು ನಡೆಯುತ್ತಿರುತ್ತವೆ. ಇಂತಹದರಿಂದ ಆಲಯದ ಪವಿತ್ರತೆಗೆ ಯಾವುದೇ ರೀತಿಯ ಲೋಪವು ಉಂಟಾಗದಂತೆ ನಿವಾರಿಸುವುದಕ್ಕೆ ನಡೆದ ದೋಷಗಳ ಪರಿಹರಣಾರ್ಥ ನಡೆಯುವ ಪವಿತ್ರ ಕಾರ್ಯಕ್ರಮವೇ "ಪವಿತ್ರೋತ್ಸವ ". ಈ ಪವಿತ್ರೋತ್ಸವ ಕೇವಲ ಆಲಯಶುದ್ಧಿ, ಪುಣ್ಯಾಹವಾಚನದಂತಹ ಕಾರ್ಯಕ್ರಮಗಳು ಮಾತ್ರ ಅಲ್ಲ. ಸಂಪ್ರೋಕ್ಷಣೆಗಿಂತ ಭಿನ್ನವಾದ ಕ್ರಿಯಾಕಲಾಪದಿಂದ ಕೂಡಿರುವುದೇ ಈ ಪವಿತ್ರೋತ್ಸವ.ಪವಿತ್ರೋತ್ಸವಗಳು ತಿರುಮಲೆಯಲ್ಲಿ 15-16 ನೇ ಶತಮಾನಗಳಿಂದ ನಡೆಯುತ್ತಿದ್ದಂತೆ ದಾಖಲಾಗಿದೆ. ಮಧ್ಯದಲ್ಲಿ ನಿಂತುಹೋದ ಈ ಉತ್ಸವಗಳನ್ನು 1982 ರಿಂದ ದೇವಸ್ಥಾನವು ಮುಂದೆ ಬಂದು ನಿರ್ವಹಿಸುತ್ತಿದೆ. ಇದು ಮೂರು ದಿನಗಳ ಕಾರ್ಯಕ್ರಮ.

ಪ್ರತಿವರ್ಷವು ಶ್ರಾವಣ ಶುದ್ಧ ದಶಮಿ, ಏಕಾದಶಿ, ದ್ವಾದಶಿ ದಿನಗಳಲ್ಲಿ ಕಲ್ಯಾಣ ಮಂಟಪದಲ್ಲಿ ನಡೆಯುತ್ತದೆ.ಮೊದಲನೆ ದಿನ ದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿಗೆ ಅಭಿಷೇಕಗಳು ನಡೆಯುತ್ತವೆ, ಎರಡನೆಯ ದಿನ ಪವಿತ್ರ ಸಮರ್ಪಣೆ ನಡೆದು ಮೂರನೆಯದಿನ ಪವಿತ್ರದ ಪ್ರತಿಷ್ಠೆ. ಹೋಮಗಳು,ಪೂರ್ಣಾಹುತಿ. ಮೂರು ದಿನಗಳು ಸಾಯಂಕಾಲ ಪೂಜೆಯ ನಂತರ ಶ್ರೀಮಲೆಯಪ್ಪ ಸ್ವಾಮಿಯವರಿಗೆ ಮೆರವಣಿಗೆ ನಡೆಯುತ್ತದೆ.

ಆರ್ಜಿತ ಸೇವಾ ಶುಲ್ಕ ಸಲ್ಲಿಸಿದ ಭಕ್ತರು ಈ ಸೇವೆಯಲ್ಲಿ ಪಾಲ್ಗೊಳ್ಳಬಹುದು. ಈ ಸೇವೆಯಲ್ಲಿ ಪಾಲ್ಗೊಂಡ ಭಕ್ತರಿಗೆ ಅವರ ವಂಶದಲ್ಲಿ ಯಾರಾದರೂ, ಗೊತ್ತಾಗಿ, ಗೊತ್ತಿಲ್ಲದೆ ಮಾಡಿದ ದೇವತಾಪರಾಧಗಳೆಲ್ಲ ತೊಲಗಿಹೋಗುತ್ತದೆ. ಆದರಿಂದ ಸುಖ ಶಾಂತಿ ಲಭಿಸುತ್ತದೆ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ಎಂದು ವೇದಗಳು ಹೇಳುವಂತೆ ಪಶ್ಚಿಮಾಭಿಮುಖವಾಗಿ ಶ್ರೀಮುಖವನ್ನು ಶ್ರೀವೇಂಕಟಾಚಲಪತಿಗೆ ಅಭಿಮುಖವೆನ್ನುವಂತೆ ಶ್ರೀಪ್ರತಿಷ್ಠೆಯನ್ನು ಮಾಡಿಸಿದನು. ಆ ಸ್ವಾಮಿ ಚಿರಕಾಲ ಸ್ಥಾಯಿಯಾಗಿರುವುದರಿಂದಲೇ ಭೂಮಿ ಮೇಲೆದ್ದು (ಎದ್ದು) ಸರೋವರದ ದಂಡೆಯ ಮೇಲಿರುಲು ಗುರುತಿಸಿ, ಅವರು ಸುವರ್ಣಹಸ್ತರಾಗಿರುವುದರಿಂದ (ಕ್ಷತ್ರಿಯರು) ವಿಶೇಷವಾದ ಅಭಿಮಾನವೇರ್ಪಡಲು ಅವರನ್ನು ಉನ್ನತ ಸ್ಥಳದಲ್ಲಿ ವಿಜಯ ಮಾಡಿಸಬೇಕೆಂದು ಚಿಂತಿಸಿ, ಚಾಲನೆಯನ್ನು ನೀಡಿ, ಪೂರ್ವ ದಿಕ್ಕಿನಲ್ಲಿಯೇ ಗೋಪುರ ಮಂಟಪಾದಿಗಳೊಂದಿಗೆ ಸರೋವರ ನಿರ್ಮಿಸಿ ಶ್ರೀಪ್ರತಿಷ್ಠೆ ಮಾಡಿಸಿ, ಶ್ರೀಕುಲಶೇಖರ ಪೆರುಮಾಳ್ ತಿರುಮಲೆ ಬೆಟ್ಟವೇ ಸೂಕ್ತವೆಂದು ಪರಮ ಪ್ರಬುದ್ಧವೆಂದು ಅರುಹಿ 'ಊನೇಲುಶ್ವೆಲಂ' ಎಂಬ ತಿರುಮುಳಿಯನ್ನು (ಗೀತೆಯನ್ನು) ಅನುಸಂಧಾನ ಮಾಡಬೇಕೆಂದು ತಮ್ಮ (ಕ್ಷತ್ರಿಯ) ವರ್ಣವೇ ಏಳಿಗೆಯಾಗಲೆಂದು ಗೋಪುರ ಪ್ರಾಕಾರ ಮಂಟಪಗಳೊಂದಿಗೆ ಗುಡಿಕಟ್ಟಿಸಿ ಕೋದಂಡರಾಮನ ಸಮೀಪದಲ್ಲಿ ತಿರುಮಲೆ ಬೆಟ್ಟವನ್ನು ಶ್ರೀವೇಂಕಟಾಚಲ ಪತಿಯ ಮಂಗಳಶಾಸನವನ್ನು ಮಾಡಿಕೊಳ್ಳುವಂತೆ ಪಡಿಮಟಿ ದಿಕ್ಕಿನಲ್ಲೇ ಶ್ರೀ ಮುಖಮಂಡಲ ಇರುವಂತೆ ಶ್ರೀ ಪ್ರತಿಷ್ಠೆ ಮಾಡಿಸಿ ಶ್ರೀಗೋವಿಂದರಾಜಸ್ವಾಮಿ ದಿವ್ಯೈಶ್ವರ್ಯಗಳಾಗಿ ದಿವ್ಯ ಮಹೋತ್ಸವಗಳಿಗಾಗಿ ಅನುರೂಪವಾದ ಬಲಿಹರಣ ಬೀದಿಯಲ್ಲಿ ಶ್ರೀ ಬೀದಿಯನ್ನು ವಲಯಾಕಾರವಾಗಿ ಮಾಡಿ ಭಗವದ್ರಾಮಾನುಜರ ಸನ್ನಿಧಿಯಲ್ಲಿ ಆಗಿದ್ದ ಅನಂತನ (ಆದಿಶೇಷನನ್ನು) ಕೋಪಶಮನವಾಗುವಂತೆ ಒಂದು ದಿವ್ಯ ನಗರವನ್ನು ಗರುಡ ವ್ಯೂಹಾಕಾರದಲ್ಲಿ ನಿರ್ಮಿಸಿ ಮರ್ಯಾದ ಸ್ಥಳಕ್ಕಾಗಿ ಒಳಗಿರುವ ದೊಡ್ಡ ರಾಜಬೀದಿಯನ್ನು ನಿರ್ಮಿಸಿದ್ದಾನೆ (ರಂಗಭೂಪಾಲನು).

**ನಗರಸ್ಯ ತು ವಾಯುವ್ಯೇ ದಿಕ್ಪ್ರದೇಶೇ ಸಮಸ್ಥಲೇ**
**ಪುಣ್ಯವೀಥಿಂ ಪ್ರಕುರ್ವೀತ ಪ್ರಜಾನಾಮಭಿವೃದ್ಧಯೇ**

(ನಗರದ ವಾಯುವ್ಯ ದಿಗ್ಭಾಗದಲ್ಲಿ ಸಮತಲವಾಗಿದ್ದು ಪ್ರಜಾಭಿವೃದ್ಧಿಗಾಗಿ ವಿಪಣವೀಧಿ (ಅಂಗಡಿಬೀದಿ) ನಿರ್ಮಿಸಿದನು)

ಅಂತೆಯೇ ದಿವ್ಯನಗರದ ವಾಯುವ್ಯ ದಿಕ್ಕಿನಲ್ಲಿ ಸರ್ವಜನ ಅಭ್ಯುದಯಕ್ಕಾಗಿ ಅನಕೂಲವಾಗುವಂತೆ ಅಂಗಡಿ ಬೀದಿಯನ್ನು ನಿರ್ಮಿಸಿ ಇವರ ಕಾಲಕ್ಕೂ ಮುಂಚಿತವಾಗಿಯೇ ನರಪತಿಯನ್ನುವವನಾಳ್ವಿಕೆಯಲ್ಲಿ ರಾಜ ಮಹಾರಾಜರುಗಳಿಗೆ ತಿರುಪತಿ ತಿರುಮಲೆ ಸ್ಥಳಾಭಿಮಾನಿಗಳಾದ ಜಿಯ್ಯರು,



ಶ್ರೀವೈಷ್ಣವರು, ಆಚಾರ್ಯಪುರುಷರು ವೈಖಾಸನರೆಲ್ಲರನ್ನು ಸ್ವಸ್ಥಳಗಳನ್ನು ಬಿಟ್ಟು, ಮರುಪತಿರಿರಲು ಆಗ ಕಾಳಹಸ್ತಿಯ ಶೈವರು ತಿರುಪತಿಗೆ ಬಂದು ದೇಶಾಧಿಪತಿಯೊಂದಿಗೆ ಈ ತೀರ್ಥ ಕಪಿಲೇಶ್ವರ ತೀರ್ಥವೆಂದೂ ಪುರಾಣಗಳಲ್ಲಿರುವುದೆಂದು ಕಪಿಲೇಶ್ವರನು ತೀರ್ಥರಾಜು ಎಂದೂ ಪ್ರಸಿದ್ಧವಾಗಿರುವುದೆಂದೂ, ಇದು ಶೈವ ತೀರ್ಥವೆಂದೂ ತಕರಾರು ಮಾಡಿದಾಗ ನಾರಾಯಣಯ್ಯಂಗಾರರೆಂಬ ಒಬ್ಬರು ಏಕಾಂಗಿಯಾಗಿ ಸ್ಥಾನಾಭಿಮಾನದಿಂದೊಡಗೂಡಿದವರಾಗಿ ಅದನ್ನು ಹೊರಹಾಕಿ, ರಾಜಸ್ಥಾನದ ಕುರಿತು ಕ್ಷೇತ್ರ ಮಹಾತ್ಮೆಯ ವಚನಗಳನ್ನು ಉಚ್ಚರಿಸಿ ವಿಸ್ತಾರವಾಗಿ ರಾಜ ಸನ್ನಿಧಾನದಲ್ಲಿ ಅದನ್ನುಪದೇಶಿಸಿ ಈ ತೀರ್ಥವು ವಿಷ್ಣುತೀರ್ಥವೆಂದೂ ನಿರೂಪಿಸಲು ಶೈವಜನರನ್ನೂ ಶಿಕ್ಷಿಸಿ, ಬಡಿದೋಡಿಸಿ ನಾಲ್ಕು ದಿಕ್ಕುಗಳಲ್ಲಿ ಚಕ್ರಶಿಲೆಗಳನ್ನು ನೆಟ್ಟು ಕಪಿಲೇಶ್ವರ ಸನ್ನಿಧಾನದಲ್ಲಿ ಚಕ್ರಶಿಲೆಯನ್ನು ನೆಟ್ಟು ಭವಿಷತ್ಕಾಲದಲ್ಲಿಯೂ ಸಹ ಈ ರೀತಿಯ ಉಪದ್ರವ ಉಂಟಾಗದಿರಲೆಂದು ವಿಷ್ಣುವನ್ನು, ವಿಷ್ಣು ಭಕ್ತರನ್ನು ಪ್ರತಿಷ್ಠಾಪನೆ ಮಾಡಲೆಂದು ನಿಶ್ಚಯಿಸಿ ತೊಂಡಮಾನ್ ಚಕ್ರವರ್ತಿ ಶ್ರೀವೇಂಕಟಾಚಲಯಾತ್ರೆ ಮಾಡಿದ ಮಾರ್ಗದಲ್ಲಿದ್ದ ಗುಹೇಯ ಮಧ್ಯದಲ್ಲಿ ಪ್ರತಿಭಟ ನಿರಸನ ಸಮರ್ಥರಾದ ಸುಂದರ ನರಸಿಂಹ ಸ್ವಾಮಿಗೆ ಅವರ ಸಮೀಪದಲ್ಲಿ.....

(ಮುಂದುವರೆಯುತ್ತದೆ)

**ಜುಲೈ ತಿಂಗಳ ರಸಪ್ರಶ್ನೆಯ ಉತ್ತರಗಳು**

01. ತುಂಬೆ ಹೂ
02. ಋಕ್,ಯಜು, ಸಾಮ ಹಾಗೂ ಅಥರ್ವ
03. ಮಕ್ತರು
04. ದಾಸರ ತೊಟ್ಟಿಲು
05. ವ್ಯಾಸಮಹಾಭಾರತದ ವನಪರ್ವ ದ್ರೌಪದೀಹರಣ ಪರ್ವದಲ್ಲಿ
06. ವಿಷ್ಣು ಪತ್ನಿ ಪದ್ಮಾವತಿ ದೇವಿ
07. ಶ್ರೀ ಲಕ್ಷ್ಮೀ
08. ಗುರುಪೂರ್ಣಿಮೆ
09. ಚಂದ್ರಪುಷ್ಕರಿಣಿ
10. ಶ್ರೀವೇಂಕಟೇಶ್ವರ ಸ್ವಾಮಿಯನ್ನು
11. ಅಂದಿಕ್ಕಾಪ್ಪು
12. ಕಂದಾಡೈ ರಾಮಾನುಜ ಅಯ್ಯಂಗಾರರು
13. ಹನುಮಂತ ದೇವರು
14. ಪರಬ್ರಹ್ಮ
15. ಸುರಂಗದಿಂದ







ಪ್ರತಿ ದಿನ ಬೆಳಗ್ಗೆ ಸಹಸ್ರ ನಾಮಾರ್ಚನೆ ನಡೆದ ನಂತರ ಗರ್ಭಾಲಯದಲ್ಲಿ ಶ್ರೀ ಸ್ವಾಮಿಗೆ ಇತರ ಮೂರ್ತಿಗಳಿಗೆ ನಿವೇದನೆ ನಡೆಯುತ್ತದೆ. ಲಾಡುಗಳು, ವಡೆಗಳು, ದಧ್ಯೋದನ, ಪುಳಿಯೋಗರೆ, ಪೊಂಗಲ್ ಇತ್ಯಾದಿಗಳನ್ನು ಅರ್ಪಿಸುತ್ತಾರೆ. ಮೊದಲ ನಿವೇದನೆಯನ್ನು (ನೈವೇದ್ಯ) ಮೊದಲನೆ ಗಂಟೆ ಎನ್ನುತ್ತಾರೆ.

ಮಧ್ಯಾಹ್ನ ನಡೆಯುವ ನೈವೇದ್ಯವನ್ನು - ಎರಡನೆ ಗಂಟೆ ಎನ್ನುತ್ತಾರೆ. ರಾತ್ರಿ ನಡೆಯುವ ನೈವೇದ್ಯವನ್ನು-ಮೂರನೆ ಗಂಟೆ ಅಥವಾ ರಾತ್ರಿ ಗಂಟೆ ಎನ್ನುತ್ತಾರೆ.

ಇನ್ನು ರಾತ್ರಿ ಏಕಾಂತ ಸೇವೆಗೆ ಮುಂಚೆ "ತಿರುವೀಸಂ" ಗಂಟೆ ಎಂಬ ಸಕ್ಕರೆ ಪೊಂಗಲ್ ನೈವೇದ್ಯವನ್ನು ಸ್ವಾಮಿಗೆ ಅರ್ಪಿಸುತ್ತಾರೆ. ನಂತರ ಅದನ್ನು ಸನ್ನಿಧಿ ಭಾಷ್ಯಕಾರರು ಸ್ವೀಕರಿಸುತ್ತಾರೆ. ಈ ನಿವೇದನೆ ಎಲ್ಲ ಏಕಾಂತವಾಗಿ ಅರ್ಚಕರು ಮಾತ್ರ ನಿರ್ವಹಿಸುತ್ತಾರೆ.



# ತಿರುಮಲೆ ಬೆಟ್ಟಗಳ ನೈಜ ಪರಿಸರ ವಿಜ್ಞಾನ

– ಡಾ॥ ಹರಿಹರ ಶ್ರೀನಿವಾಸರಾವ್
91104 89871









ಪರಿಸರ ಎಂಬುದು ಇಂದಿನ ದಿನಗಳಲ್ಲಿ ಅತೀ ಮಹತ್ವದ ಚರ್ಚೆಯ ವಿಷಯವಾಗಿದೆ. ಆದರೆ, ಭಾರತದ ಪುರಾತನ ಸಂಸ್ಕೃತಿಯಲ್ಲಿ, ಪ್ರಕೃತಿಯ ಪ್ರತಿಯೊಂದು ಅಂಶಕ್ಕೂ ದೈವತ್ವ ನೀಡಿರುವುದು ಇಂದಿನ ಪರಿಸರ ಶಾಸ್ತ್ರಕ್ಕೂ ಬೆನ್ನು ಹತ್ತುವ ತತ್ವವನ್ನು ಕಲಿಸಿತು. ತಿರುಮಲೆ ವೆಂಕಟಾದ್ರಿ ಪರ್ವತದ ಶಿಖರದಲ್ಲಿ ಸ್ಥಾನ ಪಡೆದಿರುವ ಶ್ರೀವೆಂಕಟೇಶ್ವರ ದೇವಾಲಯವು ನಶ್ವರ ಜಗತ್ತಿನಲ್ಲಿ ಶಾಶ್ವತವಾದ ಪರಿಸಿರ ಸಿದ್ಧಾಂತಗಳನ್ನು ಶಬ್ದದ ಮೂಲಕ ಪ್ರಚುರ ಪಡಿಸುತ್ತದೆ. ಈ ಸಿದ್ಧಾಂತಗಳು ಅತ್ಯಂತ ದಿವ್ಯವಾದ ಸುಪ್ರಭಾತ ಸ್ತೋತ್ರದ ಮೂಲಕ ಪ್ರತಿದಿನವೂ ಧ್ವನಿಸುತ್ತದೆ. ಈ ಪ್ರಬಂಧದಲ್ಲಿ ತಿರುಮಲೆ ಬೆಟ್ಟಗಳ ನೈಜ ಪರಿಸರವನ್ನು ವೈಜ್ಞಾನಿಕ ದೃಷ್ಟಿ ಕೋಣದಿಂದ ಮತ್ತು ಶ್ರೀವೆಂಕಟೇಶ ಸುಪ್ರಭಾತದಲ್ಲಿ ಬಂದಿರುವ ಪಾಠಗಳನ್ನು ಬಳಸಿಕೊಂಡು ವಿವರಿಸಲಾಗಿದೆ.

ತಿರುಮಲೆ ಬೆಟ್ಟಗಳ ನೈಜ ಪರಿಸರ ಪರ್ವತ ಶ್ರೇಣಿಗಳು ಮತ್ತು ಜೈವ ವೈವಿಧ್ಯ

ತಿರುಮಲೆ ಬೆಟ್ಟಗಳು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿರುವ ಶೇಷಾಚಲ ಪರ್ವತ ಮಾಲೆಯ ಭಾಗವಾಗಿವೆ. ಇದು ಗರುಡಾದ್ರಿ, ಈಸ್ಟರ್ನ್ ಘಾಟ್ ಪರ್ವತ ಶ್ರೇಣಿಗೆ ಸೇರಿದ್ದು ಏಳು ಶಿಖರಗಳನ್ನೊಳಗೊಂಡಿದೆ (ಸಪ್ತಗಿರಿಗಳು) ಶೇಷಾದ್ರಿ, ನೀಲಾದ್ರಿ, ಗರುಡಾದ್ರಿ, ವೃಷಭಾದ್ರಿ, ನಾರಾಯಣಾದ್ರಿ, ಅಂಜನಾದ್ರಿ, ಮತ್ತು ವೇಂಕಟಾದ್ರಿ. ಈ ಪರ್ವತಗಳು ಅರಣ್ಯ ಸಂಪತ್ತಿನಲ್ಲಿ ಶ್ರೀಮಂತವಾಗಿದ್ದು, ಅನೇಕ ವಿಶಿಷ್ಟ ಪ್ರಭೇದಗಳ ಸಸ್ಯ ಮತ್ತು ಪ್ರಾಣಿಗಳ ನಿವಾಸವಾಗಿದೆ.

**ಜೀವವೈವಿಧ್ಯ:**

**ಸ್ಥಳೀಯ ಸಸ್ಯಗಳು :** ರೆತ, ತಾಮರ, ನೀರಾಳ, ಬಂಡೆಮಲ್ಲಿಗೆ

**ಪ್ರಾಣಿಗಳು:** ಚಿರತೆ, ಕಾಡುಕೋಣ, ಸಿಹಿಮುಣಿಸ, ಮಯೂರ

**ಪಕ್ಷಿಗಳು :** ಪಾರಿವಾಳ, ಪಾಂಡುರ, ಗರುಡ

ಈ ಪ್ರದೇಶವು ಶ್ರೀವೆಂಕಟೇಶ್ವರ ನ್ಯಾಷನಲ್ ಪಾರ್ಕ್‌ನಲ್ಲಿದೆ. ಇದನ್ನು ಬಯೋಸ್ಫಿಯರ್ ರಿಸರ್ವ್ ಆಗಿ ಘೋಷಿಸಲಾಗಿದ್ದು, ಭಾರತೀಯ ಪರಿಸರ ವೈಜ್ಞಾನಿಕ ಸಂಸ್ಥೆಗಳ ಗಮನವನ್ನು ಸೆಳೆದಿದೆ.

## ಜಲ ಮೂಲಗಳು

### ತೀರ್ಥಗಳು :

ಪಾಪವಿನಾಶನಂ ತೀರ್ಥ-ಶ್ರದ್ಧಾವಂತರು ತಮ್ಮ ಪಾಪಕ್ಷಯಕ್ಕಾಗಿ ಸ್ನಾನ ಮಾಡುವ ಸ್ಥಳ

ಆಕಾಶಗಂಗಾ-ಪರ್ವತದ ಮೇಲಿ ನಿಂದ ಹರಿಯುವ ಪ್ರಾಕೃತಿಕ ನದಿಯಂತೆ ಹೊಳೆಯುವ ಜಲಧಾರೆ.

ಚಕ್ರತೀರ್ಥ, ಕುರುಂಗೀ ತೀರ್ಥ, ಕಪಿಲ ತೀರ್ಥ-ಶುದ್ಧನೀರಿನ ಆಧಾರಗಳು.

ಈ ತೀರ್ಥಗಳು ಕೇವಲ ಧಾರ್ಮಿಕ ನಂಬಿಕೆಗೆ ಮಾತ್ರ ಅಲ್ಲ. ಆದರೆ ಪರ್ವತದ ಜಲ ಚಕ್ರವನ್ನು ಸಮರ್ಥವಾಗಿ ನಿಯಂತ್ರಿಸುತ್ತವೆ. ಈ ನೀರಿನ ಮೂಲಗಳು ಬೆಟ್ಟದ ದಡ ಪ್ರದೇಶಗಳ ಉಗಮ ಸ್ಥಾನಗಳಾಗಿ ಕಾರ್ಯ ನಿರ್ವಹಿಸುತ್ತದೆ. ಈ ಮೂಲಕ ಪರ್ವತದ ಅಡಿಯಲ್ಲಿ ಇರುವ ನದಿ ತಂತ್ರದ ನಿರ್ವಹಣೆಗೆ ಸಹಕಾರಿಯಾಗಿವೆ.

### ಪ್ರಕೃತಿ ದೇವಿಗೆ ಪ್ರಣಾಮ :

ಶ್ರೀ ವೆಂಕಟೇಶ ಸುಪ್ರಭಾತವು 25 ಶ್ಲೋಕಗಳ ಸಮೂಹವಾಗಿದೆ. ಇದರಲ್ಲಿ ಪಾಂಚಜನ್ಯ ಧ್ವನಿ,ವಾದ್ಯಗಳು, ನದಿಗಳ ಹರಿವು, ಹಸುಗಳ ಉದಯ, ಗಂಗೆಯ ಚುಟುಕುಗಳು, ನಕ್ಷತ್ರಗಳ ಮೋಡನೆ, ಸುಗಂಧದ ಗಾಳಿ ಮುಂತಾದ ಪರಿಸರ ಸಂಬಂಧಿ ತತ್ವಗಳ ಉದಾಹರಣೆ ಇದೆ.



### ಸವಿತಾ ಮತ್ತು ಸೂರ್ಯೋದಯದ ಪ್ರಾಮುಖ್ಯತೆ

**"ಪಂಚಾನ್ನ ಮತ್ರಗಳ ವಾದ್ಯ
ವಿವಾದ್ಯ ನಾದ್ಯೈಃ
ಸನ್ನಾದಯನ್ ನಪ್ರತಿಭಾತಿ
ಸವಿತಾ"**

ಈ ಶ್ಲೋಕದಲ್ಲಿ ಸವಿತಾ ಎಂದರೆ ಸೂರ್ಯ ಸೂರ್ಯನು ಜೀವವೈವಿಧ್ಯಯವನ್ನು ಉಳಿಸುವ ಮೂಲಶಕ್ತಿ. ಹವಾಮಾನ, ಉಷ್ಣತೆ, ಬೆಳಕು, ಜಲಚಕ್ರ ತಿರುಮಲೆ ಬೆಟ್ಟದ ಮೇಲಿರುವ ಧೂಪ ಉಷ್ಣ ನಿಯಮಿತವಾದುದರಿಂದ, ಇಲ್ಲಿ ನೆಲದ ತಾಪಮಾನ ಬದಲಾಗುತ್ತಿಲ್ಲ. ಈ ಸ್ಥಿರತೆ ಸಸ್ಯಗಳಿಗೆ ಅನುಕೂಲವಾಗಿದೆ.

### ನದಿಗಳ ಧ್ವನಿ ಮತ್ತು ಜಲಧಾರೆಯ ಪ್ರಭಾವ

**"ಅಕ್ಷಃ ಸು ದೇವಿ ನವಮಂಜುಳ ಗಂಗಾ";**

ಇಲ್ಲಿ ಗಂಗಾ ಎಂದರೆ ಪವಿತ್ರ ನದಿಯ ರೂಪಕ, ಆದರೆ ತಿರುಮಲದ ಆಕಾಶಗಂಗಾ ಎಂಬ ನೈಸರ್ಗಿಕ ಧಾರೆಗೂ ಈ ಶ್ಲೋಕ ಅನ್ವಯವಾಗಬಹುದು. ಜಲಧಾರೆಯ ಶಬ್ದವು ಬೆಳಗಿನ ತೇಜಸ್ಸಿಗೆ ಸಹಜ ಸಂಗೀತವನ್ನು ನೀಡುತ್ತದೆ. ಇದು ನೀರಿನ ಶುದ್ಧತೆಯನ್ನು ಅದರ ಹರಿವನ್ನು ಪರ್ವತದ ಜಲ ಸಂಚಯವನ್ನು ಸೂಚಿಸುತ್ತದೆ. ಇದು ನಮ್ಮ ನೀರಿನ ವಾಸ್ತವಿಕ ಸಂರಕ್ಷಣೆಗೆ ಸಂಬಂಧಿಸಿದಂತೆ ಪ್ರಮುಖ ಸಂದೇಶ ನೀಡುತ್ತದೆ. ನದಿ ಹರಿಯಲಿ, ಶುದ್ಧವಾಗಿರಲಿ, ಜೀವಿಗಳಿಗೆ ಉಪಯೋಗವಾಗಲಿ.

### ಗರ್ಭಗೃಹದ ಸುತ್ತಲಿನ ಪ್ರಪಂಚ ಅರಣ್ಯ ಮತ್ತು ಜೈವಿಕ ಶಕ್ತಿಗಳು

**"ಶ್ರೀ ವೇಂಕಟಾದ್ರಿ ಶಿಖರಾವಿರ ದಿವ್ಯ
ಮೂರ್ತೇ!
ಶ್ರೀವೇಂಕಟೇಶ! ತವ ಸುಪ್ರಭಾತಂ॥**

ವೇಂಕಟಾದ್ರಿ ಶಿಖರ ಎಂಬುದು ಒಂದು ಪವಿತ್ರ ಶಿಖರ ಮಾತ್ರವಲ್ಲ, ಅದು ಅಲ್ಲಿಯ ಪ್ರಕೃತಿ, ಪರ್ವತ, ನಕ್ಷತ್ರ, ಗಾಳಿ, ಮಳೆ, ತಂಪು ಮತ್ತು ಹಸಿರಿನ ಸಣ್ಣ ಸಣ್ಣ ಚಲನೆಗಳ ಸಂಗ್ರಹವಾಗಿದೆ. ಸೂರ್ಯೋದಯದ ನಂತರ ಬೆಳಕಿನಲ್ಲಿ ಪ್ರವೇಶಿಸುತ್ತದೆ. ಸಣ್ಣ ಪಕ್ಷಿಗಳು ಹಾಡತೊಡಗುತ್ತವೆ. ಈ ಪ್ರಕ್ರಿಯೆ ಸರ್ಕ್ಯಾಡಿಯನ್ ರಿದಮ್ ಅಂತಹ ಜೀವಿಯ ಜೀವನ ಚಕ್ರಕ್ಕೂ ಸಂಬಂಧ ಬೆಳೆಸುತ್ತದಲ್ಲದೆ ಅದರ ವಿಸ್ತಾರಣೆಗೂ ಕಾರಣವಾಗುತ್ತದೆ.

### ವನಜೀವಿಗಳ ಪ್ರಭಾತ ಕ್ರಿಯೆಗಳು

**"ಉತ್ತಿಷ್ಠೋತ್ತಿಷ್ಠ ಗೋವಿಂದ
ಉತ್ತಿಷ್ಠ ಗರುಡಧ್ವಜ
ಉತ್ತಿಷ್ಠ ಕಮಲಾ ಕಾಂತ
ತ್ರೈಲೋಕ್ಯಂ ಮಂಗಳಂ ಕುರು"**

ಈ ಶ್ಲೋಕದ ಮೂಲಕ ದೇವರನ್ನು ಮಾತ್ರ ಕೇಳಲಾಗುತ್ತಿಲ್ಲ. ಅದು ಒಂದು ಸ್ಮರಣೀಯ ತತ್ವ- "ಎಲ್ಲರಿಗೂ ಮುಂಗಡ ವಾಗಿ ಮಂಗಳವಾಗಲಿ" ಎನ್ನುವುದು ಇದರ ಆಂತರ್ಯ. ಇದು ವನ್ಯಜೀವಿಗಳಿಗೆ, ಮನುಷ್ಯರಿಗೆ, ಜಲಚರಗಳಿಗೆ, ಜೈವಿಕ ಸಂಸ್ಕೃತಿಗೆ ಕೂಡಾ ನೇರವಾಗಿ ಅನ್ವಯಿಸುತ್ತದೆ. ಏಕೆಂದರೆ ಇದು ಏಕೋಲಾಜಿಕಲ್ ಸಮತೋಲನವನ್ನು ಸೂಚಿಸುತ್ತದೆ. ಎಲ್ಲ ಜೀವಿಗಳು ಸಮಾನವಾಗಿ ಬೆಳಗಲಿ,. ಅರ್ಥಾತ್ ಪರಸ್ಪರ ಅವಲಂಬನೆ ಎಷ್ಟು ಮುಖ್ಯ ಎಂಬುದಕ್ಕೆ ಇದು ಒಂದು ಉದಾಹರಣೆ ಎನಿಸಿದೆ.

ಇಂದಿನ ಪರಿಸರ ಚಿಂತನೆಯಲ್ಲಿ ಸುಪ್ರಭಾತದ ಅನ್ವಯತೆ

### ಸ್ಥಿರಾಭಿವೃದ್ಧಿಯ ತತ್ವಗಳು

ಸುಪ್ರಭಾತ ಪಠಣವು : ಜಾಗೃತಿ ನೀಡುತ್ತದೆ ಪವಿತ್ರ ಚಿಂತನೆ ಮೂಲಕ ದಿನದ ಪ್ರಾರಂಭ ಪ್ರಕೃತಿಯ ಶಕ್ತಿಯ ಅರಿವು ಮೂಡಿಸುತ್ತದೆ. ಸೂರ್ಯ ಗಂಗಾ, ವೃಕ್ಷಗಳು ಜಲ ಸಂಪತ್ತಿನ ಪವಿತ್ರತೆಯನ್ನು ಒತ್ತಿಹೇಳುತ್ತದೆ ಧ್ವನಿ, ವಾದ್ಯಗಳು, ಶಬ್ದಗಳ ಸಹಜ ಸಂವೇದನೆಯನ್ನು ತಿಳಿಸುತ್ತದೆ. ಇದು ಮನುಷ್ಯನಿಗೆ ತನ್ನ ಪರಿಸರದ ಜೊತೆ ಹೊಸ ಸುಬಂಧ ಕಟ್ಟಿ ಕೊಳ್ಳುವಂತೆ ಮಾಡುತ್ತದೆ. ನಾವು ಪರಿಸರವನ್ನು ಸದುಪಯೋಗಪಡಿಸಿಕೊಳ್ಳುತ್ತಲೇ, ಆ ತಾಯಿಯೊಂದಿಗೆ ಸಹಜ ಜೀವನ ನಡೆಸಬೇಕೆಂಬ ಸಂದೇಶ ಸಾರುತ್ತದೆ.

### ಪ್ಲಾಸ್ಟಿಕ್ ಮುಕ್ತ ತಿರುಮಲೆ :

ಇಂದಿನ ತಿರುಮಲೆಯಲ್ಲಿ ಪ್ಲಾಸ್ಟಿಕ್ ನಿಷೇಧ, ನೀರಿನ ಶುದ್ಧೀಕರಣ ಘಟಕಗಳು, ಅರಣ್ಯ ಸಂರಕ್ಷಣಾ ಶಿಬಿರಗಳು, ಉದ್ಯಾನವನಗಳು ಇವುಗಳು ಪರಿಸರದ ಪಾಲನೆಯ ನಿದರ್ಶನಗಳಾಗಿವೆ. ಈ ಕಾರ್ಯಗಳು ಸುಪ್ರಭಾತದ ಆತ್ಮವನ್ನು ತಾತ್ವಿಕವಾಗಿ ವಿಸ್ತಾರಗೊಳಿಸುತ್ತದೆ.

### ಜೀವ ವೈವಿಧ್ಯ ಸಂರಕ್ಷಣೆ

ತಿರುಮಲದ ಪಾದದ ಹತ್ತಿರದ ಅರಣ್ಯದಲ್ಲಿ ಹೊಸ ಪ್ರಭೇದಗಳ ಸಸ್ಯಗಳ ಪತ್ತೆಯಾಗಿವೆ. ಭಾರತ ಸರಕಾರದ ವನ್ಯಜೀವಿ ಸಂರಕ್ಷಣಾ ಕಾರ್ಯಕ್ರಮದಲ್ಲಿ ತಿರುಮಲೆಯು ಒಂದು ಭಾಗವೇ ಆಗಿದೆ. "ಸುಪ್ರಭಾತದ ತ್ರೈಲೋಕ್ಯಂ ಮಂಗಳಂಕುರು" ಎಂಬ ಮಂತ್ರದಲ್ಲಿ ಈ ಜೀವಜಾಲವು ಮೂರು ಲೋಕಗಳ ಉಳಿವಿಗೆ ಉಪಸಂಹಾರವಾಗಿ ಕಂಡು ಬರುತ್ತದೆ.

### ಉಪಸಂಹಾರ

ತಿರುಮಲೆ ಬೆಟ್ಟಗಳು ಕೇವಲ ಅತ್ಯಂತ ಪವಿತ್ರ ಧಾರ್ಮಿಕ ತೀರ್ಥಯಾತ್ರೆಯ ಮಹತ್ವದ ಸ್ಥಳ ಮಾತ್ರವೇ ಅಲ್ಲ. ಅವು ಭಾರತೀಯ ಪರಿಸರ ಸಂಸ್ಕೃತಿಯ ಜೀವಂತ ಉದಾಹರಣೆ. ಶ್ರೀ ವೆಂಕಟೇಶ ಸುಪ್ರಭಾತದ ಪಾಠಗಳು ದೇವ ನಾಮಜಪದ ಪಾಠಗಳಷ್ಟೇ ಅಲ್ಲ ಅವು ಪ್ರಕೃತಿಯ ಪ್ರತಿಯೊಂದು ಚಲನೆಯ, ಶಕ್ತಿಯ, ಶುದ್ಧತೆಯ ಸ್ಮರಣೆ.

ಇವು ಇಂದಿನ ಪರಿಸರ ಬಿಕ್ಕಟ್ಟಿನಲ್ಲಿ ಮನುಷ್ಯನಿಗೆ ನೈತಿಕ ದಾರಿ ದೀಪವಾಗಿವೆ. ಉಳಿಸಿಕೊಳ್ಳುವ ಪ್ರಮುಖ ಸಂದೇಶವನ್ನು ಸಾರುತ್ತಿದೆ. ಇದನ್ನು ನಾವು ನಿತ್ಯ ಪಾಠವಾಗಿ ನಿತ್ಯ ನಡೆತೆಯಾಗಿ ರೂಪಿಸಬೇಕಾದುದು ಇಂದಿನ ಕಾಲದ ತುರ್ತು ಅಗತ್ಯ. ಸುಪ್ರಭಾತದೊಂದಿಗೆ ನಾವೆಲ್ಲರೂ ಪ್ರಕೃತಿಗೆ ನಮನ ಸಲ್ಲಿಸಿ, ಪರಿಸರಪರ ಬದುಕನ್ನು ಉಳಿಸಿ, ಬೆಳಸೋಣ.

# ಗೊಂಬೆ ಹಬ್ಬ



**- ಶ್ರೀಮತಿ. ಎಸ್. ಸುರೇಖ ರಾಜು**

ಮೈಸೂರು ದಸರಾ ಹಬ್ಬದಲ್ಲಿ ಮನೆಗೆ ಮತ್ತಷ್ಟು ಮೆರಗು ನೀಡುವ ಗೊಂಬೆ ಅಲಂಕಾರ ಕಣ್ತುಂಬಿಕೊಳ್ಳುವುದೇ ಒಂದು ರೀತಿ ಚಂದ. ಗೊಂಬೆ ಹಬ್ಬ ಮೊದಲು ಆರಂಭವಾದದ್ದು ಮೈಸೂರಿನಲ್ಲಿ, ದಸರಾ ಹಬ್ಬದಲ್ಲಿ ಮನೆಗಳಲ್ಲಿ ಗೊಂಬೆಗಳನ್ನು ಕೂರಿಸುವ ಪದ್ಧತಿಯು ಮೈಸೂರು ಪ್ರಾಂತ್ಯದಲ್ಲಿ ಮೊಟ್ಟಮೊದಲಿಗೆ ಆರಂಭವಾಯಿತು ಎನ್ನಲಾಗುತ್ತದೆ.

ಮೈಸೂರು ದಸರಾ ಎಂದು ಜಗತ್ಪ್ರಸಿದ್ಧಿ ಪಡೆದಿರುವ ಆಚರಣೆ ಮೈಸೂರು ಅರಮನೆಯಲ್ಲಿ ನಡೆದರೆ ಪ್ರಜೆಗಳೆಲ್ಲರ ಮನೆಯಲ್ಲಿ ಹಬ್ಬದ ಸಂಭ್ರಮವಾಗಿ ಪಟ್ಟದ ಗೊಂಬೆಗಳನ್ನು ಇಟ್ಟು ಪೂಜಿಸುವ ಪದ್ಧತಿ ಬೆಳೆದುಕೊಂಡು ಬಂತು ಎಂಬ ಮಾತಿದೆ.

ನವರಾತ್ರಿಯಲ್ಲಿ ಪ್ರಮುಖ ಆಕರ್ಷಣಿಯ ದಸರಾ ಗೊಂಬೆ. ಇದು ದಕ್ಷಿಣ ಭಾರತದಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡಿನಲ್ಲಿ ಜನಪ್ರಿಯ. ಕನ್ನಡದಲ್ಲಿ ಇದನ್ನು ಗೊಂಬೆ ಹಬ್ಬ ಎಂದು ಕರೆಯುತ್ತಾರೆ.

ನವದುರ್ಗೆಯರನ್ನು 9 ದಿನಗಳ ಕಾಲ ಪೂಜಿಸುವ ನವರಾತ್ರಿ ಹಬ್ಬ ಹೆಂಗಳೆಯರ ಪಾಲಿಗೆ ವಿಶೇಷ. ಪ್ರತಿದಿನ ಬೆಳಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ಶುಭ್ರ ಉಡುಗೆ ಧರಿಸಿ ದೇವರ ಪೂಜೆಗೆ ಸಿದ್ಧವಾಗುವುದು ದೇವಿಯನ್ನು ಅಲಂಕಾರ ಮಾಡಿ ಪೂಜೆ ಮಾಡುವುದು ದೇವಿಗೆ ನೈವೇದ್ಯ ಇಡುವುದು ಸಾಯಂಕಾಲ ಮುತ್ತೈದೆ, ಮಕ್ಕಳನ್ನು ಮನೆಗೆ ಕರೆದು ಅರಿಶಿನ - ಕುಂಕುಮ ಬಾಗಿನ, ತಿನಿಸು ಕೊಡುವುದು ಹೀಗೆ ಶಾಸ್ತ್ರ ಸಂಪ್ರದಾಯಗಳು 9 ದಿನಗಳ ಕಾಲ ನೆರವೇರುತ್ತದೆ.

**ಕರ್ನಾಟಕದ ದಸರಾ ಗೊಂಬೆ ಹಬ್ಬ:**

ಕರ್ನಾಟಕದಲ್ಲಿ ದಸರಾ ಗೊಂಬೆ ಹಬ್ಬವನ್ನು ಪದ್ಧತಿಯಂತೆ ಜೋಡಿಸಲಾದ ವಿವಿಧ ಗೊಂಬೆಗಳು ಮತ್ತು ಪ್ರತಿಮೆಗಳ ಪ್ರದರ್ಶನದ ಮೂಲಕ ಆಚರಿಸಲಾಗುತ್ತದೆ.

ಗೊಂಬೆಗಳನ್ನು ಬೆಸ ಸಂಖ್ಯೆಯ ಮೆಟ್ಟಿಲುಗಳು ಅಥವಾ ಹಂತಗಳನ್ನು (ಸಾಮಾನ್ಯವಾಗಿ 3,5,7,9 ಅಥವಾ 11) ಈ ರೀತಿ ಮೆಟ್ಟಿಲುಗಳ ವೇದಿಕೆಯ ಮೇಲೆ ಜೋಡಿಸಿ ಪೂಜಿಸಲಾಗುತ್ತದೆ. ಮೇಲಿನ ಮೊದಲ ಮೂರು ಮೆಟ್ಟಿಲುಗಳು ದೇವರು ಮತ್ತು ದೇವತೆಗಳ ಪ್ರತಿಮೆಗಳು ಅಥವಾ ವಿಗ್ರಹಗಳಿಗೆ ಸಮರ್ಪಿತವಾಗಿ ದೇವರುಗಳೆಂದರೆ ದಶಾವತಾರಗಳು, ತಿರುಮಲೆಯ ವಾಹನದ ಸೇವೆಯ ಗೊಂಬೆಗಳು, ರಾಮನ ಪಟ್ಟಾಭಿಷೇಕದ ಗೊಂಬೆ, ಅಷ್ಟಲಕ್ಷ್ಮಿಯರ ಗೊಂಬೆ, ಕೃಷ್ಣಾವತಾರದ ಗೊಂಬೆ, ಪಾರ್ವತಿ ಕಲ್ಯಾಣ, ಗಣೇಶ ಹಾಗೂ ಸುಬ್ರಹ್ಮಣ್ಯರ ಗೊಂಬೆ, ಹಾಗೂ ತಿರುಮಲೆ ಬೆಟ್ಟದ ದೃಶ್ಯ ಹೀಗೆ ಅನೇಕ ದೇವತೆಗಳ ಗೊಂಬೆಯನ್ನು ಪ್ರದರ್ಶಿಸುತ್ತಾರೆ.

ಮುಂದಿನ ಮೂರು ಹಂತಗಳನ್ನು ಮಹಾನ್ ಸಂತರು ಅಂದರೆ ಮಹಾತ್ಮಗಾಂಧಿ, ಸುಭಾಸ್‌ಚಂದ್ರಬೋಸ್, ಅಥವಾ ರಾಜರು ಮತ್ತು ರಾಣಿಯರ ಗೊಂಬೆಗಳನ್ನು ಜೋಡಿಸಲಾಗುತ್ತದೆ. ಏಳನೇ ಹಂತದಲ್ಲಿ ಹಿಂದೂ ಹಬ್ಬಗಳು, ಗಣಪತಿ ಹಬ್ಬದ ಗೊಂಬೆ, ಗೌರಿ ಪೂಜೆ, ದೀಪಾವಳಿ ಆಚರಣೆಗಳ ಸಂದರ್ಭಗಳನ್ನು ಪ್ರದರ್ಶಿಸಲು ಮೀಸಲಾಗಿರುತ್ತದೆ. ಎಂಟನೇ ಹಂತವನ್ನು ಉದ್ಯಾನವನ ಅಂಗಡಿ, ತರಕಾರಿ ಮಾರಾಟಗಾರರು ಮುಂತಾದ ದೈನಂದಿನ ಜೀವನದ ದೃಶ್ಯಗಳಿಂದ ಅಲಂಕರಿಸಲಾಗುತ್ತದೆ. 9 ನೇ ಹಂತವು ಪ್ರಾಣಿಗಳ ವಿಕಾಸದ ಬಗ್ಗೆ ಇಡಲಾಗುತ್ತದೆ.

ಪ್ರತಿವರ್ಷ ಜನರು ತಮ್ಮ ಸಂಗ್ರಹಕ್ಕೆ ಹೊಸ ಗೊಂಬೆಗಳ ಗುಂಪನ್ನು ಸೇರಿಸಿಕೊಳ್ಳುತ್ತಾರೆ. ಹೀಗಾಗಿ ಪ್ರತಿ ಮನೆಯಲ್ಲಿಯೂ ಸಂಗ್ರಹವು ಪ್ರತಿವರ್ಷ ಹೆಚ್ಚಾಗುತ್ತದೆ. ಗೊಂಬೆಗಳನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ರವಾನಿಸಲಾಗುತ್ತದೆ. ಹೀಗಾಗಿ ಕೆಲವು ಕುಟುಂಬಗಳು 100 ವರ್ಷಗಳಿಗಿಂತ ಹಳೆಯದಾದ ಗೊಂಬೆಗಳನ್ನು ಹೊಂದಿದೆ.



10 ದಿನಗಳ ಅವಧಿಯಲ್ಲಿ ಜನರು ಸ್ನೇಹಿತರು ಮತ್ತು ಕುಟುಂಬದವರನ್ನು ಆಹ್ವಾನಿಸುತ್ತಾರೆ ಮತ್ತು ಪ್ರತಿ ಕುಟುಂಬದಲ್ಲಿ ಗೊಂಬೆಗಳ ವಿಶಿಷ್ಟ ಪ್ರದರ್ಶನವನ್ನು ನೋಡಿ ಹಾಡನ್ನು ಹಾಡಿ ಆನಂದಿಸುತ್ತಾರೆ. ಪ್ರತಿದಿನ ಗೊಂಬೆಗಳಿಗೆ ನೈವೇದ್ಯ ಅರ್ಪಿಸಲಾಗುತ್ತದೆ. ಇದನ್ನು ಕುಟುಂಬ ಸದಸ್ಯರು ನೆರೆಹೊರೆಯವರು ಮತ್ತು ಅತಿಥಿಗಳಿಗೆ ಪ್ರಸಾದವಾಗಿ ವಿತರಿಸಲಾಗುತ್ತದೆ.

### ಗೊಂಬೆ ಉತ್ಸವ ಆಚರಣೆಯ ಮಹತ್ವ

ಗೊಂಬೆ ಹಬ್ಬವನ್ನು ಸಂಪ್ರದಾಯಗಳಿಗೆ ಬೇರೂಲಿಸುವ ರೀತಿಯಲ್ಲಿ ಅನುಸರಿಸುತ್ತದೆ ಮತ್ತು ಹೊಸ ಪೀಳಿಗೆಗೆ ದೇಶದ ಸಂಸ್ಕೃತಿ ಮತ್ತು ಪುರಾಣಗಳನ್ನು ಪರಿಚಯಿಸುತ್ತದೆ. ದಸರಾ ಹಬ್ಬದ ಸಮಯದಲ್ಲಿ ದೈವಿಕ ಆಶೀರ್ವಾದವನ್ನು ಪಡೆಯಲು ಮತ್ತು ಮಕ್ಕಳನ್ನು ರಂಜಿಸಲು ಇದು ಒಂದು ಮಾರ್ಗವಾಗಿದೆ.

ರಾಮಾಯಣ, ಮಹಾಭಾರತ ಪ್ರಾಚೀನ ಇತಿಹಾಸದ ಕಥೆಗಳನ್ನು ಹೊಸ ಪೀಳಿಗೆಗೆ ನಮ್ಮ ಮಕ್ಕಳಿಗೆ ತಿಳಿಸುವ ಮುಖ್ಯ ಉದ್ದೇಶವನ್ನು ಗೊಂಬೆಗಳ ರೂಪದಲ್ಲಿ ಗೊಂಬೆಗಳನ್ನು ಇಟ್ಟು ಅವರಿಗೆ ಈ ಕಥೆಗಳನ್ನು ತಿಳಿಸುತ್ತಾ ಒಂದು ಸಂಪ್ರದಾಯ ಮೊದಲಿನಿಂದಲು ರೂಢಿಯಲ್ಲಿದೆ.

ಸಾಂಪ್ರದಾಯಿಕ ಗೊಂಬೆ ತಯಾರಿಕೆಯ ಕರಕುಶಲತೆಯು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ದಸರಾ ಹಬ್ಬದ ಸಮಯದಲ್ಲಿ ಗೊಂಬೆಗಳನ್ನು ಇಟ್ಟರೆ ಗೊಂಬೆಗಳ ನಾಡು ಆಗುತ್ತದೆ. ಈ ಹಬ್ಬವು ಮರ ಮತ್ತು ಮಣ್ಣಿನ ಗೊಂಬೆ ತಯಾರಿಕೆಯ ಕರಕುಶಲತೆಯನ್ನು ಜೀವಂತವಾಗಿಡಲು ಪ್ರೋತ್ಸಾಹಿಸುತ್ತದೆ.

ನವರಾತ್ರಿಯ ಮೊದಲ ದಿನದಂದು ಗಣಪತಿಯ ಪೂಜೆಯ ನಂತರ ಸರಸ್ವತಿ, ದುರ್ಗಾ ಮತ್ತು ಲಕ್ಷ್ಮಿ ದೇವತೆಗಳಿಗೆ ಕಲಶ ಅವಾಹನಂ ಎಂಬ ಹಿಂದೂ ಆಚರಣೆಯ ಮೂಲಕ ಸ್ವಾಗತ ಸಮಾರಂಭವನ್ನು ನಡೆಸಲಾಗುತ್ತದೆ. ನವರಾತ್ರಿಗಳಲ್ಲಿ ಸರಸ್ವತಿ ಪೂಜೆಯಲ್ಲಿ, ಸರಸ್ವತಿ ದೇವಿಗೆ ವಿಶೇಷ ಪೂಜೆಗಳನ್ನು ಅರ್ಪಿಸಲಾಗುತ್ತದೆ. ಪೂಜೆಯಲ್ಲಿ ಪುಸ್ತಕಗಳು ಮತ್ತು ಸಂಗೀತ ವಾದ್ಯಗಳನ್ನು ಇರಿಸಿ ಜ್ಞಾನದ ಮೂಲವಾಗಿ ಪೂಜಿಸಲಾಗುತ್ತದೆ. ವಿಜಯದಶಮಿಯ ದಿನ ವಿಜಯದಶಮಿಯನ್ನು ಕೆಲವರು ಅತ್ಯಂತ ಶುಭ ದಿನವೆಂದು ಪರಿಗಣಿಸುತ್ತಾರೆ. ದುರ್ಗೆಯು ಅಸುರ ಮಹಿಷಾಸುರನನ್ನು ಅಂತಿಮವಾಗಿ ನಾಶ ಮಾಡಿದಳು ಎಂದು ಹಿಂದೂಗಳು ನಂಬುವ ದಿನ ಇದು. ಇದನ್ನು ಹೊಸ ಮತ್ತು ಸಮೃದ್ಧ ಆರಂಭದ ಸಂಕೇತವೆಂದು ಪರಿಗಣಿಸಲಾಗಿದೆ. ನಂತರ ವಿಜಯದಶಮಿಯ ಸಂಜೆ ಪ್ರದರ್ಶನದಿಂದ ಒಂದು ಗೊಂಬೆಯನ್ನು ಸಾಂಕೇತಿಕವಾಗಿ ನಿದ್ರಿಸಲಾಗುತ್ತದೆ ಮತ್ತು ಆ ವರ್ಷದ ನವರಾತ್ರಿ ಗೊಂಬೆ ಗೋಲು ಪ್ರದರ್ಶನದ ಅಂತ್ಯವನ್ನು ಗುರುತಿಸಲು ಕಲಸವನ್ನು ಸ್ವಲ್ಪ ಉತ್ತರಕ್ಕೆ ಸರಿಸಲಾಗುತ್ತದೆ.

ಆ ವರ್ಷದ ನವರಾತ್ರಿ ಉತ್ಸವವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ಮತ್ತು ಮುಂದಿನ ವರ್ಷ ಯಶಸ್ವಿಯಾಗುವ ಭರವಸೆಯೊಂದಿಗೆ ದೇವತೆಗಳಿಗೆ ಧನ್ಯವಾದ ಹೇಳಿ ನಮಸ್ಕಾರವನ್ನು ಮಾಡುತ್ತಾರೆ. ನಂತರ ಮೆಟ್ಟಿಲುಗಳನ್ನು ತೆಗೆಯಲಾಗುತ್ತದೆ ಮತ್ತು ಮುಂದಿನ ವರ್ಷಕ್ಕೆ ಗೊಂಬೆಗಳನ್ನು ಪ್ಯಾಕ್ ಮಾಡಿ ಜಾಗ್ರತೆಯಿಂದ ಎತ್ತಿ ಇಡಲಾಗುತ್ತದೆ.



# ಸೆಪ್ಟೆಂಬರ್ 2025 ತಿಂಗಳ ರಾಶಿ ಫಲಗಳು

ಶ್ರೀಮಾತಾ ಅನುಗ್ರಹ



**ಮೇಷ**

ವಿರೋಧಿಗಳ ಮೇಲೆ ಜಯ ಸಾಧಿಸುವಿರಿ. ಕೈಗೊಂಡ ಕೆಲಸ ಕಾರ್ಯಗಳು ನೆರವೇರುತ್ತವೆ. ಮನೆಗೆ ಹೊಸ ವಸ್ತುವನ್ನು ಕೊಂಡು ತರುವಿರಿ. ಮೇಲಧಿಕಾರಿಗಳಿಂದ ಸಹಕಾರ ಸಿಗುವುದರಿಂದ ಬಡ್ತಿಯೂ ದೊರೆಯುವುದು. ಮಕ್ಕಳೊಂದಿಗೆ ಸಂತೋಷವಾಗಿ ಸಮಯ ಕಳೆಯುವಿರಿ.

**ವೃಷಭ**

ಆರೋಗ್ಯದಲ್ಲಿ ಅಭಿವೃದ್ಧಿಯುಂಟಾಗುತ್ತದೆ. ಋಣಬಾಧೆಯಿಂದ ಮುಕ್ತಿ ಹೊಂದುವಿರಿ. ಬೇರೆಯವರ ಬಗ್ಗೆ ತಲೆಕೆಡಿಸಿಕೊಳ್ಳದೆ ನಿಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವಿರಿ. ಆಕಸ್ಮಿಕ ಧನಲಾಭವಾಗುವುದು. ಹೊಸ ವಾಹನ ಕೊಂಡುಕೊಳ್ಳುವಿರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ.

**ಮಿಥುನ**

ಧನಾಗಮನ ಆಗುತ್ತಲೇ ಇರುವುದು. ನೂತನ ವಸ್ತ್ರಾಭರಣ ಕೊಂಡುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸ. ಹೊಸ ಗೆಳೆಯರು ಸಿಗುವರು. ವ್ಯಾಪಾರ ನಿಮಿತ್ತವಾಗಿ ಪ್ರಯಾಣ ಮಾಡಿ ಚೆನ್ನಾಗಿ ಸಂಪಾದಿಸುವಿರಿ.

**ಕರ್ಕಾಟಕ**

ನೀವು ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡಿ ಸಾಧಿಸುವಿರಿ. ಸರ್ಕಾರದಿಂದ ಸಹಾಯ ಸಿಗುತ್ತದೆ. ರಿಯಲ್ ಎಸ್ಟೇಟನಿಂದ ಲಾಭ ಪಡೆಯುವಿರಿ. ಅವಿವಾಹಿತರಿಗೆ ವಿವಾಹ ಭಾಗ್ಯ. ದ್ರವಧಾರ್ಥಗಳ ಮಾರಾಟದಲ್ಲಿ ಲಾಭವಿರುವುದು.

**ಸಿಂಹ**

ಸ್ನೇಹಿತರ ಸಹಕಾರವಿರುವುದು. ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವಿರಿ. ಸುಗಂಧದ್ರವ್ಯ ಮಾರಾಟದಿಂದ ಲಾಭವಿರುವುದು. ವಿದ್ಯೆಯಲ್ಲಿ ಪ್ರಗತಿ. ಸಂತಾನಾಪೇಕ್ಷಿಗಳಿಗೆ ಸಂತಾನಭಾಗ್ಯ. ಅವಿವಾಹಿತರಿಗೆ ವಿವಾಹ ಯೋಗವಾಗುವುದು. ಸರ್ಕಾರದ ಕೆಲಸ ಕಾರ್ಯಗಳಲ್ಲಿ ಜಯ ಕಾಣುವಿರಿ.

**ಕನ್ಯ**

ಧನ ಸಂಗ್ರಹ ನಾನಾ ರೀತಿಗಳಲ್ಲಿ ಆಗುವುದು. ಆದರೆ ಎಚ್ಚರವಿರಲಿ. ಕೈಹಾಕಿದ ಕೆಲಸಗಳು ಕೈಗೂಡುವುವು. ಮಿತ್ರರಿಂದ ಸಹಕಾರ ಸಿಗುವುದು. ಲಲಿತಕಲೆಗಳಲ್ಲಿ ಆಸಕ್ತಿಯುಂಟಾಗುವುದು. ಮೊದಲು ಯಾವುದೇ ಕೆಲಸವನ್ನಾಗಲೀ ಮುನ್ನುಗ್ಗಿ ಮಾಡಿ. ಮಾತಿನಲ್ಲಿ ನಯವಿರಲಿ.

**ತುಲಾ**

ಆದಾಯಕ್ಕೆ ಅನೇಕ ದಾರಿ ಕಾಣುತ್ತದೆ. ಸ್ನೇಹಿತರಿಂದ ಅನುಕೂಲ. ನಿಮ್ಮ ಪ್ರಯತ್ನದಿಂದ ಎಲ್ಲ ಕೆಲಸ ಕಾರ್ಯಗಳಲ್ಲೂ ಜಯ ಕಾಣುವಿರಿ. ಒಳ್ಳೆಯ ಆಹಾರ ಸೇವಿಸುವಿರಿ. ಆಕರ್ಷಕ ವ್ಯಕ್ತಿತ್ವ ನಿಮ್ಮದಾಗುವುದು. ಸರ್ಕಾರದಿಂದ ಸಹಾಯ ಸಿಗುವುದು. ಮಂಗಳ ಕಾರ್ಯಗಳಾಗುವುವು.

**ವೃಶ್ಚಿಕ**

ನೂತನ ವಸ್ತ್ರಾಭರಣ ಕೊಳ್ಳುವಿರಿ. ಆರೋಗ್ಯ ವೃದ್ಧಿಸುವುದು. ನೀವು ಅಂದುಕೊಂಡದ್ದಕ್ಕಿಂತ ಹೆಚ್ಚಿನದನ್ನೇ ಪಡೆಯುವಿರಿ. ವಿದ್ಯಾಭ್ಯಾಸದಲ್ಲಿ ಅಭ್ಯುದಯ. ತಂದೆಗೆ ಅನುಕೂಲಕರ. ಪ್ರಾಚೀನ ವಿಜ್ಞಾನವನ್ನು ಕಲಿಯುವ ಆಸಕ್ತಿ ಹೆಚ್ಚುತ್ತದೆ. ಯಾತ್ರೆ ಮಾಡುವಿರಿ.

**ಧನಸ್ಸು**

ಉದ್ಯೋಗದಲ್ಲಿ ಬಡ್ತಿಯುಂಟಾಗುವ ಸಂಭವವಿರುವುದು. ಹೊಸ ಉದ್ಯೋಗ ಸಿಗುವುದು. ಭೂಮಿಯಿಂದ ಲಾಭವಿರುವುದು. ಸಹೋದರರಿಂದ ಅನುಕೂಲ. ವ್ಯವಸಾಯದಿಂದ ಆದಾಯ. ಅವಿವಾಹಿತರಿಗೆ ಶುಭದಾಯಕ.

**ಮಕರ**

ಮಕ್ಕಳಿಂದ ಸಂತೋಷವುಂಟಾಗುತ್ತದೆ. ಶತೃಗಳು ಸೋಲುವರು. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವ ಸಾಧ್ಯತೆ ಇದೆ. ರಿಯಲ್ ಎಸ್ಟೇಟಿನಿಂದ ಲಾಭ. ಉನ್ನತಾಧಿಕಾರಿಗಳಿಂದ ಲಾಭವಿರುವುದು. ದಾನಧರ್ಮ ಮಾಡುವುದರಲ್ಲಿ ಮನುಷ್ಯವಾಲುವುದು. ಕ್ಲಿಷ್ಟ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುವಿರಿ.

**ಕುಂಭ**

ಮಗನಿಂದ ಸಂತೋಷ. ಆರ್ಥಿಕ ಅಭಿವೃದ್ಧಿ ಇರುತ್ತದೆ. ತೀರ್ಥಯಾತ್ರೆಗೆ ಹೋಗುವಿರಿ. ಭೂಮಿಯಿಂದ ಲಾಭವಿರುವುದು. ಕಷ್ಟಕರವಾದ ವಿಷಯವನ್ನೂ ಅರ್ಥಮಾಡಿಕೊಳ್ಳುವ ಮನಸ್ಸು ನಿಮ್ಮದಾಗುತ್ತದೆ. ಉದ್ಯೋಗದಲ್ಲಿ ಸ್ಥಾನಮಾನ ಲಭಿಸುತ್ತದೆ. ಕೈಗೊಂಡ ಕಾರ್ಯಗಳು ಫಲಿಸುತ್ತವೆ.

**ಮೀನ**

ಮಕ್ಕಳನ್ನು ತುಂಬಾ ಪ್ರೀತಿಸುವಿರಿ. ಭೋಗವಸ್ತುಗಳನ್ನು ಕೊಳ್ಳುವಿರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ. ಸಮಾಜದ ಉನ್ನತ ವರ್ಗದವರೊಂದಿಗೆ ಸ್ನೇಹವಾಗಿ ನಿಮ್ಮ ಸ್ಥಿತಿಯೂ ಮೇಲೇರುತ್ತದೆ. ಒಳ್ಳೆಯ ಆಹಾರ ಸೇವಿಸುವಿರಿ. ಮಾನಸಿಕ ನೆಮ್ಮದಿ ಇರುತ್ತದೆ. ಬರವಣಿಗೆ ಹಾಗೂ ಸಂಗೀತ ಕ್ಷೇತ್ರದಲ್ಲಿರುವವರಿಗೆ ಶುಭದಾಯಕ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

- ಡಾ|| ಅನಸೂಯ ಎಸ್. ರಾಜೀವ್

**1. ಅಶ್ವತ್ಥ ಪ್ರದಕ್ಷಿಣೆಯಿಂದ ಶನಿದೋಷ ಪರಿಹಾರ ವೆನ್ನಲು ಕಾರಣವೇನು?**

**ಉತ್ತರ :** ಹಿಂದೆ ದಕ್ಷಿಣದಿಕ್ಕಿನಲ್ಲಿ ಕೈಟಭಾಸುರನ ಮಕ್ಕಳಾದ ಅಶ್ವತ್ಥ ಮತ್ತು ಪಿಪ್ಪಲ ಎಂಬ ದಾನವರು ಕಾಡಿನಲ್ಲಿ ವಾಸವಾಗಿ ಬಗೆಬಗೆಯ ರೂಪಧರಿಸಿ ಅನೇಕ ಜನರನ್ನು ವಂಚಿಸಿ ನಂಬಿಸಿ ಅವರನ್ನು ಭಕ್ಷಿಸುತ್ತಿದ್ದರು. ಮುಗ್ಧ ಜನರು ಇವರ ಓಡಾಡುವ ಸ್ಥಳಗಳ ಹತ್ತಿರ ಅಶ್ವತ್ಥನೆಂಬ ದೈತ್ಯ ರಾಕ್ಷಸನು ಅಶ್ವತ್ಥವೃಕ್ಷದ ರೀತಿ ರೂಪ ಧರಿಸುತ್ತಿದ್ದನು. ಏನೂ ತಿಳಿಯದ ಮುಗ್ಧ ಜನರು, ಆ ವೃಕ್ಷವನ್ನು ಸುತ್ತು ಹಾಕಿ ಪೂಜಿಸಲು ಹೋಗುತ್ತಿದ್ದರು. ತಕ್ಷಣ ಜನರನ್ನು ಹಿಡಿದು ತಿನ್ನುತ್ತಿದ್ದನು. ಅದೇ ರೀತಿ ಪಿಪ್ಪಲಾಸುರನೂ ವಿಷ್ಣು ವೇಷ ಧರಿಸಿ ವೇದಾಧ್ಯಯನ ಮಾಡುವ ನಟನೆ ಮಾಡುತ್ತಾ ಕುಳಿತಿರುತ್ತಿದ್ದನು. ವೇದಾಧ್ಯಯನಕ್ಕಾಗಿ ಬರುವ ಶಿಷ್ಯರನ್ನೆಲ್ಲ ಹೊಡೆದು ಬಡೆದು, ತಿಂದು ಹಾಕುತ್ತಿದ್ದರು. ಇದರಿಂದ ಅನೇಕ ಜನರು ಪ್ರಾಣ ಕಳೆದುಕೊಂಡು ಈ ದೈತ್ಯ ರಾಕ್ಷಸರಿಗೆ ಆಹಾರವಾಗುತ್ತಿದ್ದರು. ಈ ರೀತಿ ಮುಗ್ಧರು ಕಾಣೆಯಾಗುತ್ತಿರುವುದು ಕೆಲವೇ ದಿನಗಳಲ್ಲಿ ಮಹಾಜ್ಞಾನಿಗಳಾದ ಋಷಿಮುನಿಗಳಿಗೆ ತಿಳಿಯಿತು. ಇದರ ಪರಿಹಾರಕ್ಕಾಗಿ ವ್ಯಕ್ತಿಯನ್ನು ಹುಡುಕುತ್ತಿದ್ದರು. ಗೌತಮೀ ನದಿಯ ದಕ್ಷಿಣತೀರದಲ್ಲಿ ಶನಿಯು ತಪಸ್ಸನ್ನು ಮಾಡುತ್ತಿದ್ದನು. ಮಹರ್ಷಿಗಳು ಶನಿಯನ್ನು ಭೇಟಿಯಾಗಿ. ಅಶ್ವತ್ಥ ಮತ್ತು ಪಿಪ್ಪಲಾಸುರರ ಕೃತ್ಯವನ್ನು ವಿವರಿಸಿ ಹೇಳಿ ಅವರಿಂದ ಮುಗ್ಧ ಜನರ ಹತ್ಯೆಯನ್ನು ತಪ್ಪಿಸಲು ಕೇಳಿಕೊಂಡರು. ಆ ಶನಿಯು ವಿಪ್ರೋತ್ತಮರೇ ನಾನು ತಪೋನುಷ್ಠಾನು ಪೂರ್ತಿಗೊಳಿಸಿಲ್ಲ. ತಪಸ್ಸಾಮರ್ಥ್ಯ ಪೂರ್ತಿ ಪಡೆಯದೆ ನಾನು ಹೇಗೆ ರಾಕ್ಷಸರನ್ನು ಸಂಹರಿಸಲಿ! ನನ್ನ ತಪಸ್ಸು ಪೂರ್ಣವಾದ ಬಳಿಕ ನಿಮಗೆ ಸಹಾಯ ಮಾಡುತ್ತೇನೆ. ದಯವಿಟ್ಟು ಕ್ಷಮಿಸಿ ಎಂದನು. ಸೂರ್ಯಪುತ್ರನೇ, ಈಗಾಗಲೇ ಆ ದುಷ್ಟರು ಅನೇಕ ಜನರನ್ನು ಭಕ್ಷಿಸಿದ್ದಾರೆ. ಇನ್ನು ನಿನ್ನ ತಪಸ್ಸು ಪೂರ್ಣವಾಗುವುದರೊಳಗೆ ಭೂಮಿಯ ಮೇಲಿರುವ ಇನ್ನೆಷ್ಟು ಜನ ಬಲಿಯಾಗುತ್ತಾರೋ! ನಿನ್ನ ಶಕ್ತಿಗಾಗಿ ನೀನು ಚಿಂತಿಸಬೇಡ. ನಾವು ಗಳಿಸಿದ ತಪಶ್ಶಕ್ತಿಯನ್ನು ನಿನಗೆ ಧಾರೆಯೆರೆದು ಕೊಡುತ್ತೇವೆ. ನೀನು ನಮ್ಮ ತಪಶ್ಶಕ್ತಿಯಿಂದ ಈಗಲೇ ಆ ದೈತ್ಯ ರಾಕ್ಷಸರನ್ನು ಸಂಹರಿಸೆಂದು ಕೇಳಿಕೊಂಡರು. ಶನಿಯು ಮುನಿಗಳ ಪ್ರಾರ್ಥನೆಗೆ ಮನ್ನಿಸಿ ತಕ್ಷಣ ಕಾರ್ಯೋನ್ಮುಖರಾಗಿ ವಿಪ್ರನ ವೇಷಧರಿಸಿ, ಅಶ್ವತ್ಥಮರದ ರೂಪದಲ್ಲಿದ್ದ ರಾಕ್ಷಸನ ಹತ್ತಿರ ಬಂದು ಭಕ್ತಿ ಭಾವದ ನಾಟಕವಾಡುತ್ತಾ ಆ ಮರವನ್ನು ಪ್ರದಕ್ಷಿಣೆ ಹಾಕುತ್ತಿದ್ದರು. ಶನಿಯೆಂದು ತಿಳಿಯದ ಅಶ್ವತ್ಥ ರಾಕ್ಷಸ ಶನಿಯನ್ನು ಹಿಡಿದು ಕ್ಷಣ ಮಾತ್ರದಲ್ಲಿ ನುಂಗಿಬಿಟ್ಟನು. ಆ ರಾಕ್ಷಸನ ಹೊಟ್ಟೆ ಸೇರಿದ ಶನಿಯು ತನ್ನ ತೀಕ್ಷ್ಣ ಕ್ರೂರ ದೃಷ್ಟಿಯನ್ನು ಬೀರಿ ಹೊಟ್ಟೆಯಲ್ಲಿರುವ ಕರುಳು,ಅಸ್ಥಿ, ಮಾಂಸ ಖಂಡಗಳನ್ನು ಸುಟ್ಟು ಹಾಕಿದನು. ಕ್ಷಣ ಮಾತ್ರದಲ್ಲಿ ಆ ರಾಕ್ಷಸ ಭಸ್ಮವಾಗಿ ನೆಲಕ್ಕೆ ಬಿದ್ದ.

ಅನಂತರ ಪಿಪ್ಪಲಾಸುರನ ಹತ್ತಿರ ಶನಿಯು ವಟುವಿನ ರೂಪದಲ್ಲಿ ಬಂದು ವೇದಾಧ್ಯಯನ ಕಲಿಸುವಂತೆ ಕೇಳಿದನು. ಆ ದುಷ್ಟಪಂಡಿತ, ಶನಿಯನ್ನು ನುಂಗಿಹಾಕಿದನು. ಆದರೆ ಶನಿಯು ಕ್ಷಣದಲ್ಲಿ ತನ್ನ ಕ್ರೂರ ತೀಕ್ಷ್ಣ ದೃಷ್ಟಿಯನ್ನು ಪಿಪ್ಪಲನ ಹೊಟ್ಟೆಯ ಮೇಲೆ ಬೀರಿದ. ಕ್ಷಣಮಾತ್ರದಲ್ಲಿ ಅವನ ಕರುಳು. ಮೂಳೆ ಸುಟ್ಟು ಭಸ್ಮವಾಯಿತು.

ಶನಿಯು ಈ ಇಬ್ಬರ ಪ್ರಾಣ ತೆಗೆದು ಮುಗ್ಧ ಜನರ ಪ್ರಾಣ ಉಳಿಸಿದ್ದರಿಂದ ಮುನಿಗಳಿಗೆ ಬಹಳ ಸಂತೋಷವಾಗಿ ಶನಿಯನ್ನು ಕೊಂಡಾಡಿ **"ನೀನು ಬೇಕಾದ ವರಗಳನ್ನು ಕೇಳು, ಎಂದರು. ಶನಿಯು ಮುಂದೆ ನನ್ನ ವಾರವಾದ ಶನಿವಾರಗಳಲ್ಲಿ ಯಾರು ನಿಜವಾದ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕುವರೋ ಅವರ ಮನೋರಥಗಳು ಪೂರ್ಣವಾಗಲಿ. ಎಲ್ಲಾ ಗ್ರಹಪೀಡೆ ಮತ್ತು ಶನಿಪೀಡೆ ನಿವಾರಣೆ ಆಗಬೇಕು"** ಎಂದು ವರವನ್ನು ಬೇಡಿದನು. ಮುನಿಗಳು ತಥಾಸ್ತು ಎಂದು ವರ ನೀಡಿದರು. ಅಂದಿನಿಂದ ಶನಿವಾರಗಳಲ್ಲಿ ಈ ಅರಳೀ ಮರವನ್ನು ಪ್ರದಕ್ಷಿಣೆ ಮಾಡುವವರಿಗೆ ಶನಿಯಿಂದ ಯಾವ ಪೀಡೆ, ಭೀತಿ ಇಲ್ಲದಂತೆ ಆಯಿತು.

ನೀತಿಕಥೆ

# ಸತ್ಕಾರ್ಯ, ಉತ್ತಮ ಚಿಂತನೆ ಮಾಡುವವನಿಗೆ ಸುಖ ನಿದ್ದೆ ಖಚಿತ

– ಎ.ಆರ್. ರಘುರಾಮ
99161 38436

ಎಲ್ಲರೂ ರಾತ್ರಿ ವೇಳೆ ಸುಖ ನಿದ್ದೆಗೆ ಜಾರುತ್ತಾರೆ. ಆದರೆ ನನಗೆ ರಾತ್ರಿ ಏಕೋ ನಿದ್ದೆ ಬಾರದು. ಏನು ಮಾಡಲಿ? ವಿದುರನಿಗೆ ಧೃತರಾಷ್ಟ್ರ ಕೇಳಿದ. ನನಗೆ ರಾಜ್ಯವಿದೆ, ಐಶ್ವರ್ಯ ಇದೆ. ಕೋಶ, ಸಿಂಹಾಸನ, ರಾಣಿಯರು, ಸಂತಾನ, ರಾಜ್ಯಭಾರ ಎಲ್ಲವೂ ಇದೆ. ಆದರೂ ಏಕೆ ರಾತ್ರಿ ನಿದ್ದೆ ಬಾರದು. ಪರಿಹಾರ ಹೇಳುವೆಯಾ? ವಿದುರ ಆಗ ಹೇಳಿದ - ಹಗಲು ಹೊತ್ತಿನಲ್ಲಿ ನಾವು ಶ್ರೇಷ್ಠ ಕಾಯಕ ಮಾಡಿದರೆ ಕತ್ತಲಾದ ಮೇಲೆ ನಿರುಮ್ಮಳವಾಗಿ ನಿದ್ದೆ ಬರುತ್ತದೆ. ನೀನು ಏನಾದರೂ ಕೆಟ್ಟ ಕೆಲಸ, ಯಾರಲ್ಲಾದರೂ ದ್ವೇಷ ಮಾಡಿರುವೆಯಾ? **'ಭೀಮಾ'** ಎಂಬ ಉತ್ತರ ಬಂದಿತು. ಸಭೆಯಲ್ಲಿ ದ್ರೌಪದಿಯ ಅಪಮಾನಕ್ಕೆ ಯತ್ನ ಮಾಡಿದ ಸಂದರ್ಭ ಹೇಗೆ ತಾನೇ ಬಂದೀತು? ದುರ್ಯೋಧನ-ದುಶ್ಶಾಸನರ ಎದೆ ಬಗೆದು ರಕ್ತದ ತರ್ಪಣ ನೀಡುವೆ ಎಂದು ಭೀಮ ಶಪಥ ಮಾಡಿದ. ಅದನ್ನು ನೆನಪಿಸಿಕೊಂಡರೆ ನನಗೆ ಈಗಲೂ ಭಯವಾಗುತ್ತದೆ. ನನ್ನ ಧೀರ ಮಕ್ಕಳ ದುರಂತ ಸಾವಿನ ಚಿತ್ರ ಎದುರಿಗೆ ಬರುತ್ತದೆ ಎಂದ. ಮಕ್ಕಳು ಎಂಬ ಕುರುಡು ಪ್ರೀತಿಯಿಂದ ಇಷ್ಟೆಲ್ಲಾ ಕೆಲಸ ಮಾಡಲು ಅವಕಾಶ ನೀಡಿದ ಮೇಲೆ ಆತನಿಗೆ ನಿದ್ದೆ ಹೇಗೆ ಬಂದೀತು?

ರಾಮಾಯಣ ಕಾಲದಲ್ಲಿ ರಾವಣನು ವಿಭೀಷಣನಿಗೆ ಇದೇ ರೀತಿ ಪ್ರಶ್ನೆ ಮಾಡಿದ್ದ ನನಗೆ ರಾತ್ರಿ ನಿದ್ದೆ ಬರುವಂತೆ ಮಾಡಲು ಏನು ಮಾಡಬೇಕು? ಉತ್ತರ ಹೀಗಿತ್ತು. ಸೀತಾದೇವಿಯನ್ನು ರಾಮನಿಗೆ ಒಪ್ಪಿಸು. ತಪ್ಪಿಗೆ ಕ್ಷಮೆ ಕೇಳು. ಆಗ ರಾತ್ರಿ ನಿನಗೆ ಸುಖವಾಗಿ ನಿದ್ದೆ ಬರುತ್ತದೆ ಎಂದು ವಿಭೀಷಣ ಸಲಹೆ ನೀಡಿದ್ದ. ರಾವಣನಿಗೆ ನಿದ್ದೆಯೂ ಬರಲಿಲ್ಲ. ಮಗನೂ ಬದುಕಲಿಲ್ಲ. ದುರದ್ದೇಶ ಪೂರ್ವಕವಾಗಿ ವಿಜಯವೂ ಸಿಗಲಿಲ್ಲ. ಅವನೂ ಬದುಕಲಿಲ್ಲ. ಮಾಡಿದ, ಮಾಡಿಸುವ ಪಾಪ ಮತ್ತು ಕೆಟ್ಟ ಕೆಲಸಗಳು ಚಿಕ್ಕವೇ ಇರಲಿ, ದೊಡ್ಡವೇ ಇರಲಿ, ಅದು ಎಲ್ಲರಿಗೂ ಜೀವ ಹಿಂಡುವುದು



ಖಚಿತ. ರಾಜ ನಿರಲಿ, ಕೂಲಿ ಕೆಲಸದವನೇ ಇರಲಿ. ಮಹಾಸಾಮ್ರಾಟನೇ ಇರಲಿ ಬೀದಿ ಕಸಗುಡಿಸುವವನೇ ಇರಲಿ ಕೆಟ್ಟ ಕಾರ್ಯ ಮಾಡಿದ್ದರೆ ಅದು ಅವರ ನಿತ್ಯದ ಸುಖ ನಿದ್ದೆಯನ್ನೇ ಕಸಿದು ಬಿಡುವುದು ಖಚಿತ.

ಪತಿ-ಪತ್ನಿ ಜಗಳ, ಅಣ್ಣ - ತಮ್ಮಂದಿರ ವ್ಯಾಜ್ಯ, ಪಾಲಕರು - ಮಕ್ಕಳ ಕಿತ್ತಾಟ ಆಸ್ತಿ - ಅಂತಸ್ತು, ಹಿರಿಯರು ಕೂಡಿಟ್ಟ ಧನ-ಹೆಣ್ಣು ಮಕ್ಕಳಿಗೆ ಮಾಡುವ ಅಪಮಾನ-ಕಣ್ಣೀರು ಹಾಕಿಸುವುದು, ಹೀಗೆ ನಮ್ಮ ಜೀವನದ ಅನೇಕ ಪ್ರಸಂಗ ಗಮನಿಸಿದರೂ ಅದಕ್ಕೆ ಕಾರಣರಾದವ ನಿದ್ದೆ ಕೆಡುವುದು ಅವರವರಿಗೇ ಗೊತ್ತಿರುತ್ತದೆ. ತಿಳಿವಳಿಕೆ ಬಂದ ನಂತರ ನಾವು ಗಳಿಸುವ ಹಣ, ಸಂಪತ್ತು, ಅಧಿಕಾರ ಹಿರಿತನ ಇತ್ಯಾದಿಗಳ ನಿರ್ವಹಣೆ ಸಂದರ್ಭ ಶುದ್ಧತೆ ಪಾಲನೆಗೆ ಮೊದಲ ಗಮನ ಇರಬೇಕು. ಆಗ ತಿಂದ ಆಹಾರ ಸರಿಯಾಗಿ ಜೀರ್ಣವಾಗುತ್ತದೆ. ರಾತ್ರಿ ಕಣ್ ತುಂಬಾ ನಿದ್ದೆ ಬರುತ್ತದೆ. ಹಾಗಾಗಿ ನಿತ್ಯವೂ ನಾವು ಒಂದು ಒಳ್ಳೆ ಕೆಲಸ ಮಾಡೋಣ.

## ವೃಕ್ಷೋ ರಕ್ಷತಿ ರಕ್ಷಿತಃ

**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.




ಬಣ್ಣವನ್ನು ತುಂಬಿರಿ.



## ಮಾರ್ಗ ಅನ್ವೇಷಣೆ

ಮಕ್ಕಳೇ, ಹುಡುಗಿಯು ಆ ಗೊಂಬೆಯನ್ನು ಸೇರಲು ಯಾವ ಹಾದಿಯಲ್ಲಿ ಹೋದರೆ ಸೇರಬಹುದು ಎಂದು ಕಂಡು ಹಿಡಿಯಿರಿ ನೋಡೋಣ !





ಈ ಚಿತ್ರವನ್ನು

ಗಮನಿಸಿ

ವರಸೆಯಾಗಿ ಬರೆಯಿರಿ

ಓಣಂ ಹಾಗೂ ನವರಾತ್ರಿ ಹಬ್ಬದ ಚಿತ್ರವನ್ನು ಒಂದು ವರಸೆಯಾಗಿ ಇಡಿ ನೋಡೋಣ ಮಕ್ಕಳೆ

ಉತ್ತರ: 2,6,1,4,5,8,7,3

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01. ವಾರಿ ಎಂದರೆ ಏನು?..........
02. ಕಲಿಯುಗದಲ್ಲಿ ದೇವರನ್ನು ಏನೆಂದು ಕರೆಯುವರು? ..........
03. ಆದಿಕೇಶವನು ಯಾರ ದೈವ ಭಕ್ತನಾಗಿದ್ದ?..........
04. ವಿಜಯವಾಟ ಅಂದರೆ ಏನು ಅರ್ಥ? ..........
05. ಶ್ರೀ ಲಕ್ಷ್ಮಿವೆಂಕಟೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿವರ್ಷ ಯಾವ ತಿಂಗಳಿನಲ್ಲಿ ನಡೆಯುತ್ತದೆ? ..........
06. ಶ್ರೀ ಅನಂತಪದ್ಮನಾಭಸ್ವಾಮಿಯ ವಿವರಣೆ ಯನ್ನು ಯಾವ ಪುರಾಣದಲ್ಲಿ ಅಂತರ್ಗತವಾಗಿದೆ? ..........
07. ವಿಷ್ಣುವು ಯಾವ ಪ್ರಿಯದೇವರೆಂದು ಕರೆಯುತ್ತಾರೆ?..........
08. ಭಾದ್ರಪದ ಮಾಸದ ನಿಯಾಮಕ ಪರಮಾತ್ಮ ಯಾರು? ..........
09. ನಮ್ಮ ಆರೋಗ್ಯ ಸಂರಕ್ಷಣೆಯಲ್ಲಿ ಅತ್ಯಂತ ಪ್ರಾಧಾನ್ಯತೆ ಹಾಗೂ ಅತಿ ಮುಖ್ಯ ಅವಯವ ಯಾವುದು? ..........
10. ತಿರುಮಲೆ ಬೆಟ್ಟವನ್ನು ಕಲಿಯುಗದಲ್ಲಿ ಏನೆಂದು ಕರೆಯುತ್ತಾರೆ?..........
11. ತಿರುವೇಂಗಡದ ಒಡೆಯನು ಯಾರ ರೂಪ? ..........
12. ತಿರುಮಲೆಯಲ್ಲಿ ಪ್ರಾತಃ ಕಾಲದಲ್ಲಿ ಯಾವ ಸೇವೆ ನಡೆಯುತ್ತದೆ?..........
13. ದಸರಾ ಹಬ್ಬವು ಯಾವ ಊರಿನಲ್ಲಿ ಪ್ರಸಿದ್ಧವಾದುದು? ..........
14. ಯಾರು ಸಭೆಯಲ್ಲಿ ಪ್ರತಿಜ್ಞೆ ಮಾಡಿದರು?..........
15. ಉಪಮನ್ಯು ಯಾರ ಶಿಷ್ಯ?..........

**38 ಕ್ವಿಜ್**

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ವಿದ್ಯೆಗೆ ಅಧಿದೇವತೆ ಯಾರು?

ಸರಸ್ವತೀದೇವಿಯ ಪತಿ ಯಾರು?

ಸರಸ್ವತೀದೇವಿಯ ವಾಹನ ಯಾವುದು?

ಸರಸ್ವತೀ ಕೈಯಲ್ಲಿ ಯಾವ ವಾದ್ಯವು ಇರುತ್ತದೆ?

ಸರಸ್ವತೀ ದೇವಿಗೆ ಇಷ್ಟವಾದ ಬಣ್ಣ ಯಾವುದು?

ವೀಣಾಪಾಣಿ ಎಂದು ಯಾರನ್ನು ಕರೆಯುತ್ತಾರೆ?

ಸರಸ್ವತೀ ದೇವಿಯ ಕೈಯಲ್ಲಿ ಏನು ಇದೆ?

ನವರಾತ್ರಿ ನಾಯಕಿಯರು ಯಾರು?



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

1) ಸರಸ್ವತಿ ದೇವಿ 2) ಬ್ರಹ್ಮ 3) ಹಂಸ 4) ವೀಣೆ 5) ಬಿಳಿ 6) ಸರಸ್ವತಿದೇವಿ

7) ಜಪ ಮಾಲೆ ಮತ್ತು ವೇದಗಳು 8) ಲಕ್ಷ್ಮೀ, ಸರಸ್ವತಿ, ಪಾರ್ವತಿ

ಮಕ್ಕಳೇ! ಈ ಚಿತ್ರದಲ್ಲಿರುವ ಕಪ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ತಟ್ಟೆಯಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!

| | |
|---|---|
| 1 | 25-4 |
| 2 | 16+6 |
| 3 | 28-13 |
| 4 | 60-40 |
| 5 | 15+10 |




1) i 2) iii 3) v 4) ii 5) vi



ಮಕ್ಕಳೇ ಚೆನ್ನಾಗಿದ್ದೀರಾ ನಾನು ಪಕ್ಷಿರಾಜ ನಾನು ಬಹಳ ಎತ್ತರವಾಗಿ ಹಾರುತ್ತೇನೆ. ನಾನು ಸ್ವಾಮಿಯ ವಾಹನಾಗಿ ಇರುತ್ತೇನೆ.ನಾನು ಯಾರು ಎಂದು ಹೇಳಿ ನೋಡೋಣ!

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!

ಗರುಡ

**ಚಿತ್ರಕಥೆ**

# ಗುರುಗಳು ಕಠಿಣವಾಗಿದ್ದರೂ ಸಹ


ಕಥೆ : ತೆಲುಗು ಮೂಲ : ಕಳಾರತ್ನ ಡಾ ಕೆ.ರವಿಚಂದ್ರನ್

ಅನುವಾದ : ಆರ್.ಕೆ.ವಿ.

ಚಿತ್ರಗಳು : ಟ.ಶಿವಾಜಿ





ಕುಮಾರಾ! ಹಸುಗಳು ದಯಾಳುಗಳು, ಕರುಗಳು ಸಹ ತುಂಬಾ ಸೌಮ್ಯವಾಗಿರುತ್ತವೆ ಅದಕ್ಕಾಗಿಯೇ ಆ ಕರುಗಳು ನೀನು ಹಸಿವನ್ನು ನೀಗಿಸಿಕೊಳ್ಳುತ್ತಿರುವೆ ಎಂದು ಭಾವಿಸಿ ತಮ್ಮ ವೇಗವನ್ನು ಹೆಚ್ಚಿಸಿ ನಿನಗಾಗಿ ಹೆಚ್ಚು ನೊರೆ ಬಿಡಬಹುದು ಆದ್ದರಿಂದ ನೀನು ಹಾಗೆ ಆ ನೊರೆಯನ್ನು ಕುಡಿಯುವುದು ಒಳ್ಳೆಯದಲ್ಲ.
ತುಂಬಾ ತಡವಾಗುತ್ತಿದೆ, ಕತ್ತಲಾಗುತ್ತಿದೆ ಹಸುಗಳು ಬಂದಿವೆ, ಆದರೆ ಉಪಮನ್ಯು ಬಂದಿಲ್ಲವಲ್ಲ?
ಗುರುವು ಉಪಮನ್ಯುವನ್ನು ಹುಡುಕಿಕೊಂಡು ಹೋದರು.
ಕುಮಾರಾ! ಉಪಮನ್ಯು..... ಉಪಮನ್ಯು....
ಗುರುದೇವಾ! ಇಲ್ಲಿ ಸ್ವಾಮಿ! ಇಲ್ಲೇ ... ಈ ಆಳವಾದ ಬಾವಿಯಲ್ಲಿ
ಉಪಮನ್ಯು! ಇಷ್ಟೊಂದು ದುಷ್ಕೃತ್ಯ ಹೇಗೆ ಸಂಭವಿಸಿತು?
ಗುರುದೇವಾ ! ನೀವು ನೊರೆಯನ್ನು ಸ್ವೀಕರಿಸಬೇಡ ವೆಂದಾಗಿನಿಂದ ನಾನು ಉಪವಾಸ ಮಾಡುತ್ತಿದ್ದೇನೆ. ನಾನು ಹಗಲಿನಲ್ಲಿ ಹಸುಗಳನ್ನು ಮೇಯಿಸಿ ಸಂಜೆ ಆಶ್ರಮವನ್ನು ತಲುಪುತ್ತಿದ್ದೆ. ಕೆಲವು ದಿನಗಳು ಕಳೆದವು. ಹಸಿವಿನ ನೋವನ್ನು ಸಹಿಸಲಾಗದೆ, ನಾನು ಅರ್ಕ ಎಲೆಗಳನ್ನು ತಿಂದೆ ಆ ವಿಷಕಾರಿ ಎಲೆಗಳನ್ನು ತಿಂದಾಗ ನನ್ನ ಇಡೀ ದೇಹವು ವಿಷಪೂರಿತವಾಯಿತು ಮತ್ತು ನನ್ನ ಕಣ್ಣುಗಳು ಕುರುಡಾದವು. ಆದರೆ ಹಸುಗಳು ನಡೆಯುವಾಗ ನಾನು ಅವುಗಳ ಹೆಜ್ಜೆಗಳನ್ನು ಅನುಸರಿಸುತ್ತಾ ಅವುಗಳನ್ನು ಅನುಸರಿಸುತ್ತಿದ್ದೆ ಇಂದು ನಾನು ಆಕಸ್ಮಿಕವಾಗಿ ಈ ಆಳವಾದ ಬಾವಿಯಲ್ಲಿ ಜಾರಿ ಬಿದ್ದೆ ಎಲ್ಲಾ ಹಸುಗಳು ಸುರಕ್ಷಿತವಾಗಿ ಆಶ್ರಮವನ್ನು ತಲುಪಿವೆಯೇ ಎಂದು ನನಗೆ ಚಿಂತೆಯಾಗಿದೆ, ಅಷ್ಟರಲ್ಲಿ ನೀವು ಬಂದಿದ್ದೀರಾ
ಕುಮಾರಾ! ಈಗ ನಿನಗೆ ಒಂದು ಮಂತ್ರವನ್ನು ಕಲಿಸುತ್ತೇನೆ ಅದರ ಪರಿಣಾಮದಿಂದ ಅಶ್ವಿನಿ ದೇವತೆಗಳನ್ನು ಮೆಚ್ಚಿಸಿ ಮತ್ತು ಅವರು ಕೊಡುವ ಹಾಲನ್ನು ಕುಡಿಯಿರಿ ಆಗ ನೀನು ಕಳೆದು ಹೋದ ದೃಷ್ಟಿ ಮರಳಿ ಬರುತ್ತದೆ.
ಉಪಮನ್ಯುವಿಗೆ ಅಶ್ವಿನಿದೇವತೆಗಳು ಪ್ರಸನ್ನವಾದರು
ಕುಮಾರಾ! ಈ ಹಾಲು ಸ್ವೀಕರಿಸು
ಓ ಅಶ್ವಿನಿ ದೇವತೆಗಳೇ! ನನ್ನ ಗುರುಗಳು ಸ್ವೀಕರಿಸದೆ ನಾನು ಸ್ವೀಕರಿಸುವುದಿಲ್ಲ.
ಉಪಮನ್ಯು ! ನಿನ್ನ ಗುರುಗಳ ಮೇಲಿನ ಭಕ್ತಿಗೆ ನಾವು ಕೃತಜ್ಞರಾಗಿದ್ದೇವೆ. ನಿನ್ನ ಕಣ್ಣುಗಳನ್ನು ಮತ್ತೆ ನೋಡಲು ಸಾಧ್ಯವಾಗುತ್ತಿದೆ.
ಕುಮಾರಾ! ನಾನು ನಿನಗೆ ಕೊಟ್ಟ ಪರೀಕ್ಷೆಗಳನ್ನೆಲ್ಲಾ ಗೆದ್ದಿರುವೆ. ನನಗೆ ತಿಳಿದಿರುವ ಎಲ್ಲಾ ವೇದಶಾಸ್ತ್ರಗಳನ್ನು ನಿನಗೆ ಕಲಿಸುತ್ತೇನೆ.
ನಿಮ್ಮ ಆಶೀರ್ವಾದ ಗುರುದೇವಾ! ನೀವು ನೋಡಲು ಕಠಿಣವಾಗಿ ಇದ್ದರೂ ನಿಮ್ಮ ಮನಸ್ಸು ಮೃದುವಾಗಿರುತ್ತೀರಿ ಎಂದು ನನಗೆ ತಿಳಿದಿದೆ, ಧನ್ಯೋಸ್ಮಿ

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



ಮೈಸೂರು ಮಹಾರಾಜ ಸಂಸ್ಥಾನದಲ್ಲಿ ದಸರಾ ಉತ್ಸವಗಳನ್ನು ವೈಭವವಾಗಿ ನಿರ್ವಹಿಸಿದ ದುರ್ಗ ಪೂಜೆಯ ಅಪರೂಪದ ಚಿತ್ರ. ಇದು 1934 -1945 ರ ಮಧ್ಯಕಾಲದಲ್ಲಿ ಅಂದಿನ ಚಿತ್ರಗಾರರಾದ ಶ್ರೀ ವೈ. ಸುಬ್ರಹ್ಮಣ್ಯರಾಜು ರವರ ವರ್ಣಚಿತ್ರವಿದು.

- ಆಧಾರ : ಮೈಸೂರು ಪ್ಯಾಲೆಸ್ ಬೋರ್ಡ್- 2007

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-08-2025 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/2024-2026" Posting on 1st of Every Month

